ನಮ್ಮ ಮಾನಸ

ಸಂಪುಟ : 6 ಆಗಸ್ಟ್ 2012 ಸಂಚಿಕೆ: 4 ಬೆಲೆ: 10/-



ನಮ್ಮ ಮಾನಸ

ಆಗಸ್ಟ್ 2012

ಸಂಪುಟ : 6 ಸಂಚಿಕೆ : 4

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 98804 67372 / 98869 18910

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	10–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

- ಸಂಪಾದಕೀಯ / 3
- "ಆವಾಂ" – *ಸೇತುಮಾಧವ ಎಂ.ವಿ / 5*
- ನನ್ನ ದೇಹ, ನನ್ನ ಹಕ್ಕು – *ನಿಹಾರಿಕ ಶೆಣೈ / 6*
- ಅವಳ ಅಸ್ತಿತ್ವ – *ಸರೋಜಾ ಸಂತಿ / 8*
- ಭಾಗೀರತಿ – *ಚರಿತಾ ವಿ. / 9*
- ಸ್ವಾತಂತ್ರ್ಯದ... ಹಾದಿ ಇನ್ನೇಷ್ಟು ದೂರ? – *ಸಮುದ್ಯತಾ ಕಂಜರ್ಪಣೆ / 10*
- ಕ್ಷಮಿಸು ಮಗು – *ಸರಸ್ವತಿ ಕೆ.ಬಿ. / 11*
- ಮೊದಲ ಅಧ್ಯಕ್ಷೆ – *ದಿಶಾ.ಕೆ.ಆರ್. / 11*
- ಪಿಂಕಿ ಪ್ರಮಾಣಿಕ್ : ಭಿನ್ನವಾಗಿರುವುದು ಅವಳ ತಪ್ಪೆ?–*ಮೂಲ: ಡಾ. ಪಯೋಶಿನಿ ಮಿತ್ರ ಕನ್ನಡಕ್ಕೆ : ವೆಂ. ವನಜ, ಮೈಸೂರು /12*
- ಆರಾಧನಾ ರಂಗದಲ್ಲೂ ಸಿಗದ ಸಮಾನತೆ – *ಬಿ.ಎಂ. ರೋಹಿಣಿ / 15*
- ದೇಶಿಯ ಚಿಂತನೆಗಳಲ್ಲಿ : ಸ್ತ್ರೀವಾದಿ ಪ್ರಜ್ಞೆ– *ಆಯ್. ಎಸ್. ಇಂಜಗನೇರಿ / 18*
- ತನ್ನ ಕನಸ ಬೆನ್ನತ್ತಿ ಕಾಣೆಯಾದ ವಿಮಾನಯಾನಿ – *ದಿಶಾ ಕೆ.ಆರ್. / 20*
- ಮಹಿಳೆಯರಿಗೆ ಸ್ವಾತಂತ್ರ್ಯವಿದೆಯೇ? – *ಶಾಲಿನಿ ಆರ್. / 21*
- ಹೆತ್ತವಳು – *ಪ್ರೊ. ಶಿವಾನಂದ ಬ. ಟವಳಿ / 23*
- ರೇಖೆ ಮತ್ತು ರೆಕ್ಕೆ – *ಶೀತಲಾ ಭಟ್ / 24*

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ ಮಾನಸವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. ಮಾನಸವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ◆ ಪ್ರತಿ ತಿಂಗಳಿಗೊಮ್ಮೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ◆ ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ◆ ಮಾನಸದ ಒಂದು ತಿಂಗಳ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com
Contact: Disha K.R.: 9880467372, Lekha: 9686757053,
Samudyatha : 88922 48351, Nirmala K.: 98869 18910

ಈ ಸಂಚಿಕೆಯನ್ನು ತರುವಲ್ಲಿ ನಮ್ಮೊಡನೆ ಕೈಜೋಡಿಸಿದವರು ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಪದ್ಮರೇಖ ಹಾಗೂ ಮಾನಸ ಬಳಗ

ಸಂಪಾದಕೀಯ

ಆಗಸ್ಟ್ 15ರ ಸ್ವಾತಂತ್ರ್ಯ ಮಹಿಳೆಯರಿಗೆ ಅರ್ಥಪೂರ್ಣವಾಗುವುದು ಯಾವಾಗ...?

ಆಗಸ್ಟ್ 15, 2012. ಸ್ವಾತಂತ್ರ್ಯದ ಬಾವುಟಗಳು ಎಲ್ಲೆಡೆ ಹಾರಾಡ ತೊಡಗುತ್ತಿವೆ. ಈಗಿರುವ ಹೊಸ ರಾಷ್ಟ್ರಾಧ್ಯಕ್ಷರ ಭಾಷಣ ಕೇಳಲು ಹಲವರು ಕುತೂಹಲದಿಂದ ಟಿ.ವಿ. ಮುಂದೆ ಪವಡಿಸುತ್ತಾರೆ. ಇಡೀ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುವ ರಾಷ್ಟ್ರಾಧ್ಯಕ್ಷರು ಬಡತನದ ಬಗ್ಗೆ, ಬಡತನದ ನಿರ್ಮೂಲನೆ ಬಗ್ಗೆ, ಅಭಿವೃದ್ಧಿ ಪಥದ ಬಗ್ಗೆ ಅಂಕಿ-ಅಂಶಗಳನ್ನು ಮಂಡಿಸುತ್ತಾರೆ. ಸ್ಕೂಲ್, ಕಾಲೇಜ್ ಮಕ್ಕಳು ಬಿಳಿ-ಬಿಳಿಯಾದ, ಗರಿ-ಗರಿಯಾದ ಸಮವಸ್ತ್ರ ಧರಿಸಿ, ಸ್ವಾತಂತ್ರ್ಯದ ಬಾವುಟ ಹಿಡಿದು ಮೆರವಣಿಗೆ ಸಾಗುತ್ತಾರೆ. ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಗಾಂಧೀಜಿ, ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ ಮುಂತಾದವರ ಫೋಟೊಗಳಿಗೆ ನಮನ ಸಲ್ಲಿಸಲಾಗುತ್ತದೆ. ಮೈಕ್‌ಗಳಲ್ಲಿ ರಕ್ತ ಸುರಿಸಿ ಜೈಲು ಸೇರಿದ, ಬ್ರಿಟೀಷರ ವಿರುದ್ಧ ಹೋರಾಡಿದ ಯೋಧರ ಚಿತ್ರಣಗಳನ್ನು ಬಿಡಿಸಿ, ಬಿಡಿಸಿ ಕಥೆಗಳನ್ನು ಹೆಕ್ಕಿ ತೆಗೆದು ಹೇಳಲಾಗುತ್ತದೆ. ಶಾಲೆಯ ಮಕ್ಕಳು ಜೈ ಕಾರ ಹಾಡುತ್ತಾರೆ. ಪೊಲೀಸರು ಸಮವಸ್ತ್ರ ಧರಿಸಿ ಪೆರೇಡ್ ಮಾಡುತ್ತಾರೆ. ವಂದನೆ ಸ್ವೀಕರಿಸುವ ಮುಖ್ಯಮಂತ್ರಿ, ಇತರ ಹಿಂಬಾಲಕರು ಮತ್ತೆ ಸ್ವಾತಂತ್ರ್ಯದ ಸಾಧನೆಗಳನ್ನು ಗಿಣಿಪಾಠ ಒಪ್ಪಿಸುತ್ತಾರೆ. ಇಂತಹ ಸಾಧನೆಗಳಲ್ಲಿ ಭಾರತದ ವೀರ ಸಾಧಕಿಯರ ಸಾಧನೆಗಳನ್ನೂ ಹೇಳಲಾಗುತ್ತದೆ. ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ, ಸರೋಜಿನಿ ನಾಯ್ಡು, ಕಸ್ತೂರು ಬಾ ಗಾಂಧಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಹೌದು ಆಗಸ್ಟ್ 15 ಈ ಎಲ್ಲದರ ನೆನಪು. ಅಂಕಿ-ಅಂಶಗಳು ನಮ್ಮನ್ನು ಮುದಗೊಳಿಸುತ್ತವೆ. ಸ್ವಾಂತಂತ್ರ್ಯಕ್ಕೆ ಜೀವ ತೆತ್ತವರು ನಮ್ಮನ್ನು ಒಂದು ಕ್ಷಣ ಅಲುಗಾಡಿಸಲೂ ಬಹುದು. ಆದರೆ ಈ ಇತಿಹಾಸದ ನೆನಪು, ನಮನಗಳು, ಅಂಕಿ-ಅಂಶಗಳು- ಗೌಹಾಟಿಯಲ್ಲಿ ಎಳೆಯ ಯುವತಿಯ ಮೇಲೆ ನಡೆದ ಹಿಂಸೆಯನ್ನಾಗಲೀ, ಮದ್ದೂರಿನಲ್ಲಿ ಗಾರ್ಮೆಂಟ್ ಕೆಲಸದ ಯುವತಿಯ ಮೇಲೆ ನಡೆದ ದೌರ್ಜನ್ಯವನ್ನಾಗಲೀ, ಮಂಗಳೂರಿನಲ್ಲಿ ಹಿಂದುತ್ವದ ಗುಂಪು ಮಹಿಳೆಯರ ಮೇಲೆ ಸದ್ಯದಲ್ಲೇ ನಡೆಸಿದ ಹಲ್ಲೆಯನ್ನಾಗಲಿ, ಮಹಿಳೆಯ ಸ್ವಾಂತಂತ್ರ್ಯದ ಬೆಳಕಿನಲ್ಲಿ ನೋಡುವ ದೃಷ್ಟಿಕೋನವನ್ನು ಹೊಂದಿರುವುದೇ ಇಲ್ಲ. ಆಕೆಯ ಆರ್ಥಿಕ ಸ್ವಾತಂತ್ರ್ಯ, ಚಲನವಲನ ಸ್ವಾತಂತ್ರ್ಯ, ಮಾನಸಿಕ-ದೈಹಿಕ ಹಿಂಸೆಯಿರದೆ, ಲೈಂಗಿಕ ಕಿರುಕುಳ ಇರದೆ ಘನತೆಯಿಂದ ಬದುಕುವ ಸ್ವಾತಂತ್ರ್ಯದ ಬಗ್ಗೆ ಆಗಸ್ಟ್ 15 ರಂದು ಮಾತನಾಡುವ ದೃಷ್ಟಿಕೋನ ಬೆಳೆಯಬೇಕಾಗಿದೆ.

ಬ್ರಿಟೀಷರ ವಿರುದ್ಧದ ಹೋರಾಟದಲ್ಲಿ ಪಿಕೆಟಿಂಗ್ ಮಾಡಿದ ಮಹಿಳೆಯರಿದ್ದಾರೆ. ಜೈಲು ಸೇರಿದವರಿದ್ದಾರೆ, ಕುಟುಂಬ ಮಕ್ಕಳನ್ನು ತೊರೆದು ಆ ಕ್ಷಣ ಸ್ವಾತಂತ್ರ್ಯದ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದವರಿದ್ದಾರೆ. ಅದೆಲ್ಲ ಇತಿಹಾಸ. ಮತ್ತೆ ಮಹಿಳೆಯ ಸ್ಥಾನ ಕುಟುಂಬದೊಳಗೆ. ಆಕೆ ಭಾರತೀಯ ನಾರಿಯಾಗಿರಬೇಕು. ಮಕ್ಕಳ ಪಾಲನೆ ಮಾಡಬೇಕು. ಈ ಚೌಕಟ್ಟಿನೊಳಗೇ ಹೊರಗೆ ಹೋಗಿ ದುಡಿದು ತರುವ ಅನಿವಾರ್ಯತೆ ಇರುವುದರಿಂದ ದುಡಿದು ತರಬೇಕು ಅಷ್ಟೇ. ಆಕೆ ಸ್ವಾತಂತ್ರ್ಯವನ್ನು ಬೇರೆಯಾದ ರೀತಿಯಲ್ಲಿ ಅರ್ಥೈಸಬಾರದು. ಬ್ರಿಟೀಷರ ವಿರುದ್ಧ ಹೋರಾಡಿದ ಮಹಿಳೆಯರು, ಉಪ್ಪಿನ ಸತ್ಯಾಗ್ರಹದಲ್ಲಿ ಧ್ವನಿ ಎತ್ತಿದ ಮಹಿಳೆಯರು, ವಿದೇಶೀ ವಸ್ತ್ರ, ವಿದೇಶೀ ವಸ್ತುಗಳ ಮಾರಾಟ ವಿರೋಧಿಸಿದ ಮಹಿಳೆಯರು ಸ್ವಾತಂತ್ರ್ಯದ ಚಳುವಳಿಯನ್ನು ಅರ್ಥೈಸಿದ್ದು ಹೀಗೆಯೇ ಇರಬಹುದು. ಹೋರಾಟ ಬ್ರಿಟೀಷರ ವಿರುದ್ಧ, ರಾಷ್ಟ್ರೀಯ ಸ್ವಾತಂತ್ರ್ಯದೊಳಗೆ ಮಹಿಳೆಯ ಸ್ವಾತಂತ್ರ್ಯದ ಅರ್ಥವನ್ನು, ಕುಟುಂಬದ ಹೊರಗಿನ ಆಕೆಯ ವ್ಯಕ್ತಿತ್ವವನ್ನು, ಕುಟುಂಬದ ಚೌಕಟ್ಟನ್ನು – ಒಟ್ಟಾಗಿ ಜೆಂಡರ್ ಪ್ರಶ್ನೆಯನ್ನು ಎತ್ತುವುದಕ್ಕೆ ಆಕೆಗೆ ಸಾಧ್ಯವಾಗಲೇ ಇಲ್ಲ. ದೊಡ್ಡದಾದ ಸ್ವಾತಂತ್ರ್ಯದ ಹೋರಾಟ ನಡೆಯುವಾಗ ಮಹಿಳೆಯರ ಸ್ವಾತಂತ್ರ್ಯದ ಪ್ರಶ್ನೆ ಅನಾವಶ್ಯಕವಾಗಿ, ರಂಜನೀಯವಾಗಿ ಕಂಡಿರಬಹುದು. ಪಿತೃಪ್ರಧಾನ ಮೌಲ್ಯಗಳ ಕಪಿಮುಷ್ಠಿಯಲ್ಲಿ ಸ್ವಾತಂತ್ರ್ಯ ಚಳುವಳಿ ಭಾರತದ ಸ್ವಾತಂತ್ರ್ಯದ ಗಂಭೀರತೆಯನ್ನು ಮಾತ್ರ ಪರಿಗಣಿಸುವಂತಾಯಿತು. ಹಾಗಾಗಿ ನಮ್ಮ ಸ್ವಾತಂತ್ರ್ಯದ ಮೊನಚಿನಲ್ಲಿ ಮಹಿಳೆಯ ಪ್ರಶ್ನೆ ಗಂಭೀರವಾಗಿ ಕಾಣುವುದೇ ಇಲ್ಲ. ಆಗಸ್ಟ್ 15 ರ ಇತಿಹಾಸ ಮುಖ್ಯ. ಆದರೆ ಸ್ವಾತಂತ್ರ್ಯದ ಅರಿವು, ಎಚ್ಚರಿಕೆಗಳು ಇಂದಿನ ಜೀವನದ ಗತಿಯ ಜೊತೆಗೆ ತಳಕು ಹಾಕಿಕೊಂಡು ವಿಶ್ಲೇಷಣೆ ನಡೆದಾಗ ಮಾತ್ರ ಸ್ವಾತಂತ್ರ್ಯ ದಿನಾಚರಣೆಗೆ ಒಂದು ಅರ್ಥ ಬರಬಹುದು. ಇಲ್ಲದಿದ್ದರೆ ಅದೊಂದು ಅರ್ಥಹೀನ ಆಚರಣೆಯೇ ಆಗಿರುತ್ತದೆ.

ಹೆಣ್ಣು ಮಕ್ಕಳ ಮಾರಾಟ ಅಜಮೀರದಿಂದ ಹಿಡಿದು ದೆಹಲಿ ತಮಿಳುನಾಡಿನಲ್ಲಿ ಮೌನವಾಗಿ ಸಾಗುತ್ತಲೇ ಇದೆ. ಮದ್ದೂರಿನಲ್ಲಿ ಯುವತಿಯನ್ನು ಚಲಿಸುವ ರೈಲಿನಿಂದ ಹೊರಗೆ ತಳ್ಳುವ ದಾಷ್ಟ್ಯ, ಕ್ರೂರತನಗಳು ಯಾವ ಸ್ವಾತಂತ್ರ್ಯವನ್ನು ಬಿಂಬಿಸುತ್ತಿವೆ? ಗೌಹಾತಿಯಲ್ಲಿ, ಮಂಗಳೂರಿನಲ್ಲಿ ಮಹಿಳೆಯ ಮುಂದಲೆ ಹಿಡಿದುಕೊಂಡು ದರದರನೆ ಎಳೆದುಕೊಂಡು

ಬರುವ ದೃಶ್ಯಗಳನ್ನು ಮಾಧ್ಯಮಗಳು ಬಿಂಬಿಸುತ್ತಲೇ ಇವೆ. ಹಿಂದುತ್ವ ಅಥವ ಇತರ ಶಕ್ತಿಗಳ ಈ ಕ್ರೌರ್ಯ ಯಾವ ಹಾಗೂ ಯಾರ ಸ್ವಾತಂತ್ರ್ಯವನ್ನು ಬಿಂಬಿಸುತ್ತವೆ? ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆ ಈ ಅಂಕಿ-ಅಂಶಗಳನ್ನು ಮಂಡಿಸಬೇಕಾಗುತ್ತದೆ. ನಮ್ಮ ಸ್ವಾತಂತ್ರ್ಯ ಎತ್ತ ಸಾಗಿದೆ ಎನ್ನುವುದನ್ನು ಚರ್ಚಿಸಬೇಕಾಗುತ್ತದೆ. ಯಾವ ಮತಾಂಧತೆಯ ಶಕ್ತಿಗಳು ಈ ಸ್ವಾತಂತ್ರ್ಯವನ್ನು ತಮ್ಮ ಪಿತೃಪ್ರಧಾನ ಪಕ್ಕೆಯಲ್ಲಿ ಇಟ್ಟುಕೊಳ್ಳಲು ಬಯಸುತ್ತವೆ ಎಂಬುದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ಮತಾಂಧತೆಯ ಶಕ್ತಿಗಳ ಜತೆ ತಳಕು ಹಾಕಿಕೊಳ್ಳುತ್ತಿರುವ ಆರ್ಥಿಕ ಅಭಿವೃದ್ಧಿಯ ಪಥವನ್ನೂ ನಾವು ಪ್ರಶ್ನಿಸಬೇಕಾಗಿದೆ.

ಜಾರಿಗೆ ಬರುತ್ತಿರುವ ಸಾಮಾಜಿಕ-ಆರ್ಥಿಕ ಯೋಜನೆಗಳು ಮಹಿಳೆಯರನ್ನು ಮೂಲೆಗುಂಪು ಮಾಡುತ್ತಿರುವುದನ್ನು ನಾವು ಕಾಣಬಹುದಾಗಿದೆ. ಜಾಗತೀಕರಣದ ಹಂತದಲ್ಲಿ ಬೆಳೆಯುತ್ತಿರುವ ಕೋಮುವಾದ ಸಾಂಸ್ಕೃತಿಕ ರಾಜಕಾರಣವನ್ನು ಎತ್ತಿ ಹಿಡಿಯುತ್ತಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಉಡುಪು, ಚಲನ ವಲನದ ಮೇಲೆ ನಿಗಾ ಇಡುತ್ತಿರುವ ಕೋಮುವಾದಿ ಗುಂಪುಗಳು ಮಹಿಳೆಯರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸುತ್ತಿವೆ. ಖಾಪ್ ಪಂಚಾಯತಿ ಮೂಲಕ ಹೆಣ್ಣುಮಕ್ಕಳನ್ನು ಹದ್ದುಬಸ್ತಿನಲ್ಲಿ ಇಡುವ ವಿಧಾನ ಈಗ ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಖಾಪ್ ಪಂಚಾಯತಿಯ ಮಾದರಿಗಳು ಕರ್ನಾಟಕದ ಮೈಸೂರಿನಂತಹ ಊರಿನಲ್ಲಿಯೂ 'ಮರ್ಯಾದಾ ಹತ್ಯೆ'ಯ ಹೆಸರಿನಲ್ಲಿ ಹೆಚ್ಚುತ್ತಿರುವ ಘಟನೆಗಳನ್ನು ನಾವು ಗಮನಿಸಬಹುದಾಗಿದೆ.


ಜಾಗತೀಕರಣದ ಯೋಜನೆಗಳು ಸರಳೀಕರಣವನ್ನು ಹೆಚ್ಚು ಹೆಚ್ಚಾಗಿಸುತ್ತಾ ಹಣದ ಥೈಲಿಯೇ ಎಲ್ಲಾ ಎನ್ನುವಂತಹ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಮಹಿಳೆಯರನ್ನೂ ಗ್ರಾಹಕ ವಸ್ತು ಎಂಬಂತೆ ಬಿಂಬಿಸಲಾಗುತ್ತಿದೆ. 60-70 ರ ದಶಕದ ಲಿಂಗ ಸಮಾನತೆಯ ಯೋಜನೆಗಳು ಹಿನ್ನೆಲೆಗೆ ಸರಿದು ಸಾಮಾಜಿಕ ನ್ಯಾಯದ ಪ್ರಶ್ನೆ ಇಲ್ಲವೇ ಇಲ್ಲ ಎನ್ನುವಂತಾಗಿದೆ. ಹೀಗೆ ಗ್ರಾಹಕ ವಸ್ತುವಾಗಿ ಭಾಸವಾಗುತ್ತಿರುವ ಮಹಿಳೆಯ ಮೇಲೆ ಹಿಂಸೆಯು ಹೈಟೆಕ್ ರೀತಿಯಲ್ಲಿ, ಅಮಾನುಷ ರೀತಿಯಲ್ಲಿ ಜೊತೆಗೆ ಹಲ್ಲೆಯ ರೂಪದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರುವುದನ್ನು ನಾವು ಗಮನಿಸಬಹುದಾಗಿದೆ.

ಈ ರೀತಿಯ ಮಹಿಳೆಯ ಮೇಲಿನ ಹಿಂಸೆಗೆ ಮಹಿಳಾ ಆಯೋಗಗಳು ಪ್ರತಿಕ್ರಿಯಿಸುವ ರೀತಿಯನ್ನು ನಾವು ಕಟುವಾಗಿ ಟೀಕಿಸಬೇಕಾಗಿದೆ. ಪಶ್ಚಿಮ ಬಂಗಾಳದ ಮಮತಾ ಶರ್ಮ ಮಹಿಳೆಯರು ಮಾಡೆಸ್ಟಿಯಿಂದ ಉಡುಪು ಧರಿಸಬೇಕು ಎನ್ನುತ್ತಾರೆ. ಮಹಿಳೆಯರಲ್ಲೇ ತಪ್ಪು ಕಂಡು ಹಿಡಿಯುವ ರಾಷ್ಟ್ರೀಯ ಮಹಿಳಾ ಆಯೋಗದ ನಿಲುವುಗಳು ಕೂಡಾ ಪ್ರಶ್ನಾರ್ಹವಾಗಿವೆ. ಮಹಿಳಾ ಆಯೋಗಗಳು ತಾವು ನೇಮಕಗೊಂಡ ಪಕ್ಷಗಳ ವಕ್ತಾರರಾಗಿ ಕೆಲಸ ಮಾಡುತ್ತಾರೆಯೇ ವಿನಹ ಸ್ತ್ರೀ ಪರ ಕಾಳಜಿಯಿಂದ ಹಿಂಸೆಯನ್ನು ವ್ಯಾಖ್ಯಾನಿಸುವುದಾಗಲೀ, ಅದರ ವಿರುದ್ಧ ಕಾರ್ಯಗತವಾಗುವುದಾಗಲೀ ಕಾಣುವುದಿಲ್ಲ. ಆಯೋಗಗಳ ರಚನೆಯ ಸ್ವರೂಪ, ಹಾಗೂ ಅವರ ಕಾರ್ಯವೈಖರಿಯನ್ನೂ ನಾವು ಪ್ರಶ್ನಿಸಬೇಕಾಗುತ್ತದೆ.

ಇಂದು ಮಹಿಳೆಯರು ಮಹಿಳಾ ಪಂಚಾಯತಿಯ ಸದಸ್ಯರಾಗಬಹುದು, ಅಧ್ಯಕ್ಷರೂ ಕೂಡ ಆಗಬಹುದು. ಶಾಸನ ಸಭೆ ಪ್ರವೇಶಿಸಬಹುದು. ಆದರೆ ಸಾಮಾಜಿಕ, ಆರ್ಥಿಕ ನ್ಯಾಯವೇ ಇರದ, ಲಿಂಗ ಸಮಾನತೆ ಇರದ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯ ರಾಜಕೀಯ ಪ್ರವೇಶ ಎಷ್ಟರ ಮಟ್ಟಿಗೆ ಮಹಿಳೆಯರ ಆತ್ಮಗೌರವ, ಘನತೆ ಕಾಯಬಹುದೆಂಬುದು ಪ್ರಶ್ನಾರ್ಹವಾದ ವಿಚಾರವೇ.

ಮಹಿಳೆಯರ ಸಹನೆಗೂ ಮಿತಿಯಿದೆ. ದುರ್ಬಲವಾಗಿರುವ ಕಾನೂನುಗಳು ಮಹಿಳೆಯರ ಕೋಪವನ್ನು ಹೆಚ್ಚಿಸುತ್ತಿರುವ ಕಾರಣಕ್ಕಾಗಿ ಪ್ರಭುತ್ವವನ್ನು ನಿರ್ಲಕ್ಷಿಸಿ, ಕಾನೂನುಗಳ ಹೊರಗೆ ತಮ್ಮ ತಮ್ಮದೇ ದಾರಿಗಳನ್ನು ಕಂಡುಕೊಳ್ಳಲು ಮಹಿಳೆಯರು ಪ್ರಯತ್ನಿಸುತ್ತಿದ್ದಾರೆ. ಉತ್ತರ ಪ್ರದೇಶದ ಬಾಂದಾದಲ್ಲಿ ಒಂದು ಗುಲಾಬಿ ಗ್ಯಾಂಗ್ ಇದೆ. ಕುಡಿದು ಹೆಂಡತಿಯನ್ನು ಹೊಡೆದರೆ, ಅಥವ ಯಾವುದೇ ಕಾರಣಕ್ಕಾಗಿ ಹೆಂಡತಿಯ ಮೇಲೆ ದೌರ್ಜನ್ಯ ನಡೆಸಿದರೆ ಈ ಹೆಂಗಸರು ಪಂಚಾಯತಿ ನಡೆಸುತ್ತಾರೆ. ಶಿಕ್ಷೆ ವಿಧಿಸುತ್ತಾರೆ. ಕಡುಬಡತನ ತಾಂಡವವಾಡುತ್ತಿರುವ ಈ ಹಳ್ಳಿಯಲ್ಲಿ ಗುಲಾಬಿ ಗ್ಯಾಂಗ್ ತಮ್ಮದೇ ರಕ್ಷಣೆಯ ರಚನೆಯೊಂದನ್ನು ಮಾಡಿಕೊಂಡಿದ್ದಾರೆ. ಕರ್ನಾಟಕದ ಹಳ್ಳಿಯೊಂದರಲ್ಲಿ ಸಹ ಕುಡಿತ, ಬಡಿತದ ವಿರುದ್ಧ ಹೆಂಗಸರು ಹೀಗೆಯೇ ಒಂದು ರಕ್ಷಣೆಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಮಣಿಪುರದ ಬಂದೂಕಿನಿಂದ ಬದುಕಿ ಉಳಿದ ಮಹಿಳೆಯರು ಕೂಡ ಹೀಗೆಯೇ ಒಂದು ಪರ್ಯಾಯವನ್ನು ಕಂಡುಕೊಂಡಿದ್ದಾರೆ. ಹಿಂಸೆಗೊಳಗಾದ ಹೆಂಗಸರ ಬದುಕನ್ನು ಬದಲಾಯಿಸುವ ನಿಟ್ಟಿನತ್ತ ಹತ್ತು-ಹಲವು ಸಂಘಟನೆಗಳು ಪರ್ಯಾಯ ವ್ಯವಸ್ಥೆಮಾಡಿಕೊಂಡು ಸಂಘಟಿತ ಪ್ರಯತ್ನದಲ್ಲಿ ಸ್ವಾತಂತ್ರ್ಯದ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಲೇ ಇವೆ. ರಾಂಚಿಯ ಆದಿವಾಸಿ ಹೆಣ್ಣುಮಕ್ಕಳು ಫುಟ್ ಬಾಲ್ ಆಟಗಾರರಾಗುವುದಕ್ಕೆ ತರಬೇತಿ ಪಡೆದುಕೊಳ್ಳುವ ಮೂಲಕ ತಮ್ಮ ಬದುಕಿಗೆ, ತಮ್ಮ ಬದುಕಿನ ಸ್ವಾತಂತ್ರ್ಯಕ್ಕೆ ಬೇರೆ ವ್ಯಾಖ್ಯಾನ ನೀಡುತ್ತಿದ್ದಾರೆ. ಆಗಸ್ಟ್ 15ರ ಸ್ವಾತಂತ್ರ್ಯ ಅರ್ಥಪೂರ್ಣವಾಗುವುದು ಇಂದಿನ ನಮ್ಮ ಬದುಕಿನ ಸ್ವಾತಂತ್ರ್ಯದ ಪರಿಧಿಯನ್ನು ವೀಕ್ಷಿಸಿದಾಗ ಮಾತ್ರ. ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಹಿಂಸೆ ಕ್ರೌರ್ಯದ ಹಿಂದಿರುವ ಶಕ್ತಿಗಳು ಅವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಪ್ರಯತ್ನವನ್ನು ನಡೆಸುತ್ತಿರುವಾಗ ಸ್ವಾತಂತ್ರ್ಯದ ಮರುವ್ಯಾಖ್ಯಾನ ನಡೆಸುತ್ತಿರುವ ನಾವು ಅವರ ಪ್ರಯತ್ನಗಳನ್ನು ಮೆಟ್ಟಿ ನಿಲ್ಲಲು ಪರ್ಯಾಯ ವ್ಯವಸ್ಥೆಯನ್ನು ಸಂಘಟಿತವಾಗಿ ಮಾಡುತ್ತಲೇ ಆಗಸ್ಟ್ 15 ರ ಸ್ವಾತಂತ್ರ್ಯವನ್ನು ಅರ್ಥಪೂರ್ಣವಾಗಿಸುವ ಅಗತ್ಯವಿದೆ. ಜೊತೆಗೆ ಪ್ರಭುತ್ವವನ್ನು ಪರ್ಯಾಯ ವ್ಯವಸ್ಥೆಗಾಗಿ ಒತ್ತಾಯಿಸುತ್ತಲೇ ಇರಬೇಕಾಗುತ್ತದೆ. ಅತ್ಯಾಚಾರದಂತಹ ಅಪರಾಧ ಮಾತ್ರ ಕ್ರಿಮಿನಲ್ ಕಾನೂನಿನ ಕೆಳಗೆ ಶಿಕ್ಷಾರ್ಹ. ದೈಹಿಕ ಹಿಂಸೆ, ಲೈಂಗಿಕ ಹಿಂಸೆ, ಗುಂಪು ದಾಳಿ ಇಂತಹ ಅಪರಾಧಗಳಿಗೆ ಕ್ರಿಮಿನಲ್ ಕಾನೂನಿನ ಕೆಳಗೆ ಕಠಿಣವಾದ ಶಿಕ್ಷೆಯನ್ನು ವಿಧಿಸುವುದಿಲ್ಲ. ಇಂತಹ ಹಿಂಸೆಯ ವಿಧಾನಗಳನ್ನೂ ಸಹ ಕ್ರಿಮಿನಲ್ ಕಾನೂನಿನಡಿ ಶಿಕ್ಷಿಸುವಂತೆ ಕಾನೂನಿನಲ್ಲಿ ಬದಲಾವಣೆ ತರಬೇಕೆಂದು ನಾವು ಪ್ರಭುತ್ವದ ಮೇಲೆ ಒತ್ತಡ ಹೇರಲೇಬೇಕಾಗುತ್ತದೆ. ❑

ಇತ್ತೀಚೆಗೆ ಸ್ತ್ರೀ ಸಮುದಾಯದ ಇಬ್ಬರು ಮಿನುಗುತಾರೆಯರಾದ ಭಾರತದ ಕ್ಯಾಪ್ಟನ್ ಲಕ್ಷ್ಮೀ ಹಾಗೂ ಅಮೇರಿಕದ ಸಾಲಿ ರೈಡ್ ಅವರನ್ನು ಕಳೆದುಕೊಂಡಿದ್ದಕ್ಕೆ ಶೋಕಿಸುತ್ತೇವೆ.



"ಆವಾಂ"

■ ಸೇತುಮಾಧವ ಎಂ.ವಿ

ಮರಾಠಿ ಸಾಹಿತ್ಯ ಅದರಲ್ಲೂ ಇತ್ತೀಚಿನ ದಲಿತ ಸಾಹಿತ್ಯ ಒಟ್ಟಾರೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. 'ಉಚಲ್ಯಾ' ದಂತೆ ನಿರ್ದಿಷ್ಟ ಪಂಗಡ ನಿರೂಪಣೆಗೆ ಹೊರತಾಗಿ, ಸಕಲ ವಿದ್ಯಮಾನಗಳನ್ನು ಸ್ತ್ರೀವಾದಿ ನೆಲೆಯಿಂದ ಕಾಣುವ ಕಾಣ್ಕೆ, ನಿರೂಪಣ ಶೈಲಿ, ವಸ್ತುವನ್ನು ಕಟ್ಟಿಕೊಡುವ ರೀತಿ, ಸ್ವಗತಗಳಲ್ಲಿ ಸ್ವಯಂ ಅನ್ನು ಶೋಧಿಸುವ ಪರಿ, ಭಾಷಾ ಪ್ರಯೋಗ, ವರ್ಗ ಸಂಘರ್ಷ ಅದರಲ್ಲೂ ಪುರುಷ ಕೇಂದ್ರಿತ ಟ್ರೇಡ್ ಯೂನಿಯನ್ ಚಳುವಳಿ, ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರ ಹಕ್ಕೊತ್ತಾಯಗಳು ಪ್ರತಿಕ್ರಿಯೆಗಳು, ವರ್ಣ ನೀತಿಗಳು, ಜಾತೀಯತೆ ಹಾಗೂ ಕೋಮುವಾದಗಳು, ಲಿಂಗ ಸೂಕ್ಷ್ಮತೆಗಳನ್ನೊಳಗೊಂಡ 'ಚಿತ್ರಾ ಮುದುಗಲ್' ಅವರ 'ಆವಾಂ' ಕಾದಂಬರಿ ಇತ್ತೀಚಿನ ದಿನಗಳ ಪ್ರಮುಖ ಕೃತಿ ಎಂದೇ ಹೇಳಬಹುದು. 'ಆವಾಂ' ಮರಾಠಿ ಕಾದಂಬರಿಯನ್ನು ಕನ್ನಡದಲ್ಲಿ 'ಆವಿಗೆ' ಎಂದು ಹೆಗಡೆಯವರು ಅನುವಾದಿಸಿದ್ದಾರೆ. ಈ ಕಾದಂಬರಿಯ ಕೇಂದ್ರ ವ್ಯಕ್ತಿ ನಮಿತಾ ಪಾಂಡೆ. ಕೆಳಮಧ್ಯಮ ವರ್ಗದ, ಕೇವಲ ಪಿಯುಸಿ ಓದಿರುವ ನಮಿತಾಳ ತಂದೆ ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಟ್ರೇಡ್ ಯೂನಿಯನ್ ನಾಯಕ ಅಣ್ಣಾ ಸಾಹೇಬರ ಆಪ್ತರಾಗಿ, ಲಕ್ವ ಹೊಡೆದು ಅಸಹಾಯಕನಾಗಿ, ಮಲಗಿರುವುದೆ ಬದುಕು. ತಾಯಿ ಹಾಗೂ ಇನ್ನೊಬ್ಬ ತಂಗಿ ತಮ್ಮನಿರುವ ಬೊಂಬಾಯಿಯ ಬದುಕು ಕ್ರಮೇಣ ತೆರೆದುಕೊಳ್ಳುತ್ತಾ ಹೋಗುತ್ತದೆ. ಆರ್ಥಿಕ ಮುಗ್ಗಟ್ಟಿನೊಂದಿಗೆ ಕೌಟುಂಬಿಕ, ಆಂತರಿಕ ಸಂಬಂಧಗಳ ಸಂಕೀರ್ಣತೆ ಒಂದೆಡೆಯಾದರೆ ಅರ್ಥಿಕ ಪರಿಸ್ಥಿತಿಯನ್ನ ತಿಳಿಗೊಳಿಸಲು ತಂದೆಯ ಬದಲಿಗೆ ಮಗಳಿಗೆ(ನಮೀತ ಪಾಂಡೆ) ಟ್ರೆಡ್ ಯೂನಿಯನ್ನಲ್ಲಿ ಕೆಲಸ. ತಿಂಗಳಿಗೆ 1500 ರೂ ಪಗಾರ. ಹೀಗೆ, ಕಾರ್ಮಿಕರ ಸಂಘನೆಗೆ ಸೇರುವ ನಮೀತ ಪಾಂಡೆ ಕಾರ್ಮಿಕ ಸಂಘಟನೆಯ ಒಳತೋಟಿಗಳನ್ನು, ಕಾರ್ಮಿಕ ಮುಖಂಡರ ಢೋಂಗಿತನವನ್ನು ಎಳೆಎಳೆಯಾಗಿ ತೆರೆಯುತ್ತಾ, ಸ್ತ್ರೀವಾದಿ ನೆಲೆಯಿಂದ ಸಮಗ್ರ ಬೊಂಬಾಯಿಯ ಕಾರ್ಮಿಕ ಚಳುವಳಿಯ ಸ್ವರೂಪಕ್ಕೆ ಕನ್ನಡಿ ಹಿಡಿಯುತ್ತಾಳೆ. 1980ರ ದಶಕದಲ್ಲಿ ಉತ್ತುಂಗದಲ್ಲಿದ್ದ ಕಾರ್ಮಿಕ ಚಳುವಳಿ ಒಂದೆಡೆ, ಅಸಂಘಟಿತ ಮಹಿಳೆಯರ ಹಪ್ಪಳ ಹೊಸೆಯುವ ಕಾಯಕ ಇನ್ನೊಂದೆಡೆ. ಈ ಮಧ್ಯೆ ತಮಗರಿವಿಲ್ಲದೇ, ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಅನಿವಾರ್ಯತೆ. ಕಾರ್ಮಿಕರ ಮತ್ತು ಮಾಲೀಕರ ನಡುವಿನ ಸಂಘರ್ಷ, ಸಂವಾದ, ಸಂಧಾನಗಳ ಸರಮಾಲೆ ಯಲ್ಲಿಯೇ ಸವಕಲಾಗುವ ರಾಜಕೀಯ ಮೌಲ್ಯ, ನೈತಿಕ ಕುಸಿತಗಳು, ಪಟ್ಟಭದ್ರ ಹಿತಾಸಕ್ತಿಗಳು ನಡೆಸುವ ಚದುರಂಗದಾಟದ ಪ್ರತಿ ಚಲನೆಯು ತೆರೆದುಕೊಳ್ಳುತ್ತಲೇ, ಆರ್ಥಿಕ ಉದಾರೀಕರಣ, ಜಾಗತೀಕರಣದ ಪ್ರಭಾವಗಳು ಬದಲಾಗುವ ಮನೋಭಾವವನ್ನು ಸ್ಫುಟವಾಗಿ ತೆರೆದಿಡುತ್ತದೆ. ವ್ಯಕ್ತಿಯಲ್ಲಿ ಪರಕೀಯ ಭಾವಕ್ಕೆ ಕಾರಣಗಳು ಒಂದರೊಳ ಗೊಂದು ಮಿಳಿತ. ಆಕಸ್ಮಾತಾಗಿ ಜರುಗುವ ಹಲವು ಘಟನೆಗಳು ಬದುಕಿನ ದಿಕ್ಕನ್ನು ಬದಲಿಸುವುದು ಎಂಬುದಕ್ಕೆ ನಮಿತಾ ಪಾಂಡೆ ಬಂಡವಾಳಶಾಹಿ ವಾಸ್ವಾನಿಯವರನ್ನು ಭೇಟಿಯಾಗುವುದು, ವಜ್ರಾಭರಣ ಲೋಕದ ಹಲವು ಆಯಾಮಗಳು ತಾನಾಗೇ ಪ್ರಕಟಗೊಳ್ಳುತ್ತಾ, ನಮಿತಾ ಪಾಂಡೆಯಲ್ಲಿ ಉದ್ಭವಿಸುವ ಹಲವು ಪ್ರಶ್ನೆಗಳು ಸಾರ್ವತ್ರಿಕತೆಯನ್ನು ಪಡೆದುಕೊಳ್ಳುತ್ತದೆ.


ಕಾರ್ಮಿಕ ಸಂಘಟನೆಗಳು, ಮಾರ್ಕ್ಸಿಸ್ಟರು, ಪವಾರ್ ಎಂಬ ಕೆಳಜಾತಿಯವರು ಅಂಬೇಡ್ಕರ್ ಅನುಯಾಯಿಗಳಾಗಿ, ಕಾರ್ಮಿಕ ಸಂಘಟನೆಯ ಮುಖಂಡರಾಗಿ ನಡೆಸುವ ಚಿಂತನೆ, ನಮಿತಾ ಪಾಂಡೆಯ ಆಂತರಿಕ ಲೋಕದಲ್ಲಾಗುವ ಅವ್ಯಕ್ತ ಕೋಲಾಹಲ, ನಗರ ಬದುಕಿನ ಯಾಂತ್ರಿಕ, ಯಾತನಾಮಯ ಬವಣೆಗಳು, ಉಳ್ಳವರ ಮೇಜುವಾನಿಗಳು, ಹೆಣ್ಣನ್ನು ನೋಡುವ ದೃಷ್ಟಿಗಳು ಸಮಾಜದ ಸಾಮಾಜಿಕ ಸಂಕೀರ್ಣತೆಯ ಜಟಿಲತೆಯೊಂದಿಗೆ, ಮೇಲ್ನೋಟಕ್ಕೆ ಕಾಣುವ ಮುಖವಾಡಗಳನ್ನು ಬಹಿರಂಗಗೊಳಿಸುತ್ತವೆ. ಹಲವಾರು ಬಾರಿ ಕಾದಂಬರಿಯ ಕೇಂದ್ರ ವ್ಯಕ್ತಿಯಾದ ನಮಿತಾ ಪಾಂಡೆ, ಸನ್ನಿವೇಶಗಳೊಂದಿಗೆ ಮುಖಾಮುಖಿ ಯಾಗಿ, ತನ್ನೊಳಗೇ ನಡೆಯುವ ಪ್ರಶ್ನೋತ್ತರಗಳ ಮಂಥನ, ಸರಿ ತಪ್ಪುಗಳ ಜಿಜ್ಞಾಸೆ, ಗುರಿಯಿಂದ ಬದುಕಿನ ತಳಸಮುದಾಯಗಳ ವಿಚಿತ್ರ ಪರಿಸ್ಥಿತಿಯನ್ನು ಯಥಾವತ್ತಾಗಿ ಓದುಗರಿಗೆ ತಲುಪುತ್ತದೆ.

ಮುಖ್ಯವಾಗಿ ಬೊಂಬಾಯಿಯ ಕಾರ್ಮಿಕ ಸಂಘಟನೆಗಳು ಅಂಬೇಡ್ಕರ್ ಚಳುವಳಿಗಳು, ದೇಶದಲ್ಲಿ ನಡೆಯುವ ರಾಜಕೀಯ ಪಲ್ಲಟಗಳು, ವ್ಯಕ್ತಿಗತ ಬದುಕಿನ ಮೇಲಾಗುವ ಪರಿಣಾಮಗಳನ್ನು ಸಾದ್ಯಂತ ಕಟ್ಟಿಕೊಡುವುದರೊಂದಿಗೆ, ಸ್ತ್ರೀ ಸಂವೇದನೆಯ ಹಾಗೂ ಪರಿಸ್ಥಿತಿಗಳ ಅರ್ಥೈಸುವಿಕೆಯನ್ನು ಮನೋಜ್ಞವಾಗಿ ಚಿತ್ರಿಸುತ್ತದೆ. ಸಾಮಾನ್ಯವಾಗಿ ಕುಟುಂಬದ ಆರ್ಥಿಕ ಮೂಲದ ವ್ಯಕ್ತಿಯ ಖಾಸಗಿ ಬದುಕು ಅನಾವರಣಗೊಳ್ಳುತ್ತಲೇ ಸ್ವಾತಂತ್ರ್ಯ ಹಾಗೂ ಜವಾಬ್ದಾರಿಯನ್ನು ಸೂಕ್ಷ್ಮವಾಗಿ ಪ್ರಶ್ನಿಸುತ್ತದೆ. ಒಟ್ಟಾರೆ, ಸಮಕಾಲೀನ ಸಾಹಿತ್ಯ ಕ್ಷೇತ್ರದಲ್ಲಿ ಬೃಹತ್ ಎಂದೆನಿಸಿದರೂ, ವಾಸ್ತವಕ್ಕೆ ಹತ್ತಿರವಾಗುವ ಸಕಲ ವಿದ್ಯಮಾನಗಳ ಬದುಕನ್ನು ಕಟ್ಟಿಕೊಡುವಲ್ಲಿ ಕಾದಂಬರಿ ಯಶಸ್ವಿಯಾಗಿದೆ ಎಂದೇ ಹೇಳಬೇಕು.

ತಂದೆ ಸಾವನ್ನಪ್ಪುವುದು, ತನಗರಿವಿಲ್ಲದೇ ಬಸಿರಾಗುವುದು, ಅಣ್ಣಾ ಸಾಹೇಬರ ಅಣತಿಯಂತೆ ಮನೆ ಬದಲಿಸುವುದು, ತಮ್ಮ, ತಂಗಿಯ ಬೆಳವಣಿಗೆಯನ್ನು ಗುರುತಿಸುವುದು, ಎಲ್ಲಕ್ಕಿಂತ ಹೆಚ್ಚಾಗಿ,ತಾನು ನಂಬಿದ ಬದುಕನ್ನು ರೂಪಿಸಿಕೊಳ್ಳುವ ನಮಿತಾ ಪಾಂಡೆ ಮಾದರಿಯಲ್ಲದಿದ್ದರೂ ತನ್ನಿಚ್ಛೆಯನ್ನು ಪ್ರತಿಪಾದಿಸುವ ಹೆಣ್ಣಾಗಿ ನಿಲ್ಲುತ್ತಾಳೆ. ❑

ಆವಿಗೆ

ಹಿಂದಿಮೂಲ: ಚಿತ್ರಾ ಮುದ್‌ಗ
ಕನ್ನಡಕ್ಕೆ : ಆರ್.ಪಿ. ಹೆಗಡೆ
ಬೆಲೆ : ರೂ. 350/-
ಪ್ರಕಾಶನ : ರವೀಂದ್ರ ಪುಸ್ತಕಾಲಯ
ಚಾಮರಾಜಪೇಟೆ, ಸಾಗರ-577 401
ಶಿವಮೊಗ್ಗ ಜಿಲ್ಲೆ





ನನ್ನ ದೇಹ, ನನ್ನ ಹಕ್ಕು


■ ನಿಹಾರಿಕ ಶೆಣೈ

ನನ್ನ ಬಣ್ಣ, ನನ್ನ ಆಕಾರ, ನನ್ನ ದೇಹ, ನನ್ನ ಉಡುಪು – ಇವೆಲ್ಲ ನನ್ನದು ಎಂದು ಹೇಳಲು ಇಂದಿನ ಸಮಾಜದಲ್ಲಿ ನಾನು ಬಯಸಬಹುದೇ? ದಿನ ಮುಖಕ್ಕೆ ಫೈರ್ ಎಂಡ್ ಲವ್ಲೀ, ಸುಣ್ಣದಂತ ಪಾಂಡ್ಸ್ ಬ್ಯೂಟಿ ಟಾಲ್ಕ್ ಹಚ್ಚಿ, ಪಕ್ಕೆಲುಬು ಕಾಣುವಂತೆ ಡಯಟ್ ಮಾಡಿದರೆ ಸೌಂದರ್ಯದ ಆಕರ್ಷಕ ಜಗತ್ತಿನಲ್ಲಿ ನನಗೆ ಸ್ಥಾನ ಸಿಗುತ್ತದೆಯೇ? ಇಲ್ಲ, ಅಷ್ಟು ಸುಲಭವಲ್ಲ. ಆ ಗುರುತು ಸಿಗುವ ಮುನ್ನ ನಾನು ಜೀರೋ ಸೈಜ್ ಆಗಬೇಕು, ಕನಿಷ್ಠ ಹತ್ತು ಗಂಡಸರು ನನ್ನ ದೇಹವನ್ನು ಮೇಲಿಂದ ಕೆಳಗೆ ನೋಡಿ ಸೀಟಿ ಹಾಕಿ ಆಸ್ವಾದಿಸಬೇಕು, ನನ್ನ ಬೊಂಬೆಯಂತಹ ಸ್ವರೂಪವನ್ನು ನೋಡಿ ಇತರ ಮಹಿಳೆಯರು ಮತ್ಸರ ಪಡಬೇಕು, ಇತ್ತೀಚಿನ ಫ್ಯಾಷನ್ ಅನ್ನು ಪಾಲಿಸಿ ನನ್ನ ಗೆಳತಿಯರೊಂದಿಗೆ ನಾನು ಕೊಂಡುಕೊಂಡ ಹೊಸ Gucci ಬೂಟುಗಳ ಬಗ್ಗೆ ಕೊಚ್ಚಿಕೊಳ್ಳಬೇಕು– ಇದೆಲ್ಲ ಆದ ಮೇಲೆ ಬಹುಶಃ ನಾನು ಈ ಸಮಾಜದಲ್ಲಿ ಸಫಲಳಾದೆ. ಆದರೆ, ಇದೊಂದು ಕನಸು. ನಾನು 85 ತೂಕದ ಭಾರಿ ಹೆಂಗಸು, ಎಷ್ಟು ಡಯಟ್ ಮಾಡಿದರೂ ತೂಕ ಕಡಿಮೆ ಯಾಗುವುದಿಲ್ಲ, ನನ್ನ ಕಪ್ಪು ಬಣ್ಣ ಎಷ್ಟು ಫೇರ್ ಎಂಡ್ ಲವಲೀ ಮೆತ್ತಿದರೂ ಕಪ್ಪಾಗಿಯೇ ಉಳಿಯುತ್ತದೆ. ಅಪ್ಪ ಅಮ್ಮನಿಗೆ ಚಿಂತೆ, ಮದುವೆಯಾಗುವ ವಯಸ್ಸು ಮೀರಿದೆ, ಗಂಡು ಸಿಗುತ್ತಾನೋ ಇಲ್ಲವೋ ಎಂದು ಅಮ್ಮನ ಗೋಳು. ನಾನು ದಿನ ಮದುವೆಯ ಕನಸು ಕಾಣುವುದು. ನಾನು ಮುಂಚೆ ನಮ್ಮ ಕಾಲೇಜಿನ ಆಲ್ ರೌಂಡರ್ ಇದ್ದೆ. ಗೋಲ್ಡ್ ಮೆಡಲಿಸ್ಟ್ ಕೂಡ, ಆದರೆ ಅಮ್ಮ ಅದರಿಂದ ಏನೂ ಪ್ರಯೋಜನವಿಲ್ಲವೆಂದು ಚಿನ್ನವನ್ನು ಕರಗಿಸಿ ನನಗಂತ ತಾಳಿ ಮಾಡಿಸಿಕೊಂಡಿದ್ದೇನೆ. ನಾನು ಬುದ್ಧಿವಂತೆ, ಯಾವ ಸ್ಪರ್ಧೆಯಲ್ಲಿಯೂ ಗೆಲ್ಲಬಲ್ಲೆ ಆದರೆ ಸಮಾಜದಲ್ಲಿ ಆಗುತ್ತಿರುವ ಸೌಂದರ್ಯದ ಸ್ಪರ್ಧೆಯಲ್ಲಿ ನಾನು ಸೋತಿರುವೆ. ಇದು ಜೀವನದಲ್ಲಿ ಖಿನ್ನಳಾಗಿ ಆತ್ಮಹತ್ಯೆ ಮಾಡಿದ ರುಕ್ಮಿಣಿಯ ಕತೆ. ಇಂತಹ ಸಮಾಜಿಕ ಒತ್ತಡಗಳಿಂದ ಹಲವಾರು ರುಕ್ಮಿಣಿಯರು ಸೋತಿದ್ದಾರೆ.

ನಾವು ಸೌಂದರ್ಯ, ಲೈಂಗಿಕ ಆಕರ್ಷಣೆಗೆ ಅಷ್ಟೊಂದು ಪ್ರಾಮುಖ್ಯತೆ ಯಾಕೆ ಕೊಡುತ್ತಿದ್ದೇವೆ? ಇದೆಲ್ಲಿಂದ ಮೂಡಿಬಂದಿದೆ? ಮಹಿಳೆಯರು ತಮ್ಮ ಒಳಗಿನ ಸಾಮರ್ಥ್ಯಗಳಿಗೆ ಗಮನಕೊಡದೆ, ತಮ್ಮ ಹೊರಗಿನ ದೇಹವನ್ನು ಯಾಕೆ ವಿಜೃಂಭಿಸುತ್ತಿದ್ದಾರೆ? ಈ ಪ್ರಶ್ನೆಗಳು, ಇವತ್ತಿನ ಬಂಡವಾಳಶಾಹಿ, ಉಪಭೋಗಿ ಸಮಾಜದಲ್ಲಿ ಹೆಚ್ಚು ತೀವ್ರತೆಯಿಂದ ನಮ್ಮನ್ನು ಕಾಡುತ್ತಿದೆ.

ದಬ್ಬಾಳಿಕೆಯ ಯಂತ್ರ

ಪಿತೃಪ್ರಧಾನತೆಯಲ್ಲಿ, ಹೆಣ್ಣು ಅಮೂಲ್ಯವಾದ 'ಸಾಮಗ್ರಿ'. ಅವಳು ತನ್ನ ಸರ್ವಸ್ವವನ್ನು ಅರ್ಪಿಸುತ್ತಾಳೆ. ಅವಳಲ್ಲಿ ಪುರುಷರ ಲೈಂಗಿಕ ದಾಹವನ್ನು ತಣಿಸುವ ಸಾಮರ್ಥ್ಯವಿದೆ, ಮಕ್ಕಳನ್ನು ಹೆತ್ತು, ಪುರುಷ ಸಂತಾನವನ್ನು ಮುಂದುವರೆಸುವ ಶಕ್ತಿಯಿದೆ. ಮಾನವ ವಿಕಾಸದ ಮೊದಲ ಹಂತಗಳಲ್ಲಿ, ಈ ಶಕ್ತಿಯಿಂದ ಹೆಣ್ಣು ಬಲಿಷ್ಠೆ ಇದ್ದಳು, ಸ್ವಂತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಅವಳಲ್ಲಿತ್ತು. ಆದರೆ ಮಾನವ ವಿಕಾಸ ಮುಂದುವರೆಯುತ್ತಿದ್ದಂತೆಯೇ, 'ಕುಟುಂಬ' ಎಂಬ ಕಲ್ಪನೆ ಮೂಡಿ ಬಂತು. ಈ 'ಕುಟುಂಬ' ಪುರುಷನ ಹಾಗೂ ಹೆಣ್ಣಿನ ಸ್ವಾಭಾವಿಕ ಶಕ್ತಿಯ ವಿಭಾಗದ ಮೇಲೆ ರಚಿಸಲಾಯಿತು. ಈ ಸಂದರ್ಭದಲ್ಲಿ, 'ವಿವಾಹ'ದ ಸಂಸ್ಥೆಯು ಮೂಡಿಬಂತು– ಹೆಣ್ಣು ಈಗ ಒಬ್ಬ ಗಂಡಸಿನ ಸ್ವತ್ತು ಎಂದು ಪರಿಗಣಿಸಲಾದಳು. ಅವಳ ಹಿಂದಿನ ಸ್ವಾತಂತ್ರ್ಯ ಹಾಗೂ ಅಧಿಕಾರ ಕಡಿಮೆಯಾಯಿತು ಮತ್ತು ಅವಳು ಮಕ್ಕಳ ಹಾಗೂ ಮನೆಯ ಕಡೆ ಹೆಚ್ಚು ಗಮನವನ್ನು ಕೊಡಬೇಕಾಗಿ ಬಂತು. ಕ್ರಮೇಣ, ಕುಟುಂಬದ ಕಟ್ಟಡದ ಮೇಲೆ ಇಡಿ ಸಮಾಜ ರಚಿಸಲಾಯಿತು. ಇದು ಇವತ್ತಿನ ಸಮಾಜದ ಇತಿಹಾಸ. ಕರ್ತವ್ಯಗಳ ವಿಭಜನೆ ಜೈವಿಕವಾಗಿ ಉಳಿಯದೆ ಸಾಮಾಜಿಕವಾಯಿತು. ಲೈಂಗಿಕತೆ (sex) ಮತ್ತು ಲಿಂಗತ್ವ (gender)ದ ಮಧ್ಯೆ ಇರುವ ವ್ಯತ್ಯಾಸದ ಮೂಲ ಈ ವ್ಯವಸ್ಥೆಯಲ್ಲಿ ನಾವು ಕಾಣಬಹುದು. ಲಿಂಗ ಗಂಡಸರ ಮತ್ತು ಹೆಂಗಸರ ಮಧ್ಯೆ ಇರುವ ಸ್ವಾಭಾವಿಕ ಜೈವಿಕ ವ್ಯತ್ಯಾಸಗಳು. ಆದರೆ, 'ಲಿಂಗತ್ವ' ಸಾಮಾಜಿಕ ವ್ಯವಸ್ಥೆ. ಲಿಂಗತ್ವ ದಬ್ಬಾಳಿಕೆಯ ಒಂದು ಯಂತ್ರ– ಇದರ ಮೂಲಕ ಹೆಂಗಸರನ್ನು ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪದ್ಧತಿಗಳಿಂದ ಬಹಿಷ್ಕರಿಸಲಾಯಿತು. ಹೆಂಗಸರ ಜೀವನ ಕೇವಲ ತಂದೆಯ ಅಥವ ಗಂಡನ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಯಿತು. ಅವಳ ಸ್ವಂತ ಗುರುತೆಂದು ಅವಳಿಗಿರಲಿಲ್ಲ– ಅವಳು ಯಾರದೋ ಮಗಳು, ತಂಗಿ, ಅಕ್ಕ, ಹೆಂಡತಿ, ಸೊಸೆ, ಅಮ್ಮ ಆದಳು ವಿನಹ ತನ್ನದೇ ಆದ ಒಂದು ವಿಶಿಷ್ಟ ವ್ಯಕ್ತಿತ್ವ ಅವಳಿಗಿರಲಿಲ್ಲ. ಹುಟ್ಟಿನಿಂದಲೇ ಅವಳಿಗೆ ಆಕೆಯ ಸ್ಥಾನ ತಿಳಿಸಲಾಯಿತು. ಕ್ರಮೇಣ ಅವಳು ವಿವಾಹವನ್ನು ತನ್ನ ಜೀವನದ ಪರಮ ಧ್ಯೇಯಯೆಂದು ನಂಬಲು ಪ್ರಾರಂಭಿಸಿದಳು. ಹೀಗೆ, ಭವಿಷ್ಯದಲ್ಲಿ ಯಾವಾಗಲೋ ಯಾವುದೋ ಗಂಡಸನ್ನು ಸೆಳೆಯಲು ಅವಳು ದೇಹವನ್ನು ಅಲಂಕರಿಸಿ, ಪ್ರದರ್ಶಿಸಿ ತನ್ನ ನಡವಳಿಕೆಯನ್ನು ಸಮಾಜ ಹೇಳುವ ರೀತಿಯಲ್ಲಿ ನಡೆಸಲು ಪ್ರಾರಂಭಿಸಿದಳು. ತನ್ನ ಅಲಂಕಾರದಲ್ಲಿ ಮಗ್ನಳಾದ ಹೆಣ್ಣಿಗೆ ತನ್ನ ಬುದ್ಧಿವಂತಿಕೆ, ಸಾಮರ್ಥ್ಯಗಳನ್ನು ಬೆಳೆಸುವ ಅವಕಾಶವು ಎಲ್ಲಿತ್ತು?



■ ಲೇಖಾ ಅಡವಿ

ಮಹಿಳೆಯು ಯಾವತ್ತಿನಿಂದಲೂ ಅವರನ್ನು ಶೃಂಗಾರಕ್ಕೆ ಮೀಸಲಾಗಿಟ್ಟುಕೊಳ್ಳಲು ಒತ್ತಾಯಿಸಲ್ಪಡುತ್ತಿದ್ದಾರೆ. ಪಾಶ್ಚಾತ್ಯ ದೇಶಗಳ ಸಾಮ್ರಾಜ್ಯಶಾಹಿ ವ್ಯವಸ್ಥೆಯು ತೃತೀಯ ಜಗತ್ತಿನ ದೇಶಗಳ ಆರ್ಥಿಕ ವ್ಯವಸ್ಥೆ ಹಾಗೂ ಜೀವನ ಶೈಲಿಯ ಮೇಲೆ ಬೀರುತ್ತಿರುವ ಪ್ರಭಾವ ಮಹಿಳೆಯರು ತೆಳ್ಳಗೆ, ಬೆಳ್ಳಗೆ ಪಾಶ್ಚಾತ್ಯರಂತೆ ಕಾಣಬೇಕೆಂಬ ಒತ್ತಾಯವನ್ನು ಹೇರುತ್ತಿದೆ.

ಈಗಿರುವ ಸೌಂದರ್ಯವರ್ಧಕಗಳು ಸಾಲದೆನ್ನುವಂತೆ, ಇನ್ನೊಂದು ಹೊಸರೀತಿಯ ಸೌಂದರ್ಯವರ್ಧಕ–ಮಹಿಳೆಯರ ಜನನಾಂಗವನ್ನು ಬೆಳ್ಳಗಾಗಿಸುವ ಸರಕುಗಳು ಮಾರುಕಟ್ಟೆಗೆ ಬಂದಿವೆ. 'Intimate wash' ಎನ್ನುವ 25 ಸೆಕೆಂಡುಗಳ ಜಾಹಿರಾತು ಖಾಸಗಿ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದೆ.ಆ ಜಾಹಿರಾತಿನ ಪ್ರಾರಂಭದಲ್ಲಿ ಪುರುಷ ತನ್ನ ಹೆಂಡತಿಯಲ್ಲಿ ನಿರಾಸಕ್ತಿ ಹೊಂದಿರುತ್ತಾನೆ. ಈ ಸೌಂದರ್ಯವರ್ಧಕದ ಜನನಾಂಗಳನ್ನು ಸುಂದರಗೊಳಿಸುವ ಜಾದೂವಿನಿಂದ ಅವರ ಸಂಬಂಧ ಮತ್ತೆ ಚಿಗುರುತ್ತದೆ.

ಇದರಲ್ಲಿ ಮುಖ್ಯವಾಗಿ ಬಿಂಬಿತವಾಗಿರುವುದು ಮಹಿಳೆಯ ದೇಹವನ್ನು ಅವಮಾನಿಸುತ್ತಿರುವ ಅಂಶ. ಆಶ್ಚರ್ಯವಾಗುವುದೇನೆಂದರೆ ಯಾಕೆ ಬಹಳಷ್ಟು ಮಹಿಳೆಯರು ತಮ್ಮ ದೇಹದ ಬಗ್ಗೆ ಮುಜುಗರಗೊಳ್ಳುತ್ತಿದ್ದಾರೆಂಬುದು. ಪುರುಷನನ್ನು ಸೆಳೆಯಲು ಮಹಿಳೆ ಹೇಗೆ ಕಾಣಬೇಕು, ಯಾವುದು ಅವಳನ್ನು ಪುರುಷನಿಗಾಗಿ ಪರಿಪೂರ್ಣಳನ್ನಾಗಿಸುತ್ತದೆ ಹಾಗೂ ಉಳಿದ ಮಹಿಳೆಯರ ಅಸೂಯೆಯ ವಸ್ತುವಾಗಿಸುತ್ತದೆ ಎನ್ನುವುದನ್ನೆಲ್ಲ ಮಾಧ್ಯಮಗಳು ನಮಗೆ ಆದೇಶಿಸುತ್ತವೆ.

ಪೂರ್ವ ಏಷ್ಯಾದಲ್ಲಿ 'ಬೆಳ್ಳಗಿರುವುದೆಲ್ಲ ಸುಂದರ' ಎನ್ನುವ ಪರಿಕಲ್ಪನೆಯಿದ್ದು, ಫೇರ್ ಅಂಡ್ ಲವ್ಲಿ ಪ್ರಾಡಕ್ಟುಗಳು ಅತೀ ಹೆಚ್ಚು ಮಾರಾಡವಾಗುತ್ತಿವೆ. ಏಷಿಯಾದ ಮಹಿಳೆಯರು ಇಂಗ್ಲೀಷ್ ಮಹಿಳೆಯನ್ನು ಹೋಲುವ ಸಲುವಾಗಿ ಹಲವಾರು ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ. ನೇರ ಮೂಗು, ಶ್ವೇತ ವರ್ಣದ ಚರ್ಮ ಹಾಗೂ ದೊಡ್ಡ ಕಣ್ಣು ಇತ್ಯಾದಿ ಪಾಶ್ಚಾತ್ಯ ಲಕ್ಷಣಗಳನ್ನು ಹೊಂದಲು ತಂತ್ರಜ್ಞಾನದ ವಿವಿಧ ಮಾರ್ಗಗಳನ್ನು ಬಳಸಲಾಗುತ್ತಿದೆ.

ವರ್ಣದ ಮೇಲೆ ನಿರ್ಧರಿಸಲ್ಪಟ್ಟ ವ್ಯಕ್ತಿಯ ವ್ಯಕ್ತಿತ್ವ ವರ್ಣಭೇದದ ಪ್ರತೀಕವಾಗಿದೆ. ಈ ಪರಿಕಲ್ಪನೆ ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯನ್ನು ಹೆಚ್ಚಿಸುತ್ತಿದೆ.

ಮೇಲ್ವರ್ಗದ ಮಹಿಳೆಯರು ಮನೆಯ ನಾಲ್ಕು ಗೋಡೆಯಲ್ಲಿ ಉಳಿಯುತ್ತಿದ್ದ ಸಮಯದಲ್ಲಿ ಕೆಳವರ್ಗದ ಮಹಿಳೆಯರು ಬಿಸಿಲು, ಚಳಿ, ಮಳೆಗಳಿಗೆ ಮೈಯೊಡ್ಡಿ ಕಪ್ಪಾದುದು ಸಹಜ. ಹಾಗಾಗಿ ಈ ವರ್ಣಭೇದದ ಸಮಸ್ಯೆ ವರ್ಗಭೇದ, ಜಾತಿಭೇದ ಹಾಗೂ ಶ್ರೇಣಿಕೃತ ಸಮಾಜದ ಪರಿಕಲ್ಪನೆಗೆ ಸಂಬಂಧಿಸಿರುವ ಸಮಸ್ಯೆಯಾಗಿದೆ. ಈ 'intimate wash' ಎಂಬ ಸರಕು ವರ್ಗಭೇದದ, ವರ್ಣಭೇದದ, ವಸಹಾತುಶಾಹಿಯ ಮತ್ತು ಲೈಂಗಿಕತೆಯ ಶೋಷಿತ ಮೌಲ್ಯಗಳನ್ನು ಒಳಗೊಂಡಿದೆ ಹಾಗೂ ಇವೆಲ್ಲಾ ಶೋಷಿತ ಮೌಲ್ಯಗಳು ಒಂದಕ್ಕೊಂದು ಸಂಬಂಧಿಸಿರುವುದೆಂಬುದಕ್ಕೆ ಸಾಕ್ಷಿಯಾಗಿದೆ. □

ಎಲ್ಲಿದೆ? ಇದು ಇವತ್ತಿನ 'ಆಧುನಿಕ' ಇಪ್ಪತ್ತೊಂದನೇಯ ಶತಮಾನದ ಕತೆಯೂ ಕೂಡ ಹೌದು.

Consumerism - ಬಂಡವಾಳಶಾಹಿ ಸಮಾಜದ ಶಾಪ


ಮಗಳು ಹುಟ್ಟಿದರೆ ಗುಲಾಬಿ ಬಣ್ಣದ ಫ್ರಾಕ್, ಮಗ ಹುಟ್ಟಿದರೆ ನೀಲಿ ಬಣ್ಣದ ಶರ್ಟು–ಪ್ಯಾಂಟು. ಹುಟ್ಟಿದ ಕ್ಷಣದಲ್ಲೇ, ಒಂದು ಮಗುವಿನ ಲಿಂಗತ್ವ ತೀರ್ಮಾನಿಸಲಾಗುತ್ತದೆ. ಇದು ಎಷ್ಟು ಪ್ರಭಾವಶಾಲಿಯೆಂದರೆ ಬಣ್ಣಗಳಲ್ಲಿ ಸಹ ಭೇದ ಭಾವವಿದೆ– pink for girls, blue for boys. ಅಕ್ಕ ತಂಗಿಯರೇ, ಯೋಚಿಸಿ ನೋಡಿ, ನಿಮ್ಮ ಹುಟ್ಟು ಹಬ್ಬಕ್ಕೆ ಕೊಟ್ಟಿದ್ದ ಉಡುಗೊರೆಗಳಲ್ಲಿ ಏನೇನಿವೆ? ಓಲೆ, ಮೇಕ್ ಅಪ್ ಕಿಟ್, ಸೆಂಟ್ ಬಾಟಲ್, ಮುತ್ತಿನ ಸರ, ಲಿಪ್ ಸ್ಟಿಕ್, ಸ್ಕಿನ್ ವೈಟನಿಂಗ್ ಕ್ರೀಮ್, ಮುಂತಾದವುಗಳು.... ಇದು ಇವತ್ತಿನ ಬಂಡವಾಳಶಾಹಿ ಸಮಾಜದ ವಿಷಾದಕರ ಪರಿಸ್ಥಿತಿ.

ಬಂಡವಾಳಶಾಹಿ ಆರ್ಥಿಕತೆಯ ಮುಖ್ಯ ಉದ್ದೇಶ: ಲಾಭ. ಈ 'ಲಾಭ' ಕ್ಕೆ ಯಾವ ಧರ್ಮವೂ ಇಲ್ಲ, ಯಾವ ನೀತಿ ನಿಯಮವೂ ಇಲ್ಲ. ಇಂತಹ ಸಂಧರ್ಭದಲ್ಲಿ ಹೆಣ್ಣಿನ ಸೌಂದರ್ಯದ ಮೇಲೆ ವಸ್ತುಗಳ ಮಾರಾಟ ಮಾಡುವುದು, ಒಂದು ಪ್ರಯೋಜನಕಾರಿ ಸಾಧನೆಯೆಂದು ನಾವು ನಮ್ಮ ಜಾಹಿರಾತುಗಳಲ್ಲೇ ಸ್ಪಷ್ಟವಾಗಿ ನೋಡಬಹುದು. 'ಎಕ್ಸ್'ಸೆಂಟ್ ಹೊಡೆದರೆ ನೀವು ಚಂದದ ಹುಡುಗಿಯರನ್ನು ಸೆಳೆಯಬಹುದು. ನೀವು ಇಂತಹ ರೇಜರ್ ಬ್ಲೇಡ್ ಬಳಸಿದರೆ ಹೆಂಗಸರು ನಿಮ್ಮ ಆಕರ್ಷಣೆಗೆ ಬಲಿಯಾಗುತ್ತಾರೆ. ಹೀಗೆ, ಮಹಿಳೆಯ ಲೈಂಗಿಕತೆಯ ಮೂಲಕ ವ್ಯಾಪಾರಿಗಳು ಗ್ರಾಹಕರನ್ನು, ವಿಶೇಷವಾಗಿ ಯುವಜನತೆಯನ್ನು ಆಕರ್ಷಿಸಲು ಪ್ರಯತ್ನಿಸುತ್ತಾರೆ. ಅವರ ನಿಪುಣತೆ ಇಷ್ಟಕ್ಕೆ ಸೀಮಿತವಲ್ಲ. ಪಿತೃಪ್ರಧಾನ ಮೌಲ್ಯಗಳನ್ನು ಒಪ್ಪಿಕೊಂಡಿರುವ ಹೆಂಗಸರ ಮಾನಸಿಕತೆಯ ಪ್ರಯೋಜನ ಪಡೆದು ಅವರು ವಸ್ತುಗಳನ್ನು ಮಾರಾಟ ಮಾಡಲು ಸಫಲರಾಗಿದ್ದಾರೆ. ಇದು ದಿನ ನಿತ್ಯ ಬೇರೆ ಬೇರೆ ಪ್ರಸಂಗಗಳಲ್ಲಿ ನಾವು ಕಾಣಬಹುದು. ಒಂದು ಉತ್ತಮ ಉದಾಹರಣೆ ಕೊಡಬೇಕೆಂದರೆ, ಈ ಅಂತರ್ ರಾಷ್ಟ್ರೀಯ ಸೌಂದರ್ಯ ಸ್ಪರ್ಧೆಗಳಲ್ಲಿ ಗೆದ್ದಿರುವ ತೃತೀಯ ಜಗತ್ತಿನ 'ಬ್ಯುಟಿ ಕ್ವೀನ್' ಗಳ ಕೈಯಲ್ಲಿ ಅಂತರ ರಾಷ್ಟ್ರೀಯ ಕಂಪೆನಿಗಳು ಅವರ ಉತ್ಪಾದನೆಯ ಮಾರಾಟ ಮಾಡಿಸುತ್ತಾರೆ– ಐಶ್ವರ್ಯ ರೈ ಈ ಫೇಸ್ ಕ್ರೀಮ್ ಹಚ್ಚಿ ಇಷ್ಟು ಸೌಂದರ್ಯ ಮತ್ತು ಪ್ರಖ್ಯಾತಿ ಪಡೆದಿದ್ದಾಳೆ, ನೀವು ಜನಪ್ರಿಯರಾಗಬೇಕಾದರೆ ನೀವೂ ಇದನ್ನು ಬಳಸಬೇಕು – ಇಂತಹ ಸಂದೇಶ ಕೊಡುವ ಹಲವಾರು ಜಾಹೀರಾತುಗಳು ಹುಡುಗಿಯರ ಮನಸ್ಸನ್ನು ಆಕ್ರಮಿಸುತ್ತಿವೆ ಮತ್ತು ಆ ವಿದೇಶಿ

ಉತ್ಪನ್ನಗಳಿಗೆ ತೃತೀಯ ಜಗತ್ತಿನ ದೇಶಗಳಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸುತ್ತಿವೆ. ಅಂಕಿ ಸಂಖ್ಯೆಗಳ ಪ್ರಕಾರ ಜಾಗತಿಕವಾಗಿ 18 ಟ್ರಿಲ್ಲಿಯನ್ ಡಾಲರ್ನಲ್ಲಿ 12 ಟ್ರಿಲ್ಲಿಯನ್ ಡಾಲರ್ ನಷ್ಟು ಖರ್ಚು ಮಹಿಳೆಯರಿಂದ ಆಗುತ್ತಿದೆ, ಇದು 2014ನಲ್ಲಿ 15 ಟ್ರಿಲಿಯನ್ ಮಾರ್ಕ್ ತಲಪುವ ನಿರೀಕ್ಷೆಯು ಇದೆ. ಇದು ಹೀಗೆ ಮುಂದು ವರೆದರೆ ಮಹಿಳೆಯರ ಶೋಷಣೆಗೆ ಹೊಸ ಹೊಸ ದಾರಿಗಳು ತೆರೆದುಕೊಳ್ಳಬಹುದು.

21 ನೇಯ ಶತಮಾನ– ಒಂದು ಆಷಾಡಭೂತಿ ಸಮಾಜ

ಹೆಂಗಸರಿಗೆ ತಮ್ಮ ಉಡುಪು, ನಡವಳಿಕೆಯನ್ನು ತಾವು ಇಚ್ಚಿಸಿದ ಹಾಗೆ ತೊಡುವ, ನಡೆದುಕೊಳ್ಳುವ ಸ್ವಾತಂತ್ರ್ಯ ಇರಬೇಕು ಆದರೆ ಇಲ್ಲಿ ನಾವು ಪರಿಶೀಲಿಸಬೇಕಾಗಿದ ಸಂಗತಿ ಏನೆಂದರೆ, ಇವತ್ತಿನ ಮಹಿಳೆಯರಿಗೆ ತಮ್ಮ ದೇಹವನ್ನು, ಲೈಂಗಿಕತೆಯನ್ನು ಪ್ರದರ್ಶಿಸುವ ತೀವ್ರ ಅವಶ್ಯಕತೆ ಎಲ್ಲಿಂದ ಮೂಡಿಬರುತ್ತಿದೆ? ಇದರ ಉತ್ತರ ನಮ್ಮ ಆಷಡಭೂತಿತ್ವ ಸಮಾಜದಲ್ಲಿಯೇ ನಾವು ನೋಡಬಹುದು. ಒಂದೆಡೆ ಬೇರೆ ಬೇರೆ ಮಾಧ್ಯಮಗಳ ಮೂಲಕ ನಮ್ಮ ಹೆಂಗಸರಿಗೆ ಹೇಳಲಾಗುತ್ತದೆ– ನಿಮ್ಮ ದೇಹ ಪುರುಷರ ನೋಟಕ್ಕೆಂದು ಸೃಷ್ಟಿಸಲಾಗಿದೆ, ನೀವು ಸುಂದರವಾಗಿದ್ದರೆ, ದೇಹ ತೋರುವ ಬಟ್ಟೆಯನ್ನು ಧರಿಸಿ ಆಕರ್ಷಕ ವಾಗಿದ್ದರೆ ನೀವು ಈ ಇಡೀ ಬ್ರಹ್ಮಾಂಡದ ಒಡತಿಯರಾಗ ಬಹುದು. ನೀವು ಬಯಸಿದ್ದೆಲ್ಲ ನನಸಾಗಬಹುದು. ಅದೇ ಸಮಾಜ, ಇನ್ನೊಂದೆಡೆ, ಹೆಂಗಸರು, ಗಂಡಸರನ್ನು ಸೆಳೆಯದೇ, ತಮ್ಮ ದೇಹದ ಪಾವಿತ್ರ್ಯವನ್ನು ರಕ್ಷಿಸಿ, ಸಂಕೋಚಿತ ಪತಿವ್ರತೆಯರಾಗಬೇಕೆಂದೂ ಹೇಳುತ್ತದೆ. ಉದಾಹರಣೆಗೆ, ಒಬ್ಬ ಹುಡುಗ ಬೇರೆ ಮಹಿಳೆಯರನ್ನು ವಕ್ರದೃಷ್ಟಿಯಿಂದ ನೋಡಬಹುದು, ಅವಳ ದೇಹಬಟ್ಟೆಯನ್ನು ನೋಡಿ ಸೀಟಿ ಹೊಡೆಯಬಹುದು ಆದರೆ ಅವನ ತಂಗಿಯಾಗಲಿ, ಗರ್ಲ್ ಫ್ರೆಂಡ್ ಆಗಲಿ, ಹೆಂಡತಿಯಾಗಲಿ, ಲಕ್ಷಣವಾಗಿರಬೇಕು, ನಮ್ರಳಾಗಿರಬೇಕು. ಸಮಾಜದ ಮಾನಸಿಕತೆಯೇ ಹೀಗಿರುವಾಗ, ಡ್ರೆಸ್ ಕೋಡ್‌ಗಳು, ನೈತಿಕ ಪೊಲಿಸಿಂಗ್, ಮರ್ಯಾದಾ ಹತ್ಯೆ ಸಮಾಜದ ದ್ವಿಮುಖ ನೀತಿಯ ಪ್ರತೀಕವಾಗಿ ಎದ್ದುನಿಲ್ಲುತ್ತವೆ.



ನಾವು ಹೆಂಗಸರಾಗಿ ಏನು ಮಾಡಬಹುದು? ಮೊದಲನೇಯ ದಾಗಿ, ನಮ್ಮ ನೋಟ ಹೊರಗಿನ ದೇಹದಿಂದ ಒಳಗಿನ ಸಾಮರ್ಥ್ಯ, ಶಕ್ತಿ ಮತ್ತು ಪ್ರತಿಭೆಯ ದಿಕ್ಕಿನಲ್ಲಿ ಹರಿಸಿ, ನಮ್ಮ ಅಂತರಂಗದ ಬಲವನ್ನು ಬೆಳೆಸೋಣ. ನಮ್ಮ ಸಬಲೀಕರಣಕ್ಕೆ ಇದೇ ಮೊದಲ ಹೆಜ್ಜೆ. ನಾವು ಅರ್ಥಮಾಡಿಕೊಳ್ಳಬೇಕಿದ್ದ ಸಿದ್ಧಾಂತ– 'beauty is only skin deep'- ನಮ್ಮ ದೇಹಗಳನ್ನು, ಯಾವುದೇ ಆಕಾರದಲ್ಲಿರಲಿ, ಯಾವುದೇ ಬಣ್ಣವಿರಲಿ ಹೆಮ್ಮೆಯಿಂದ ಸ್ವೀಕರಿಸೋಣ. ❑



ಅವಳ ಅಸ್ತಿತ್ವ

ಹೆಣ್ಣಿನ ಮಾತುಗಳನ್ನು ವಾದವೆಂದು
ಕರೆದು ಅಂದು ಬ್ರಾಂಡ ಮಾಡಿಬಿಟ್ಟಿತ್ತು ಪುರುಷ ಪ್ರಧಾನತೆ
ಆದರೆ ಇಂದಿಗೂ ಮುಂದುವರೆಯುತ್ತದೆ ಈ ಪ್ರಧಾನತೆ
ಹೆಣ್ಣಿನ ಅಧೀನತೆ. . . . .

ಹೆಣ್ಣಿನ ತುಡಿತ ಮಿಡಿತಗಳಿಗೆ ಅರ್ಥ ನೀಡದೆ
ಅನರ್ಥವೆಂದು ಬಿಟ್ಟ
ನೊಂದ ಮನದ ಅಳಲನ್ನು ಅಳಿಸುವುದು ಹೇಗೆ
ನೋವನ್ನು ನಗಿಸುವುದು ಹೇಗೆ
ಹಸಿವನ್ನು ಹಿಂಗಿಸುವುದು ಹೇಗೆ
ಬದುಕಿನ ಪಯಣ ಸಾಗಿಸುವುದು ಹೇಗೆ
ಅವನು ನೋಡಿದ್ದು ಬರಿ ಲೆಕ್ಕ, ರೊಕ್ಕ
ಏನಿದರೂ ಅವನದು ಬರೀ ರೊಕ್ಕದ ಲೆಕ್ಕ

ನೋಟಿನ ಮದದಲ್ಲಿ ಸಂಗಾತಿಯ ನೆನಪೆಲ್ಲಿ
ಅವಳು ನೆನಪಿಸುವ ಹೊತ್ತಲ್ಲಿ ಸಾಗಿದ್ದ ಬಲುದೂರ
ಆಳ, ಅಗಲ ನೋಡಿ ಬಿಟ್ಟು
ಅವಳು ಕರೆಯಲಿಲ್ಲ ಮರಳಿ
ಅವಳಿಗೂ ಗೊತ್ತಿತ್ತು ಅವಳ ಅಸ್ತಿತ್ವ

■ **ಸರೋಜಾ ಸಂತಿ,** ವಿಜಾಪುರ

ಭಾಗೀರಥಿ



■ ಚರಿತಾ ವಿ.

"ಕೆರೆಗೆ ಹಾರ" ಕಥಾ ಕವನದ ಆಧಾರಿತವಾದ, ಬರಗೂರು ರಾಮಚಂದ್ರಪ್ಪ ನಿರ್ದೇಶನದ "ಭಾಗೀರತಿ" ಚಿತ್ರವು ಮೊನ್ನೆ ಮೊನ್ನೆಯಷ್ಟೆ ತೆರೆಕಂಡಿತು. ಮೂಢನಂಬಿಕೆಗಳಿಂದಾಗುವ ಹೆಣ್ಣಿನ ಶೋಷಣೆಯನ್ನು ಊರಿಗೆ ಕೆರೆಯ ಅಗತ್ಯವನ್ನು ಅದರ ಪ್ರಾಮುಖ್ಯತೆಯನ್ನು ಪ್ರಮುಖವಾಗಿ ಉದ್ದೇಶಿಸಿ ಚಿತ್ರವನ್ನು ನಿರ್ದೇಶಿಸಲಾಗಿದೆ.

ಊರಿನವರ ಅನುಕೂಲಕ್ಕೆ ಕೆರೆ ಕಟ್ಟಿಸಬೇಕೆಂಬ ಭಾಗೀರಥಿಯ ಪುಟ್ಟ ಕನಸು, ಅದನ್ನು ನನಸು ಮಾಡಲು ಯತ್ನಿಸಿದ ಪ್ರಿಯಕರ, ಕೆರೆ ಕಟ್ಟುವಾಗ ಅವರಿಬ್ಬರ ನಡುವಿನ ಒಡನಾಟ, ಈ ಕೆರೆಯಿಂದಲೇ ತಮ್ಮಿಬ್ಬರ ನಡುವೆ ಪ್ರೀತಿ ಹುಟ್ಟಿತೆಂಬ ಬಲವಾದ ನಂಬಿಕೆ, ಕೆರೆಯಲ್ಲಿಯೇ ನಡೆದ ಇಬ್ಬರ ಮದುವೆ – ಹೀಗೆ ಇಬ್ಬರ ಪ್ರೀತಿಗೆ ಕೆರೆ ದ್ಯೋತಕವಾಗಿರುತ್ತದೆ. ಆದರೆ ಆ ಕೆರೆಗೆ ನೀರು ತುಂಬದಿದ್ದಾಗ, ಆ ಊರಿನವರ ಮೂಢನಂಬಿಕೆಗೆ ಬಲಿಯಾಗಬೇಕಾದದ್ದು ಭಾಗೀರಥಿ. ಊರಿನವರ ಸೌಲಭ್ಯಕ್ಕಾಗಿ ಕೆರೆಯ ಆಸೆಯನ್ನು ಕಂಡ ಭಾಗೀರಥಿಯನ್ನು, ಆಸೆಯೇ ಬಲಿತೆಗೆದುಕೊಳ್ಳುತ್ತದೆಂದೊಮ್ಮೆ ಅನ್ನಿಸಿದರೂ, ಕೇವಲ ಜನರ ಮೂಢನಂಬಿಕೆಯಿಂದಾಗಿ ಮುಗ್ಧ ಹೆಣ್ಣುಮಗಳೊಬ್ಬಳ ಬಲಿಯಾಗುತ್ತದೆಂದು ಹೇಳುವುದೇ ಸೂಕ್ತ.

ಭಾಗೀರತಿಗೆ ಕೆರೆಗೆ ಬಲಿಯಾಗಬೇಕೆಂಬುದನ್ನು ಆಕೆಗೆ ಯಾರು ನೇರವಾಗಿ ತಿಳಿಸುವುದಿಲ್ಲ. ಭಾಗೀರಥಿಯೇ ಕೆರೆಗೆ ಹಾರವಾಗಬೇಕೆಂದು ನಿರ್ಧರಿಸಿದ ಮಲ್ಲಣ್ಣಗೌಡನೇ ಆಕೆಯ ಎದುರು ನಿಂತು ವಿಷಯ ಹೇಳಲು ಹಿಂಜರಿಯುತ್ತಾನೆ. ತನ್ನ ಸೊಸೆಯನ್ನು ಬಲಿ ಕೊಡಬೇಕೆಂಬ ನೋವಿಗಿಂತ, ಊರಿಗೆ ಅನುಕೂಲವಾಗುವುದು ಎಂಬುದೇ ಅವನಿಗೆ ಮುಖ್ಯವೆನಿಸುತ್ತದೆ. ಎಷ್ಟೇ ಆದರೂ ಒಬ್ಬ ಗಂಡಸು ಲಾಭವನ್ನಷ್ಟೇ ಲೆಕ್ಕಿಸುತ್ತಾನೆ ಹೊರತು ಹೆಣ್ಣಿನ ಆಸೆ, ಭಾವನೆಗಳ ಬಗ್ಗೆ ಅವನಿಗೆ ನಿಕೃಷ್ಟ ಭಾವ.

ಮಲ್ಲಣ್ಣಗೌಡನ ನಿರ್ಧಾರವನ್ನು ಪ್ರಶ್ನಿಸಲು ಅಧಿಕಾರವಿಲ್ಲದೆ, ಬದುಕಿನ ಬಗ್ಗೆ ಕಂಡ ನೂರಾರು ಕನಸುಗಳನ್ನು ಎದೆಯ ಗೂಡಲ್ಲೇ ಬಚ್ಚಿಟ್ಟುಕೊಂಡು, ಸಾವಿನ ಬಾಗಿಲನ್ನು ತಟ್ಟಲು ಹೊರಟ ಭಾಗೀರಥಿಗೆ ಇರುವ ಕಡೆಯ ಆಸೆ, ತನ್ನವನಾದ ಮಹದೇವರಾಯನೊಡನೆ ಮಾತನಾಡಬೇಕು ಎಂಬುದು. ಆದರೆ ಅವಳ ಈ ಆಸೆ ಪೂರ್ಣವಾಗುವುದೇ?

ಒಂದೆಡೆ, ಒಬ್ಬ ಗಂಡಸು ಹೆಣ್ಣಿನ ಶೋಷಣೆಗೆ ಕಾರಣವಾದರೆ, ಇನ್ನೊಂದೆಡೆ ಭಾಗೀರಥಿಯ ಭಾವ ಅವಳ ಪರ ನಿಂತು, ತಂದೆಯ ನಿರ್ಧಾರವನ್ನು ವಿರೋಧಿಸುತ್ತಾನೆ. ಆದರೆ ತಾಯಿಯ ಅಸಾಹಯಕತೆ ಹಾಗೂ ತಂದೆಯ ನಿರ್ಲಕ್ಷ್ಯ ಉತ್ತರದಿಂದಾಗಿ ಅವನ ಮಾತಿಗೆ ಬೆಲೆ ಇರದೆ ಹೋಗುತ್ತದೆ. ಭಾಗೀರಥಿಯ ಕಡೆಯ ಆಸೆಯನ್ನಾದರೂ ಪೂರೈಸುವ ಸಲುವಾಗಿ ಹಾಗೂ ಮಹದೇವರಾಯ ಬಂದರೆ ಎಲ್ಲರ ಮನಸ್ಸು ಬದಲಾಗಬಹುದು ಎಂಬ ಒಂದೇ ಒಂದು ಆಸೆಯಿಂದ ತಮ್ಮನನ್ನು ಕರೆತರಲು ಹೊರಡುತ್ತಾನೆ. ಆದರೆ ಅವರಿಬ್ಬರು ಬರುವುದರಲ್ಲಿ ಎಲ್ಲವೂ ಬದಲಾಗಿರುತ್ತದೆ. ಮಹದೇವರಾಯನನ್ನು ಕಡೆಯ ಸಲ ಕೈ ಹಿಡಿದು ಮಾತನಾಡಿಸಬೇಕೆಂದಿದ್ದ ಭಾಗೀರಥಿ, ಕೈಗೆಟುಕದಷ್ಟು ದೂರ ಹೋಗಿರುತ್ತಾಳೆ. ನಡೆದ ಘಟನೆಯನ್ನು ಭಾಗೀರಥಿಯ ಜೀವದ ಗೆಳತಿಯಿಂದ ತಿಳಿದ ಮಹದೇವರಾಯ, ಭಾಗೀರತಿಯನ್ನು ಸೇರಬೇಕೆಂಬ ಸಲುವಾಗಿ ಕೆರೆಗೆ ಹಾರುತ್ತಾನೆ. ಕೆರೆ ತುಂಬುವುದಕ್ಕೊಂದು ಬಲಿ, ತುಂಬಿದ ಕರೆಗೆ ಒಂದು ಬಲಿ. ನೀರಿಲ್ಲದ ಕೆರೆಯಲ್ಲಿ ಶುರುವಾದ ಪ್ರೀತಿಯ ಕಥೆ, ತುಂಬಿದ ಕೆರೆಯಲ್ಲಿ ಮುಕ್ತಾಯವಾಗುತ್ತದೆ.

ಹೆಣ್ಣು ಆಸೆ ಪಡುವುದು ತಪ್ಪೇ? ಮೂಢನಂಬಿಕೆಗಳಿಗೆ ಹೆಚ್ಚಾಗಿ ಹೆಣ್ಣನ್ನೇ ಏಕೆ ಹಿಂಸಿಸುತ್ತಾರೆ? ಬಲಿಯಾಗಬೇಕಿದ್ದಲ್ಲಿ ಹೆಣ್ಣು ಮಗಳೇ ಏಕೆ ಬಲಿಯಾಗಬೇಕಿತ್ತು? ಈ ಮೂಢನಂಬಿಕೆಗಳಿಗೆ ಅರ್ಥವಿದೆಯೇ? ಇಲ್ಲವಾದರೆ, ಭಾಗೀರತಿ ಕೆರೆಗೆ ಹಾರವಾದ ಕೂಡಲೇ ಕೆರೆ ತುಂಬಿದ್ದು ಸುಳ್ಳೇ? ಭಾಗೀರತಿ ಬಲಿಯಾಗದಿದ್ದರೂ ಯಾವತ್ತಾದರೊಂದು ದಿನ ಕೆರೆ ತುಂಬುತ್ತಿತ್ತೆ? ಈ ತರಹದ ಹಲವಾರು ಪ್ರಶ್ನೆಗಳು ಮನಸ್ಸಿನಲ್ಲಿ ಮೂಡುತ್ತವೆ. ಆದರೆ ಚಿತ್ರದಲ್ಲಿ ಇವ್ಯಾವಕ್ಕೂ ಉತ್ತರವಿಲ್ಲ.

ಭಾಗೀರಥಿಯನ್ನು ಒಂದು ಮಾತೂ ಕೇಳದೇ, ಆಕೆಯನ್ನು ಕೆರೆಗೆ ಹಾರವನ್ನಾಗಿ ಮಾಡುವ ಮಲ್ಲಣ್ಣಗೌಡನ ನಿರ್ಧಾರವನ್ನು ಆತನ ಹೆಂಡತಿ ಕೂಡ ಪ್ರಶ್ನಿಸಲಾರದೆ ಅಸಾಹಯಕಳಾಗುತ್ತಾಳೆ. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎಂಬ ಮಾತಿನಂತೆ, ಭಾಗೀರಥಿಯ ತಂದೆ ತಾಯಂದಿರು ಗೌಡರನ್ನು ಪ್ರಶ್ನಿಸುವುದಿಲ್ಲ. ಆಕೆಯ ಬಗ್ಗೆ ಪ್ರತಿ ವಿಷಯದಲ್ಲೂ ಕಾಳಜಿ ವಹಿಸುತ್ತಿದ್ದ ಆಕೆಯ ಅಕ್ಕ, ಈ ವಿಷಯದಲ್ಲಿ ಮೌನಳಾಗುತ್ತಾಳೆ. ಈ ಮೂಢನಂಬಿಕೆಯ ಆಚರಣೆಯನ್ನು ಯಾರೂ ಪ್ರಶ್ನಿಸುವುದಿಲ್ಲ. ಅದನ್ನು ನಿಲ್ಲಿಸಲು ಯಾರೂ ಮುಂದಾಗುವುದಿಲ್ಲ.

ಹೀಗೆ ಹೆಣ್ಣಿನ ಶೋಷಣೆಯ ಬಗ್ಗೆ ಚಿತ್ರಿಸಿರುವ ಬರಗೂರವರು, ಇನ್ನೊಂದೆಡೆ, ಊರಿಗೆ ಕೆರೆ ಅತ್ಯಗತ್ಯ ಎಂಬುದನ್ನು ತಿಳಿಸಲು ಯತ್ನಿಸಿದ್ದಾರೆ. ಭಾಗೀರಥಿ ಮಹದೇವರಾಯರಿಂದ ಪ್ರಭಾವಿತನಾಗಿ "ಪ್ರತಿ ಊರಿನಲ್ಲೂ ಕೆರೆಯನ್ನು ಕಟ್ಟಿಸುತ್ತೇನೆ" ಎಂಬ ರಾಜನ ಪ್ರತಿಜ್ಞೆ ಹಾಗೂ ಕೆರೆಯ ನೀರು ತುಂಬುವುದಕ್ಕೆ ಒಂದು ಜೀವ ಹೋದರೆ, ನೂರಾರು ಜೀವ ಬದುಕಬಹುದೆಂಬ ಮಲ್ಲಣ್ಣಗೌಡರ ಆಲೋಚನೆ ಕೆರೆಯ ಪ್ರಾಮುಖ್ಯತೆಯನ್ನು ಬಿಂಬಿಸುತ್ತದೆ.

ಬರಗೂರವರು ಈ ಎಲ್ಲಾ ಅಂಶಗಳನ್ನು ಉದ್ದೇಶಿಸಿ ಚಿತ್ರವನ್ನು ನಿರ್ದೇಶಿಸಿದ್ದರಾದರೂ ಈ ಅಂಶಗಳು ಜನರ ಮನಸ್ಸನ್ನು ಮುಟ್ಟುವಲ್ಲಿ ವಿಫಲವಾಗಿದೆ. ಸಂಭಾಷಣೆಯು ಕೆಲವೊಂದು ಪ್ರಸಂಗಗಳಲ್ಲಿ ಮನಕುಲುಕುವುದಾದರೂ, ಮನಸ್ಸನ್ನು ಹಿಡಿದಿಡುವಷ್ಟು ಬಲವಾಗಿಲ್ಲ. ಚಿತ್ರವು ಅಷ್ಟಾಗಿ ಪ್ರೇಕ್ಷಕರ ಮನಸೆಳೆಯಲಿಲ್ಲ. ಇನ್ನೂ ಪರಿಣಾಮಕಾರಿಯಾಗಿ ಮೂಡಿಬರಬಹುದಾಗಿತ್ತು. ❑



ಸ್ವಾತಂತ್ರ್ಯದ ಹಾದಿ..ಇನ್ನೆಷ್ಟು ದೂರ?

■ ಸಮುದ್ಯತಾ ಕಂಜರ್ಪಣೆ

ಮಹಿಳಾ ಸ್ವಾತಂತ್ರ್ಯ.. ಈ ಪದದ ಅರ್ಥ ಹೇಳುವುದು ಸುಲಭ. ಆದರೆ ಇದರ ಭಾವಾರ್ಥ ಕ್ಲಿಷ್ಟವಾದದ್ದು. ಇಂದಿನ ದಿನಗಳಲ್ಲಿ ಮಹಿಳೆಗೆ ದೊರಕುತ್ತಿರುವ ಸ್ವಾತಂತ್ರ್ಯದ ಕುರಿತಾಗಿ ಯೋಚಿಸಿದರೆ, ಈ ಪದದ ಅರ್ಥ ಇನ್ನೂ ದೊರೆತಿಲ್ಲ ಎಂದು ಸ್ಪಷ್ಟವಾಗಿ ಕಾಣುತ್ತದೆ.


ಇಂದು ಮಹಿಳೆ ಎಲ್ಲ ಕ್ಷೇತ್ರದಲ್ಲಿಯೂ ಸಾಧನೆ ಮಾಡುತ್ತಿದ್ದಾಳೆ, ಪುರುಷನಿಗೆ ಸರಿಸಾಟಿಯಾಗಿ ನಿಲ್ಲುತ್ತಿದ್ದಾಳೆ. ಆದರೆ ಕೇವಲ ಕೆಲವು ಮಹಿಳೆಯರ ಸಾಧನೆಯನ್ನು ಮಹಿಳಾ ಸಬಲೀಕರಣ ಎಂದು ಹೇಳಲಾಗದು. ಪುರುಷ ಪ್ರಧಾನ ಸಮಾಜದಿಂದ ಮಹಿಳೆ ಕಳೆದುಕೊಳ್ಳುತ್ತಿರುವುದು ಒಂದೆರಡಲ್ಲ.. ಬೆಲೆಕಟ್ಟಲಾಗದಂತದ್ದು. ಹೆಣ್ಣಾಗಿ ಜೀವಿಸುವ ಸ್ವಾತಂತ್ರ್ಯ, ಭಾವನಾತ್ಮಕ ಸ್ವಾತಂತ್ರ್ಯ, ವಿದ್ಯಾಭ್ಯಾಸ ಗಳಿಸುವ ಸ್ವಾತಂತ್ರ್ಯ, ಉತ್ತಮ ಪೌಷ್ಟಿಕ ಆಹಾರ ಸೇವಿಸುವ ಸ್ವಾತಂತ್ರ್ಯ, ದುಡಿಯುವ ಹಾಗೂ ತನ್ನ ಜೀವನದ ಮುಖ್ಯ ಘಟ್ಟಗಳಲ್ಲಿ ತನ್ನ ಮದುವೆ, ಮಕ್ಕಳು, ಮನೆ ಮುಂತಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ, ತನ್ನ ದೇಹದ ಮೇಲಿನ ಸ್ವಾತಂತ್ರ್ಯ ಎಲ್ಲವನ್ನೂ ಮಹಿಳೆ ಇಂದು ಹೋರಾಟದ ಮೂಲಕವೇ ಪಡೆದುಕೊಳ್ಳಬೇಕಾದ ಸ್ಥಿತಿ ಬಂದೊದಗಿರುವುದು ಶೋಚನೀಯ. ಮಹಿಳೆಯಾದ ಏಕೈಕ ಕಾರಣಕ್ಕೆ ತನ್ನ ಜೀವನದುದ್ದಕ್ಕೂ ಹೋರಾಡುತ್ತಿರಬೇಕಾಗಿದೆ. ಈ ಹೋರಾಟದ ಫಲ ಸಿಕ್ಕರೂ ಸಿಗಬಹುದು, ಸಿಗದೆಯೂ ಇರಬಹುದು. ಆದರೆ ಈ ಹೋರಾಟದ ಪಯಣದುದ್ದಕ್ಕೂ ಮಹಿಳೆಗೆ ಸಮಾಜ ಹಣೆಪಟ್ಟಿಗಳನ್ನು ಕಟ್ಟುವುದು ಮಾತ್ರ ನಿಜ. ಯೋಚಿಸಿದಂತೆ, ಈ ವಾಸ್ತವದ ಅರಿವು ಇನ್ನಷ್ಟು ಭಯಾನಕವಾಗಿ ಕಾಣಿಸತೊಡಗುತ್ತಿದೆ.

ಇತ್ತೀಚೆಗಷ್ಟೇ ಗುವಾಹಟಿಯಲ್ಲಿ ಅಪ್ರಾಪ್ತ ವಯಸ್ಸಿನ ಹೆಣ್ಣುಮಗಳೊಬ್ಬಳನ್ನು 15–20 ಪುರುಷರು ಬೆತ್ತಲುಗೊಳಿಸಲು ಯತ್ನಿಸಿದ ಪ್ರಕರಣವಂತೂ ಮಹಿಳಾ ಸ್ವಾತಂತ್ರ್ಯವನ್ನು ಪ್ರಶ್ನಿಸುತ್ತದೆ. ನಡುರಸ್ತೆಯಲ್ಲಿ ಆ ಹೆಣ್ಣುಮಗು ಈ ದಾಳಿಗೊಳಗಾದಾಗ ಸುತ್ತ ನೆರೆದ ಯಾರೊಬ್ಬರೂ ಅವಳ ಸಹಾಯಕ್ಕೆ ಬರಲಿಲ್ಲ. ಸುಮಾರು 29 ನಿಮಿಷ ನಡೆದ ಈ ದಾಳಿ ಆ ಹುಡುಗಿಯ ಮನಸ್ಥಿತಿಯ ಮೇಲೆ ಯಾವ ರೀತಿ ಪರಿಣಾಮ ಬೀರಿರಬಹುದು...? ಎಲ್ಲಕ್ಕಿಂತ ಹೆಚ್ಚಾಗಿ ಖಾಸಗಿ ವಾಹಿನಿಯೊಂದರ ಸಂಪಾದಕ ತನಗೆ ಸಿಗುವ ಎಕ್ಸ್‌ಕ್ಲೂಸಿವ್ ವಾರ್ತೆಯ ಆಸೆಯಿಂದಾಗಿ ಈ ಹೇಯ ಕೃತ್ಯವನ್ನು ಪ್ರೋತ್ಸಾಹಿಸಿದನೆಂಬ ಸತ್ಯ ದಿಗಿಲು ಮೂಡಿಸಿದೆ. ಒಬ್ಬ ಹೆಣ್ಣುಮಗಳ ಮೇಲಾಗುತ್ತಿರುವ ದಾಳಿಯನ್ನು ತಡೆಯದೇ ಅದನ್ನು ವರದಿ ಮಾಡುತ್ತಾ ನಿಂತನೆಂದರೆ ಮಹಿಳೆಯ ಕುರಿತಾದವನ ಭಾವನೆ ಇನ್ನೆಂತಾ ಕೀಳು ಮಟ್ಟದ್ದಿರಬಹುದು? ಎಲೆಕ್ಟ್ರಾನಿಕ್ ಮೀಡಿಯಾದ ಜನಪ್ರಿಯತೆಯ ಪರಿಣಾಮವಾಗಿ ಮಹಿಳೆಯ ಮೇಲೆ ನಡೆಯುವ ದಾಳಿ, ಅತ್ಯಾಚಾರ ಎಲ್ಲವೂ ಅಮಾನವೀಯವಾಗಿ ಕಾಣುವ ಬದಲು ಕೇವಲ human interest (sensational) story ಆಗುತ್ತದೆ. ಆ ಸನ್ನಿವೇಶದಲ್ಲಿ ತಮ್ಮ ಅಕ್ಕ ತಂಗಿ, ತಾಯಿ ಅಥವಾ ಮಗಳು ಇದ್ದಾಗ ಅವರು ಏನು ಮಾಡುತ್ತಿದ್ದರು ಎನ್ನುವುದು ಬೇರೆ ಪ್ರಶ್ನೆ. ಅದಕ್ಕೆ ಯಾರೂ ಉತ್ತರವನ್ನು ನೀಡುವುದಿಲ್ಲ. ಇಂತಹ ಘಟನೆಗಳು ಒಂದೆರಡೇನಲ್ಲ. ಸಾರ್ವಜನಿಕರ ಕಣ್ಣಿಗೆ ಬೀಳದ ಇಂತಹಾ ನೂರಾರು ಪ್ರಕರಣಗಳು ದಿನಪ್ರತಿ ನಡೆಯುತ್ತಿರುತ್ತವೆ. ಹಾಡುಹಗಲೇ ನಡೆಯುವ ಇಂತಹಾ ಘಟನೆಗಳಿಂದ ರಾಮರಾಜ್ಯದ ಕಲ್ಪನೆ ನನಸಾಗುವುದಿರಲಿ, ಅಂತಹಾ ಕನಸು ಕಾಣುವುದೂ ಅಸಾಧ್ಯವೆನಿಸುತ್ತದೆ. ತಮ್ಮ ಮೇಲೆ ನಡೆದ ದಾಳಿಗೆ ಮಹಿಳೆ ನ್ಯಾಯದ ಮೊರೆ ಹೋಗುವುದನ್ನೇ ಅವಮಾನವೆಂಬಂತೆ ಭಾವಿಸಲಾಗುತ್ತದೆ. ಪ್ರಕರಣಗಳನ್ನು ತಮ್ಮತಮ್ಮಲ್ಲೇ ಮುಚ್ಚಿಹಾಕುವ ಮಾರ್ಗಗಳನ್ನು ಸಮಾಜ ಹುಡುಕುತ್ತಿದೆ.

ಮೊನ್ನೆ ಮೊನ್ನೆಯಷ್ಟೇ ಮಂಗಳೂರಿನ ಪಡೀಲಿನಲ್ಲಿ ಯುವತಿಯರ ಮೇಲೆ ನಡೆದ ದಾಳಿಯೂ ಮಹಿಳಾ ಸ್ವಾತಂತ್ರ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಹಿಂದುತ್ವದ ಕುರುಡು ಸಮೂಹ ಸನ್ನಿಗಳಿಗೆ ಯಾವ ತಪ್ಪನ್ನೂ ಮಾಡದ ಮುಗ್ಧ ವಿದ್ಯಾರ್ಥಿನಿಯರು ಬಲಿಯಾಗಿದ್ದಾರೆ. ಯುವತಿಯರ ಮೇಲೆ ಇಂತಹಾ ಅಮಾನವೀಯ ದಾಳಿ ನಡೆಯುವುದನ್ನು ನೋಡಿಯೂ ತಡೆಯದಿರುವುದು ಮಾಧ್ಯಮದವರ ವಿಕೃತ ಮನೋಭಾವವನ್ನು ತೋರಿಸುತ್ತದೆ. ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯ ಮೇಲೆ ಇಂದು ಹಲವಾರು ಕಟ್ಟುಪಾಡುಗಳನ್ನು ಹೇರಲಾಗುತ್ತಿದೆ. ಮಹಿಳೆಯ ಎಲ್ಲ ಸ್ವಾತಂತ್ರ್ಯವನ್ನೂ ಕಿತ್ತುಕೊಳ್ಳಲಾಗುತ್ತಿದೆ.

ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯ ಸಾಧನೆಗಳು ಜಾಸ್ತಿಯಾದಂತೆ, ಮಹಿಳೆಯ ಮೇಲೆ ನಡೆಯುತ್ತಿರುವ ಕ್ರೌರ್ಯವೂ ಜಾಸ್ತಿಯಾಗುತ್ತಿದೆ. ತನ್ನ ಪ್ರತಿಯೊಂದು ಹೆಜ್ಜೆಯನ್ನೂ ಮಹಿಳೆ ಆತಂಕದಿಂದಲೇ ಇಡುವಂತಾಗುತ್ತಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 64 ವರ್ಷಗಳಾದರೂ ಮಹಿಳೆ ತನ್ನ ಸ್ವಾತಂತ್ರ್ಯಕ್ಕೆ ಇನ್ನೂ ಹೋರಾಡುತ್ತಲೇ ಇದ್ದಾಳೆ. ಹೋರಾಟ ಆಕೆಯ ಅನಿವಾರ್ಯ ಅಗತ್ಯವಾಗಿದೆ. ಕ್ರೌರ್ಯ, ದಬ್ಬಾಳಿಕೆಯನ್ನು ಪ್ರತಿಭಟಿಸಿ ನ್ಯಾಯಕ್ಕಾಗಿ ಹೋರಾಡುವ ಧೈರ್ಯವನ್ನು ಆಕೆ ತನ್ನಿಂದ ತಾನೇ ಹೊಂದುವುದು ಮುಖ್ಯ. ಅದಕ್ಕಿಂತಲೂ ಮುಖ್ಯ ಆಕೆಗೆ ಈ ಧೈರ್ಯ ಹೊಂದಲು ಬೇಕಾದ ಬೆಂಬಲವನ್ನು ಪ್ರತೀ ಸಂದರ್ಭದಲ್ಲೂ ಸುತ್ತಲಿನ ಸಮುದಾಯ ನೀಡುವಂತಾಗಬೇಕು. ತನ್ನ ಸಂಕಷ್ಟವನ್ನು ಎದುರಿಸಲು ಉಳಿದವರೂ ಜೊತೆಗಿದ್ದಾರೆ ಎಂಬ ವಿಶ್ವಾಸ ಆಕೆಗೆ ಬಂದರೆ, ಆಕೆಯ ಧೈರ್ಯ ನೂರ್ಮಡಿಯಾಗುತ್ತದೆ. ಈ ಸಂಘಟಿತ ಬೆಂಬಲ ಹೆಚ್ಚಾದಷ್ಟೂ ಮಹಿಳೆಯ ಹೋರಾಟ ಹೆಚ್ಚು ಆಳವಾಗುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ತನ್ನ ಸ್ಥಾನವನ್ನು ಸ್ಥಾಪಿಸಿಕೊಳ್ಳುವುದೂ ಸಾಧ್ಯ.

ಭಾರತದ ಪ್ರತಿಯೊಂದು ಮೂಲೆಯ ಮಹಿಳೆಯರು ತಮ್ಮ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವಷ್ಟು ಬಲಿಷ್ಠರಾದಾಗ, ತಮ್ಮ ಸಮಸ್ಯೆಗಳನ್ನು ಸಹಿಸಿಕೊಳ್ಳುವ ಬದಲು ಪರಿಹರಿಸುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಾಗ ಮಾತ್ರ ಮಹಿಳಾ ಸ್ವಾತಂತ್ರ್ಯದ ನಿಜವಾದ ಅರ್ಥ ದೊರಕಬಹುದೇನೋ? ❑



ಬೀದಿಯಲ್ಲಿ ನಾನು ಹೊರಳಾಡಬಾರದು
ಯಾಕೆಂದರೆ ಅದಕ್ಕೆ ನಾಲ್ಕು ಗೋಡೆಗಳಿಲ್ಲ.
ಅದರ ಅನೇಕ ಬಣ್ಣ, ವಾಸನೆ, ನೋಟ ನನ್ನ
ಸ್ಪರ್ಶಿಸಬಾರದು
ಯಾಕೆಂದರೆ ನಾನು ಪವಿತ್ರಳು.
ಪಾನಕೂಟಗಳಲ್ಲಿ, ವಿಹಾರತಾಣಗಳಲ್ಲಿ ನಾನು
ಕಾಣಸಿಗಬಾರದು, ಯಾಕೆಂದರೆ
ನನ್ನಲ್ಲಿ ಅವಲಂಬನೆಯ ಗುರುತುಗಳು ಕಾಣುತ್ತಿಲ್ಲ,
ವೀರ್ಯಾಣುಗಳೂ ಸಹ ತನ್ನದೇ ಜಾತಿಯ
ಸಾರೋಗೇಟ್ ತಾಯಂದಿರನ್ನು ಹುಡುಕುತ್ತಿರುವ
ವೇಳೆ, ಗುಲಾಮಳ ದಾಸಿಯಂತೆ
ನಿನ್ನ ಮೇಲೆ ಹರಿಹಾಯ್ದದಕ್ಕೆ ಕ್ಷಮಿಸು ಮಗು.

■ಸರಸ್ವತಿ ಕೆ.ಬಿ.



ಮೊದಲ ಅಧ್ಯಕ್ಷೆ

■ ದಿಶಾ.ಕೆ.ಆರ್.

ಆಫ್ರಿಕ ಯೂನಿಯನ್ ಕಮಿಷನ್ನಿನ ಮೊಟ್ಟಮೊದಲ ಅಧ್ಯಕ್ಷೆಯ ಸ್ಥಾನಕ್ಕೆ ಪ್ರಬಲ ವಿರೋಧದ ಮಧ್ಯೆಯೂ ಆಯ್ಕೆಯಾಗಿರುವ ನಕೋಸಜಾನ ದಲಾಮಿನಿ ಝುಮ ಸೌತಾಫ್ರಿಕದ ನಟಾಲಿನಲ್ಲಿ 1949ರಲ್ಲಿ ಜನಿಸಿದರು. ದಲಾಮಿನಿ ಝುಮ ನಡೆದು ಬಂದದ್ದೆಲ್ಲ ರಾಜಕೀಯ ಹಾದಿ. ಜೀವಶಾಸ್ತ್ರ ಹಾಗೂ ಸಸ್ಯಶಾಸ್ತ್ರದಲ್ಲಿ ಪದವಿ ಮುಗಿಸಿ ನಂತರ ವೈದ್ಯಕೀಯ ಶಿಕ್ಷಣವನ್ನು ನಟಾಲ್ ಹಾಗೂ ಬ್ರಿಸ್ಟಲ್ ವಿಶ್ವವಿದ್ಯಾಲಯದಲ್ಲಿ ಪಡೆದರು. ವೈದ್ಯಕೀಯ ಶಿಕ್ಷಣವನ್ನು ಪಡೆಯುತ್ತಿದ್ದ ಸಂದರ್ಭದಲ್ಲಿ ದಲಾಮಿನಿ ಆಫ್ರಿಕ ನ್ಯಾಷನಲ್ ಕಾಂಗ್ರೆಸ್(ಎನ್‌ಸಿ)ನ ಕಾರ್ಯಕರ್ತೆಯಾಗಿ ಹಾಗೂ ಸೌತಾಫ್ರಿಕಾದ ವಿದ್ಯಾರ್ಥಿ ಸಂಘಟನೆಯ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದರು. ಸ್ವಾಜಿಲ್ಯಾಂಡಿನಲ್ಲಿ ವೈದ್ಯರಾಗಿ ಕೆಲಸ ಸಮಯದಲ್ಲಿ ಈಗಿನ ಎನ್‌ಸಿಯ ಅಧ್ಯಕ್ಷರಾಗಿರುವ ಜಾಕೊಬ್ ಝುಮರವರನ್ನು ಭೇಟಿಯಾಗಿ ನಂತರ ಮದುವೆಯಾದರು. ಒಂದಷ್ಟು ವರುಷ ಎನ್‌ಸಿಯ ಸ್ಥಳೀಯ ಆರೋಗ್ಯ ಸಮಿತಿಯಲ್ಲಿ ಕೆಲಸ ಮಾಡಿದರು.

1994ರಲ್ಲಿ ನಡೆದ ಮೊದಲ ಚುನಾವಣೆ ನಂತರ ಸೌತಾಫ್ರಿಕಾದ ಅಧ್ಯಕ್ಷರಾದ ನೆಲ್ಸನ್ ಮಂಡೇಲರವರು ದಲಾಮಿನಿಯವರನ್ನು ಆರೋಗ್ಯ ಮಂತ್ರಿಯಾಗಿ ನೇಮಿಸಿದರು. ಆರೋಗ್ಯದ ಸಚಿವೆಯಾಗಿ ಎಲ್ಲಾ ಬಡ ಜನರಿಗೆ ಮೂಲಭೂತ ಆರೋಗ್ಯ ಸೌಕರ್ಯವನ್ನು ಲಭಿಸುವಂತೆ ಮಾಡಿದರು ಮಾತ್ರವಲ್ಲದೆ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದರು.

ದಲಾಮಿನಿ ಝುಮರವರು ನಂತರ ವಿದೇಶಾಂಗ ಸಚಿವೆಯಾಗಿ. ಗೃಹ ಸಚಿವೆಯಾಗಿ ಸೇವೆ ಸಲ್ಲಿಸಿದ್ದಾರೆ. 2012ರ ಜುಲೈ 15ರಂದು ಆಫ್ರಿಕ ಯೂನಿಯನ್ ಕಮಿಷನ್ನಿನ ಮೊಟ್ಟ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಆಯ್ಕೆಯಾದರು.

ಇದೇ ಮೊದಲನೇ ಬಾರಿಗೆ ಒಬ್ಬ ಕಪ್ಪು ಮಹಿಳೆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದನ್ನು ಕಮಿಷನ್ನಿನ ಕೆಲವರು ವಿರೋಧಿಸಿದರೆ ಇನ್ನು ಕೆಲವರು 'ಈ ಜಯ ನಮ್ಮ ದೇಶಕ್ಕೆ, ಆಫ್ರಿಕ ಖಂಡಕ್ಕೆ, ನಮ್ಮೆಲ್ಲರ ಒಗ್ಗಟ್ಟಿಗೆ ಹಾಗೂ ಸ್ತ್ರೀ ಸಬಲೀಕರಣಕ್ಕೆ ಮಹತ್ವವಾದದ್ದು' ಎಂದು ದಲಾಮಿನಿ ಝುಮರವರನ್ನು ತಮ್ಮ ಅಧ್ಯಕ್ಷೆಯಾಗಿ ಸ್ವಾಗತಿಸಿದರು. ❑

ಪಿಂಕಿ ಪ್ರಮಾಣಿಕ್ : ಭಿನ್

ಮೂಲ : ಡಾ. ಪಯೋಶಿನಿ ಮಿತ್ರ
ಕನ್ನಡಕ್ಕೆ : ವೆಂ. ವನಜ, ಮೈಸೂರು



2008ನೇ ಇಸವಿ. ಲಿಂಗಪರೀಕ್ಷೆಯ ನಂತರ ಕ್ಯಾಸ್ಟರ್ ಸೆಮೆನ್ಯಾ (ಕ್ರೀಡಾಕೂಟದಿಂದ) ಬಹಿಷ್ಕೃತಳಾದಳು. ಆಗ ದಕ್ಷಿಣ ಆಫ್ರಿಕಾ ಅವಳಿಗೆ ಬೆಂಬಲವಾಗಿ ನಿಂತಿತು. ದಕ್ಷಿಣ ಆಫ್ರಿಕಾದ ಕ್ರೀಡಾ ಮಂತ್ರಿಗಳು ಆ ನಿಷೇಧದ ನಿರ್ಧಾರವನ್ನು ಯಾವುದೇ ಅತ್ಯುನ್ನತ ಮಟ್ಟದವರೆಗೂ ಕೊಂಡೊಯ್ದು ಪ್ರಶ್ನಿಸಲು ಸಿದ್ಧ ಎಂದು ಘೋಷಿಸಿದರು. "ಇಂಥ ಅಪಮಾನವನ್ನು ಕ್ಯಾಸ್ಟರ್ ಆಗಲೀ ಅಥವಾ ಅವಳ ಕುಟುಂಬವಾಗಲೀ ಸಹಿಸಬೇಕಾಗಿಲ್ಲ. ಅವರು ಯಾವ ತಪ್ಪನ್ನೂ ಮಾಡಿಲ್ಲ. ಅವರನ್ನು ತಮ್ಮ ಪಾಡಿಗೆ ಬಿಟ್ಟುಬಿಡಲು ಕೇಳಿಕೊಳ್ಳುತ್ತೇನೆ. ಅವಳ ಹಕ್ಕು ಮತ್ತು ಆಸಕ್ತಿಗಳನ್ನು ಹೇಗೆ ರಕ್ಷಿಸಬಹುದೆಂಬ ವಿಚಾರವನ್ನು ನಮ್ಮ ವಕೀಲರಿಗೆ ವಹಿಸಿದ್ದೇನೆ. ಕ್ಯಾಸ್ಟರ್ ಒಬ್ಬ ಮಹಿಳೆ ಅವಳು ನಮ್ಮ ನಾಯಕಿಯಾಗಿಯೇ ಉಳಿಯುತ್ತಾಳೆ. ಅವಳನ್ನು ನಾವು ರಕ್ಷಿಸಲೇಬೇಕು" ಎಂದರು.

ಸೆಮೆನ್ಯಾಳ ಲಿಂಗ, ಲಿಂಗತ್ವ ಮತ್ತು ಶರೀರ ಕುರಿತಾದ ದಕ್ಷಿಣ ಆಫ್ರಿಕಾದ ರಾಜಕಾರಣಿಗಳು ವ್ಯಾಖ್ಯಾನಗಳು ಮುಖ್ಯವಾಗಿ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ರಾಜಕಾರಣದಿಂದ ಪ್ರೇರಿತವಾಗಿದ್ದವೆಂದು ಕೆಲವು ತಜ್ಞರು ಗಮನಿಸಿದ್ದರು. ಇದಕ್ಕೆ ವಿರುದ್ಧವಾಗಿ ಭಾರತದ ಶಾಂತಿ ಸೌಂದರರಾಜನ್ ಕ್ರೀಡೆಯಿಂದ ಬಹಿಷ್ಕೃತಳಾದಾಗ ಭಾರತ ಅವಳ ನೆರವಿಗೆ ಬರಲಿಲ್ಲ. ಅವಳು ಲಿಂಗ ಪರೀಕ್ಷೆಯಲ್ಲಿ ಪಾಸಾಗದಿರುವುದು ರಾಷ್ಟ್ರಕ್ಕೆ ನಾಚಿಕೆಯ ಸಂಗತಿಯೇನೋ ಎಂಬಂತೆ ನಾಚಿಕೆಯನ್ನು ಅದರೊಂದಿಗೆ ಗಂಟುಹಾಕಿ ಅವಳ ಪ್ರಯತ್ನಗಳನ್ನು ಕುಂಠಿತಗೊಳಿಸಲಾಯಿತು. ಆದರೆ ಕ್ಯಾಸ್ಟರ್ ವಿಷಯದಲ್ಲಿ ಹೀಗಾಗಲಿಲ್ಲ. ಶಾಂತಿಯ ಬೆಂಬಲಕ್ಕೆ ಒಕ್ಕೂಟಗಳು ಬರಲಿಲ್ಲ. ಸಮಾಚಾರ ಪತ್ರಿಕೆಗಳು ಅವಳ ಬಗ್ಗೆ ಚರ್ಚಿಸುತ್ತಾ 'ನಿಗೂಢ' ಮತ್ತು 'ವಿಚಿತ್ರ'ವಾದುದೆಂದು ಕರೆದವು. ಮೇಲ್ವರ್ಗದವರಿಂದ ದಲಿತರ ದಮನ ಎಂದು ದಲಿತ ಪ್ರಕಟಣೆಗಳು ಕಂಡವು. ಆದರೆ ಅತ್ಯಂತ ಗಮನಾರ್ಹವಾದ ಬೆಂಬಲ ಸಿಕ್ಕಿದ್ದು ಡಿ.ಎಂ.ಕೆ. ನೇತೃತ್ವದ ತಮಿಳುನಾಡು ಸರಕಾರದಿಂದ ಮಾತ್ರ. ದಕ್ಷಿಣ ಆಫ್ರಿಕಾದ ಕ್ರೀಡಾ ಮಂತ್ರಿಗಳ ಹೇಳಿಕೆಗಳಿಗೆ ಸರಿಸಮನಾಗಿದ್ದು ದೆಂದರೆ ಅಂದಿನ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕರುಣಾನಿಧಿಯ ಮಾತುಗಳು ಮಾತ್ರ. ದೇಶದ ಉಳಿದ ಪ್ರಜೆಗಳೆಲ್ಲರೂ ಅವಳನ್ನು ಬಿಟ್ಟುಕೊಟ್ಟು ಮೋಸಗಾತಿ ಎಂದು ಕರೆದಾಗ ತಮಿಳುನಾಡು ಸರಕಾರದಿಂದ ಮಾತ್ರ ಒಂದು ಅಪೂರ್ವವಾದ, ಅಸದೃಶವಾದ ಪ್ರತಿಕ್ರಿಯೆ ಸಿಕ್ಕಿತ್ತು. 2006ರಲ್ಲಿ ಏಷ್ಯಾಕ್ರೀಡಾಕೂಟದಲ್ಲಿ 800 ಮೀಟರ್‌ನ ಪಂದ್ಯದಲ್ಲಿ ರಜತಫಲಕ ಗೆದ್ದಿದ್ದ ಶಾಂತಿಗೆ ಆ ಕೂಡಲೇ ತಮಿಳುನಾಡು ಸರ್ಕಾರ ಒಂದು ದೊಡ್ಡ ಮೊತ್ತದ ಹಣ ಹಾಗೂ ಕಲರ್ ಟಿ.ವಿ.ಯೊಂದನ್ನು ನೀಡುವ ಭರವಸೆ ನೀಡಿತ್ತು. ಏಷ್ಯಾದ ಒಲಂಪಿಕ್ ಸಮಿತಿಯು ಬಹಳಷ್ಟು ವಾಗ್ಯುದ್ಧಗಳ ನಡುವೆಯೇ ಅವಳಿಂದ ಫಲಕವನ್ನು ಹಿಂದಕ್ಕೆ ಪಡೆಯಿತು. ಆದರೆ ಮುಖ್ಯಮಂತ್ರಿಗಳು ಮಾತ್ರ ತಮ್ಮ ಮಾತನ್ನು ಉಳಿಸಿಕೊಳ್ಳಲು ನಿರ್ಧರಿಸಿದರು. "ಅದೇನೂ ಮುಖ್ಯವಲ್ಲ; ಇದೇ ದೇಹ ಆ ಪಂದ್ಯದಲ್ಲಿ ಓಡಿತ್ತು" ಎಂದು ಕರುಣಾನಿಧಿ ವಾದಿಸಿದರು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕರುಣಾನಿಧಿಯವರಿಗೆ ದಕ್ಷಿಣ ಆಫ್ರಿಕಾದ ಮಂತ್ರಿ ಮಾತಾಡಿದಂತೆ ಮಾತಾದಬೇಕಾದ ಆವಶ್ಯಕತೆ ಕಾಣಲಿಲ್ಲ. ಅವರು ಶಾಂತಿ ಗಂಡೇ ಅಥವಾ ಹೆಣ್ಣೇ ಎಂದು ವಾದಿಸಲು ಪ್ರಯತ್ನಿಸಲಿಲ್ಲ. 'ಅದು ಮುಖ್ಯವೇ ಅಲ್ಲ, ಅವಳ ಸಾಮರ್ಥ್ಯ ಮಾತ್ರ ಮುಖ್ಯ' ಎಂಬಂತಿದ್ದರು. ಬಹುಶಃ ದೈಹಿಕ ವ್ಯತ್ಯಾಸದ ಬಗೆಗಿನ ಕಳಂಕಿತತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರು. ತಮಿಳುನಾಡಿನ ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಅವರದು ನಿಜವಾಗಿಯೂ ಒಂದು ಉದ್ದೇಶಪೂರ್ವಕವಾದ ಹೇಳಿಕೆಯಾಗಿತ್ತು. ಇದೇ ಸಮಯದಲ್ಲಿ ಲಿಂಗತ್ವಾತೀತ (transgender) ಹಕ್ಕುಗಳಿಗಾಗಿ ಚಳವಳಿ ತಮಿಳುನಾಡಿನಲ್ಲಿ ಬೇರೂರಿತ್ತು.

ಶಾಂತಿಯ ಲಿಂಗ ಮತ್ತವಳ ಕ್ರೀಡಾಸಾಧನೆಗಳನ್ನು ಪ್ರತ್ಯೇಕಗೊಳಿಸುವ ಕುರಿತಾಗಿ ಅಂದು ನಡೆಯುತ್ತಿದ್ದ ವಾದವಿವಾದಗಳನ್ನು ಬದಿಗೊತ್ತಲು ಕರುಣಾನಿಧಿಯವರಿಗೆ ಹೇಗೆ ಸಾಧ್ಯವಾಯಿತೆನ್ನುವುದು ಕುತೂಹಲಕಾರಿಯಾದ ಅಂಶ. ಅವರ ನಿಲುವು ವ್ಯಾಪಕ ಟೀಕೆಗೊಳಗಾಯಿತು. ಮೂರನೆಯ ಲಿಂಗತ್ವ (third gender)ದ ಅತ್ಯಂತ ಹೆಚ್ಚು ಸಂಘಟಿತ ಜನಸಂಖ್ಯೆಯುಳ್ಳ ರಾಜ್ಯದಲ್ಲಿ ಇದೊಂದು ಮತಬ್ಯಾಂಕಿನ ರಾಜಕೀಯ ಎಂಬ ಹಣೆಪಟ್ಟಿಗೊಳಗಾಯಿತು.

ಗಿರುವುದು ಅವಳ ತಪ್ಪೆ?



ಪಿಂಕಿ ಪ್ರಮಾಣಿಕ್ ಬಗ್ಗೆ ಹೇಳುವುದಾದರೆ, 'ಲಿಂಗತ್ವ ಮತ್ತು ಕ್ರೀಡೆ' ಅದರಲ್ಲೂ ನಿರ್ಧಿಷ್ಟವಾಗಿ 'ಭಾರತದಲ್ಲಿ' ಅಂತರ್ಲಿಂಗಿ ಕ್ರೀಡಾ ಪಟುಗಳು' ಎಂಬ ವಿಷಯವಾಗಿ ನಾನು ಮಾಡುತ್ತಿದ್ದ ಸಂಶೋಧನಾ ಕಾರ್ಯ ನನ್ನಲ್ಲಿ ಆಸಕ್ತಿ ಮೂಡಿಸಿತ್ತು. ಪಿಂಕಿಯನ್ನು ಕಾರಾಗೃಹಕ್ಕೆ ತಳ್ಳಿದ ತಕ್ಷಣವೇ ನಾನು ಕೋಲ್ಕತ್ತಾಗೆ ಬರಲು ನಿರ್ಧರಿಸಿದೆ. ಡಂ ಡಂ ನ ಕರೆಕ್ಷನಲ್ ಹೋಂ (Correctional Home) ನಲ್ಲಿ ಅವಳನ್ನು ಭೇಟಿಯಾಗುವ ನನ್ನ ಅನೇಕ ಪ್ರಯತ್ನಗಳು ನಿಷ್ಫಲವಾದ ನಂತರ ಅವಳ ವಕೀಲರ ಮೂಲಕ ಆ ಸಾಧ್ಯತೆಯನ್ನು ತಿಳಿಯಲು ಅವರನ್ನು ಸಂಪರ್ಕಿಸಿದೆ. ಅವರಿಗೆ ಅಂತರ್ಲಿಂಗದ ಪರಿಸ್ಥಿತಿಗಳ (intersese conditions) ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಅದರ ಬಗೆಗಿನ ಹೆಚ್ಚಿನ ಮಾಹಿತಿಯ ಅಗತ್ಯ ಅವರಿಗಿತ್ತು. ಅಲ್ಲದೆ ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ (IOC)ಯು ಮಹಿಳೆಯನ್ನು ಹೇಗೆ ಪರಿಭಾಷಿಸುತ್ತದೆಂದು ಅವರು ತಿಳಿಯಬಯಸಿದರು. ನಾನು ಐಒಸಿಯ ಮಾಜಿ ಸದಸ್ಯರು ಹಾಗೂ ಹಾಲಿ ವೈದ್ಯಕೀಯ ಆಯೋಗದ ಸಲಹೆಗಾರರಾಗಿದ್ದವರೊಬ್ಬರಿಗೆ ಪತ್ರಿಸಿದೆ. ಅವರಿಂದ ಬಂದ ಇ-ಮೇಲ್ ಉತ್ತರವನ್ನು ಇವರಿಗೆ ರವಾನಿಸಿದೆ. ಅಲ್ಲದೆ ಇವರು ಕೇಳಿದ್ದ ಅಂತರ್ಲಿಂಗದ ಪರಿಸ್ಥಿತಿಗಳ ಮಾಹಿತಿಯ ವಿವರಣೆ ನೀಡಿದೆ.

ಜೂನ್ 29ರಂದು ಬರಾಸತ್ ಜಿಲ್ಲಾ ನ್ಯಾಯಾಲಯಕ್ಕೆ ಹಾಜರಾಗಿದ್ದೆ. ಆದರೆ ಪಿಂಕಿಯ ಪರ ವಾದಿಸಬೇಕಾದ ನಾಲ್ವರು ವಕೀಲರ ತಂಡಕ್ಕೆ ಸಿದ್ಧತೆಯ ಕೊರತೆಯಿರುವುದನ್ನು ಕಂಡು ನಿರಾಶೆಯೆನಿಸಿತು. ಅವಳ ಕುಟುಂಬದ ಸ್ವರಾರೂ ಬಂದಿರಲಿಲ್ಲ. ಪಿಂಕಿಗೆ ಜಾಮೀನು ಸಿಗಲಿಲ್ಲ. ಇಷ್ಟರ ಮಧ್ಯೆ 'ಎಬಿಪಿ ಆನಂದ' ಎಂಬ ವಾರ್ತಾವಾಹಿನಿಗಳಲ್ಲೊಂದು ಪಿಂಕಿಯ ವಿರುದ್ಧ ದೂರು ನೀಡಿದವರೂ ಇದ್ದ ವಿಚಾರವೇದಿಕೆ (Panel)ಯಲ್ಲಿ ಭಾಗವಹಿಸಲು ನನ್ನನ್ನು ಕರೆದಿದ್ದರು. ನಾನು ಬಹಳ ಸೂಕ್ಷ್ಮದೃಷ್ಟಿಕೋನದ ಒಂದು ಪರ್ಯಾಯವನ್ನು ನೀಡಲು ಪ್ರಯತ್ನಿಸಿದೆ. ಹಾಗೆಯೇ ಅವಳ ಕುಟುಂಬದವರನ್ನು ಭೇಟಿಮಾಡಲು ನಿರ್ಧರಿಸಿದೆ. ನನ್ನ ಗೆಳತಿಯರಾದ ದೆಬಲೀನ ಮತ್ತು ಡಾ. ಉಜ್ಜನಿ ಮಣಿಯವರ ಜೊಗೆ ಪುರೂಲಿಯಾದ ಹತ್ತಿರದ ಪಿಂಕಿಯ ಹಳ್ಳಿಗೆ ಹೋದೆ. ಅವರ ಮನೆಯನ್ನು ತಲುಪಿದಾಗ ನಮ್ಮನ್ನವರು ಹೇಗೆ ಸ್ವಾಗತಿಸುತ್ತಾರೋ ಎಂಬ ಭಯವಿತ್ತು. (ABP ಆನಂದ) ವಾಹಿನಿಯಲ್ಲಿ ಪಿಂಕಿಯನ್ನು ಕುರಿತ ಕಾರ್ಯಕ್ರಮಗಳಿಗೆ ನಾನು ಧನ್ಯವಾದಗಳನ್ನು ಹೇಳಲೇಬೇಕು. ಏಕೆಂದರೆ, ನಾನು ಭಾಗವಹಿಸಿದ್ದ ಆ ಕಾರ್ಯಕ್ರಮಗಳನ್ನು ವೀಕ್ಷಿಸಿದ್ದ ಆ ಕುಟುಂಬದವರು ನನ್ನನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದರು. ಇದು ಸಂದರ್ಭವನ್ನು ತಿಳಿಗೊಳಿಸಿತು. ಅವಳ ತಂದೆ ಮರುದಿನವೇ ನಾನು ಪಿಂಕಿಯನ್ನು ಭೇಟಿಯಾಗುವ ವ್ಯವಸ್ಥೆ ಮಾಡಿದರು. ಅದಾಗಿ ಎರಡು ದಿನಗಳ ನಂತರವೂ ಮತ್ತೆ ಅದು ಸಾಧ್ಯವಾಯಿತು. ನನಗೆ ಅಗತ್ಯವಾದಾಗಲೆಲ್ಲಾ ದೇಶದ ಬೇರೆ ಬೇರೆ ಭಾಗಗಳಿಂದ ಸ್ತ್ರೀವಾದಿಗಳು, ಚಳವಳಿಗಾರರು, ಕಾನೂನು ಸಲಹೆಗಾರರಲ್ಲದೆ ಸಮಾನತೆಗಾಗಿ ಸಫೋ (Sappho for Euquality) ನೀಡಿದ ಬೆಂಬಲಕ್ಕಾಗಿ ನಾನು ಧನ್ಯವಾದಗಳನ್ನು ಸಲ್ಲಿಸಬೇಕು.

ಕಳೆದ ಒಂದೂವರೆ ತಿಂಗಳಲ್ಲಿ ನನ್ನ ಸಂದರ್ಶನ ನಡೆದಾಗಲೆಲ್ಲಾ ಈ ಪ್ರಕರಣದ ಬಗ್ಗೆ ಪರ್ಯಾಯ ಅಭಿಪ್ರಾಯವೊಂದನ್ನು ಸೃಷ್ಟಿಸಲು ಪ್ರಯತ್ನಿಸುತ್ತಲೇ ಬಂದಿದ್ದೇನೆ. ಆರಂಭದಲ್ಲಿ 'ಪಿಂಕಿ ಗಂಡು ಅಥವಾ ಹೆಣ್ಣು' ಎನ್ನುವುದರ ಬಗ್ಗೆ ಮಾತಾಡುತ್ತಿದ್ದ ಬಂಗಾಳದ ಮಾಧ್ಯಮಗಳು ಕ್ರಮೇಣ ಮಾನವಹಕ್ಕುಗಳ ಅತಿಕ್ರಮಣ, ಅಂತರ್ಲಿಂಗದ ಸ್ಥಿತಿಗಳ ಬಗ್ಗೆ ತಿಳಿವಳಿಕೆಯ ಕೊರತೆ ಹಾಗೂ ಅದೇನೇ ಆಗಿದ್ದರೂ ಪಿಂಕಿಯ ವಿಚಾರಣೆ ಮತ್ತು ಅವಳನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳಬೇಕೆನ್ನುವ ವಿಚಾರಗಳಿಗೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತಿವೆ. ದೂರದರ್ಶನದ ಇಂಥ ಕಾರ್ಯಕ್ರಮಗಳ ಮೂಲಕ ಅಂತರ್ಲಿಂಗದ ಸ್ಥಿತಿಗಳ ಬಗ್ಗೆ ಅರಿವು ಮೂಡಿಸುವಲ್ಲಿ ಅನಿರ್‌ಬನ್ ಮಜುಂದಾರ್ ಮತ್ತು ದೇವ್‌ಮಲ್ಯ ಸನ್ಯಾಲರಂಥ ವೈದ್ಯರು ಕೂಡ ನೆರವಾಗಿದ್ದಾರೆ. ನಾವು ಮಾಡಬೇಕಿರುವುದು ಇನ್ನೂ ಉಳಿದಿದೆ ಎಂದುಕೊಳ್ಳುವುದು ಒಂದು ಧನಾತ್ಮಕ ಬದಲಾವಣೆ ಎನ್ನಬಹುದು.

ಪಿಂಕಿಯ ಪ್ರಕರಣದಲ್ಲಿ, ಅವಳ ವಿರುದ್ಧ ದೂರು ದಾಖಲಾದ ಆರಕ್ಷಕ ಠಾಣೆ, ಇದರ ಬಗ್ಗೆ ಬರೆದ ಪತ್ರಕರ್ತರು, ನ್ಯಾಯಾಲಯ ಹಾಗೂ ವೈದ್ಯಕೀಯ ಸಮಿತಿಗಳಿಗೆ ಪಿಂಕಿಯ ವಿರುದ್ಧದ ಆರೋಪ



ಗಳನ್ನು ಅವಳ ಹಿಂದಿನ ಕ್ರೀಡಾ ಬದುಕಿನಿಂದ ಬೇರ್ಪಡಿಸಲು ಹೇಗೆ ಸಾಧ್ಯವಾಗಲಿಲ್ಲವೆನ್ನುವುದನ್ನು ಗಮನಿಸಿದ್ದೇವೆ. ಬರಾಸತ್ ಜಿಲ್ಲಾ ಆಸ್ಪತ್ರೆಯಲ್ಲಿ ರಚಿತವಾದ ವೈದ್ಯಕೀಯ ಮಂಡಳಿಯು ಆರೋಪಿಯು ಹೆಣ್ಣೊಬ್ಬಳ ಮೇಲೆ ಅತ್ಯಾಚಾರ ಮಾಡಲು ಸಾಧ್ಯವೇ ಎಂದು ನೋಡಲು ಒಂದು ವೇಳೆ ಪ್ರಯತ್ನಿಸಿರಬಹುದೆ? ಹಾಗಿದ್ದರೆ, ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಸಾಮಾನ್ಯವಾಗಿ 'ಲಿಂಗ-ಪರೀಕ್ಷೆ'ಯಲ್ಲಿ ಹೆಚ್ಚಾಗಿರುತ್ತಿದ್ದ ಪ್ರಮುಖ ಅಂಶಗಳಾದ ಪಿಂಕಿಯ ವಂಶವಾಹಿ ಮಾದರಿ ಅಥವಾ ಅವಳ ಹಾರ್ಮೋನು ಮಟ್ಟಗಳನ್ನು ತಿಳಿದುಕೊಳ್ಳುವ ಅಗತ್ಯವೇನಿದೆ? ಏಕೆಂದರೆ ಅತ್ಯಾಚಾರದ ಪ್ರಕರಣದಲ್ಲಿ ಅವುಗಳಿಗೆ ಯಾವುದೇ ಮಹತ್ವವಿರುವುದಿಲ್ಲ.


ಐದು ಅಥವಾ ಆರು ವರ್ಷಗಳಲ್ಲಿ ಹಿಂದೆ ಪಿಂಕಿ ಗೆದ್ದಿದ್ದ ಪದಕಗಳನ್ನು ಇಟ್ಟುಕೊಳ್ಳಬೇಕೇ, ಬೇಡವೇ ಎನ್ನುವುದರ ಬಗ್ಗೆ ನಮ್ಮ ಗಮನವನ್ನು ಸೆಳೆಯುವ ಮೂಲಕ ಸಂಪೂರ್ಣವಾಗಿ ಗೊಂದಲವೊಂದನ್ನು ಸೃಷ್ಟಿಸಲಾಗಿದೆ. ಒಂದು ವೇಳೆ, ಅವಳ ಇದುವರೆಗಿನ ಸಾಧನೆಗಳನ್ನು ಈ ಅತ್ಯಾಚಾರ ಆರೋಪಗಳಿಂದ ಪ್ರತ್ಯೇಕಿಸುವುದು ನಮಗೆ ತಿಳಿದಿದ್ದರೆ ಹೇಗಾಗುತ್ತಿರಲಿಲ್ಲ. ನಾನು ಈ ಹಿಂದೆ ಉಲ್ಲೇಖಿಸಿದ ದಕ್ಷಿಣ ಆಫ್ರಿಕಾದ ಕ್ರೀಡಾ ಮಂತ್ರಿಯಂತೆ ನಮ್ಮ ನಾಯಕಿಯನ್ನು ರಕ್ಷಿಸುವುದು ಮನಗೆ ಬೇಕಿಲ್ಲವೆಂದುಕೊಡರೂ ಕಡೇಪಕ್ಷ ಅವಳನ್ನು ಅವಳ ಪಾಡಿಗೆ ಬಿಟ್ಟುಬಿಡಲು ಸಾಧ್ಯವಾಗಿರುತ್ತಿತ್ತು.

ಸಲ್ಮಾನ್ ರಶ್ದಿಯವರು ತಮ್ಮ 'ದಿ ಡ್ರೀಮ್ ಆಫ್ ಗ್ಲೋರಿಯಸ್ ರಿಟರ್ನ್' ಎಂಬ ಪ್ರಬಂಧವೊಂದರಲ್ಲಿ ಭಾರತೀಯರು ತಮ್ಮ ರಾಜಕಾರಣಿಗಳ ವೈಯಕ್ತಿಕ ಬದುಕಿನ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳುವುದಿಲ್ಲ ಎನ್ನುವುದರ ಬಗ್ಗೆ ಮಾತಾಡುತ್ತಾರೆ. ಆದರೆ ಆ ಪ್ರಕರಣದಲ್ಲಿ ಅದು ಕಾಣುವುದಿಲ್ಲ. ಇದು ಅವಳೊಬ್ಬ ಮಹಿಳಾ ಆಟಗಾರ್ತಿ ಎಂಬ ಕಾರಣಕ್ಕಾಗಿಯೋ ಅಥವಾ ಹೀಗೆಯೇ ಇರಬೇಕು ಎಂದು ಸಮಾಜ ಹಾಕಿದ ಗೆರೆಯಿಂದ ಭಿನ್ನಳಾಗಿದ್ದಾಳೆಂಬ ಕಾರಣಕ್ಕೋ? ಈ ಪ್ರಕರಣದಲ್ಲಿ ಬರಲಿರುವ ತೀರ್ಪು ಏನೇ ಆಗಿರಲಿ, ಆದರೆ ಆ ಪ್ರಭುತ್ವ, ಈ ಮಾಧ್ಯಮ ಮತ್ತು ಸಾರ್ವಜನಿಕರು ಈ ಪ್ರಕರಣವನ್ನು ಕಂಡ ರೀತಿಯನ್ನು ಮಾತ್ರ ನಾವೆಂದೂ ಸಮರ್ಥಿಸಿಕೊಳ್ಳಲಾಗುವುದಿಲ್ಲ.

ಪೊಲೀಸರು ತಾವು ಪಿಂಕಿಯನ್ನು ಸಾರ್ವಜನಿಕರೆದುರು ಅವಮಾನಿಸಬಹುದು, ಅವಳಿಗೆ ಸ್ತನಗಳಿವೆಯೇ ಎಂದು ಅವಳ ಎದೆಯನ್ನು ತಡಕಾಡಬಹುದು, ನ್ಯಾಯಾಲಯದ ಆದೇಶವಿಲ್ಲದೆಯೇ ಅವಳೊಂದು ಖಾಸಗಿ ಆಸ್ಪತ್ರೆಗೆ ಬಲವಂತವಾಗಿ ಕರೆದೊಯ್ದು ಅವಳ ಜನನಾಂಗಗಳ ದೈಹಿದ ಪರೀಕ್ಷೆಯನ್ನು ಮಾಡಿಸಬಹುದು, ಇಷ್ಟಾದರೂ ಅವಳು ಭಿನ್ನಳಾಗಿದ್ದಾಳೆಂಬ ಕಾರಣದಿಂದಲೇ ತಾವು (ಯಾವುದೇ ಶಿಕ್ಷೆಯಿಂದ) ತಪ್ಪಿಸಿಕೊಳ್ಳಬಹುದೆಂದು ಭಾವಿಸಿದರು. ನ್ಯಾಯಾಂಗವು ಅನಗತ್ಯವಾಗಿ ಅವಳನ್ನು ಪದೇ ಪದೇ ಬಲವಂತವಾಗಿ ಲಿಂಗನಿರ್ಧಾರದ ಪರೀಕ್ಷೆಗೊಳಪಡುವಂತೆ ಮಾಡಿತು. ಆದರೆ ಇವರ್ಯಾರೂ ಉತ್ತರ ಕೊಡಬೇಕಾಗಿಲ್ಲ. ಪಿಂಕಿಯ ಅನುಮತಿಯಿಲ್ಲದೆ ವೈದ್ಯಕೀಯ ಮಂಡಳಿಗಳ ಸದಸ್ಯರು ಮತ್ತು ಪೊಲೀಸರು ಪಿಂಕಿಯ ಋತುಚಕ್ರದ ಮಾದರಿಯ ಮಾಹಿತಿ ಮತ್ತಿತರ ವಿವರಗಳನ್ನು ವರದಿಗಾರರೊಂದಿಗೆ ಹಂಚಿಕೊಂಡಿದ್ದರು. ಗೌಪ್ಯತೆ ಮತ್ತು ಲಿಖಿತ ಒಪ್ಪಿಗೆಗಳ ನೀತಿನಿಯಮಗಳನ್ನು ಪದೇ ಪದೇ ಗಾಳಿಗೆ ತೂರಿದ್ದರು. ಒಂದು ಬಂಗಾಳಿ ದೂರದರ್ಶನ ವಾಹಿನಿಯ ಕಾರ್ಯಕ್ರಮದಲ್ಲಿ ವರದಿಗಾರರು ದೂರದರ್ಶನದಲ್ಲಿ ಪಿಂಕಿಯ ಲಿಂಗನಿರ್ಧಾರದ ಪರೀಕ್ಷೆಗಳನ್ನು ಕುರಿತ ವಿವರಗಳನ್ನು ಹೇಗೆ ನೀಡಿದ್ದರೆಂದು ನಾನು ನೇರವಾಗಿ ಅವರನ್ನು ಪ್ರಶ್ನಿಸಿದ್ದೆ. ಅದಕ್ಕವರು, ಸಾರ್ವಜನಿಕರು ಪಿಂಕಿಯ ಲಿಂಗಪರೀಕ್ಷೆಗಳ ಫಲಿತಾಂಶಗಳನ್ನು ತಿಳಿಯಲು ಕಾದಿದದ್ದರಾದ ಕಾರಣ ಅದು ತಮ್ಮ ಕರ್ತವ್ಯವಾಗಿತ್ತೆಂದು ಹೇಳಿ ತಮ್ಮನ್ನು ತಾವು ಸಮರ್ಥಿಸಿಕೊಂಡರು. ಈ ಕಾರ್ಯಕ್ರಮದಲ್ಲಿ ಪಿಂಕಿಯೂ ಭಾಗವಹಿಸಿದ್ದಳು. ಈ ವಿವರಗಳ ವರದಿ ನ್ಯಾಯಾಲಯಕ್ಕೆ ನೀಡುವ ಮೊದಲೇ ಸಾರ್ವಜನಿಕರಿಗೆ ತಿಳಿದಿತ್ತು. ಪಿಂಕಿಗೆ ಇದನ್ನು ತಿಳಿಸಲಾಗಿತ್ತಷ್ಟೆ. ಅವಳನ್ನು ಮನುಷ್ಯರಿಗಿಂತ ಕೀಳಾಗಿ ನಡೆಸಿಕೊಳ್ಳಲಾಗಿತ್ತು. ಇದನ್ನು ನಮ್ಮಲ್ಲಿ ಅನೇಕರು ಪ್ರತಿಭಟಿಸಲಿಲ್ಲ.

ಅವಳು ಇತರರಿಗಿಂತ ಭಿನ್ನಳಾಗಿರುವುದರಿಂದಲೇ ಈ ರೀತಿ ನಡೆಸಿಕೊಳ್ಳಲು ಯೋಗ್ಯಳೆಂದು ನಾವೂ ನಂಬಿದ್ದೇವೆ? ಹಾಗಿಲ್ಲವಾದರೆ ನಮಗೆ ಚಿಂತಿಸುವ ಮತ್ತು ಪ್ರತಿಭಟಿಸುವ ಕಾಲ ಬಂದಿದೆ. ಒಂದುವೇಳೆ ನಿಮ್ಮಲ್ಲಿ ಅಥವಾ ನನ್ನಲ್ಲಿ ಲಿಂಗದ ಬೆಳವಣಿಗೆಯಲ್ಲಿ ಯಾವುದೇ ಜೈವಿಕ ಮಾರ್ಪಾಡು ಅಥವಾ ದಿಕ್ಚ್ಯುತಿಯುಂಟಾಗಿದ್ದಲ್ಲಿ ನಾವು ಎಲ್ಲರಂತಿಲ್ಲವಾಗಿದ್ದಲ್ಲಿ ಸಮಾಜ ನಮ್ಮನ್ನು ಇದೇ ರೀತಿ ಕಠಿಣವಾಗಿ ನಡೆಸಿಕೊಳ್ಳುತ್ತಿತ್ತು. ನಾವು (ಸಿದ್ಧಮಾದರಿಗೆ ಹೊರತಾಗಿ) ಬೇರೆ ರೀತಿಯ ಜನನಾಂಗಗಳನ್ನು ಹೊಂದಿರುವ ಕಾರಣಕ್ಕಾಗಿಯೇ ಅವಮಾನಿತರಾದಾಗ ನಿಮಗೆ ಅಥವಾ ನನಗೆ ಹೇಗನ್ನಿಸಬಹುದು? ಹೀಗಾಗಬಹುದಿತ್ತೆಂದುಕೊಂಡು ಈ ವಾದಾಂಶವನ್ನು (issue) ಚರ್ಚಿಸುವ ಕಾಲ ಬಂದಿದೆ. ನಾವೀಗ ಸಕ್ರಿಯರಾಗೋಣ! ❑

ನಮ್ಮ ಮಾನಸಕ್ಕೆ ಲೇಖನ, ವಿಮರ್ಶೆ, ಕವನಗಳನ್ನು
ಇ-ಮೇಲ್ ಮೂಲಕ ಕಳುಹಿಸುವವರು
ನುಡಿ ಅಥವಾ ಬರಹ ಲಿಪಿಯಲ್ಲಿ ಮಾತ್ರ ಕಳುಹಿಸಿ.



ಆರಾಧನಾ ರಂಗದಲ್ಲೂ ಸಿಗದ ಸಮಾನತೆ


■ ಬಿ.ಎಂ. ರೋಹಿಣಿ

"ಬೆಳಗಾಗ ನಾನೆದ್ದುಯಾರ್‍ಯಾರ ನೆನೆಯಲಿ?" ಎನ್ನುತ್ತಾ ಎಳ್ಳು ಜೀರಿಗೆ ಬೆಳೆವ ಭೂದೇವಿಯನ್ನು ಮೊದಲು ವಂದಿಸಿ ತನ್ನ ದಿನನಿತ್ಯದ ಕಾಯಕವನ್ನು ಪ್ರಾರಂಭಿಸುವ ಗರತಿಗೆ ಬಹುದೇವತೋ ಪಾಸನೆಯೇ ಮುಖ್ಯವಾಗುತ್ತದೆ. ಪ್ರಕೃತಿಯ ಪ್ರತಿ ವಸ್ತುಗಳು, ಉದ್ಯೋಗದ ಉಪಕರಣಗಳು, ಎಲ್ಲದಕ್ಕೂ ದೈವತ್ವವನ್ನುಆರೋಪಿಸಿ ಆರಾಧಿಸುವುದು ಅವಳ ನಿಷ್ಠೆಯ ಪ್ರತೀಕಗಳಾಗಿದ್ದವು. ತನ್ನಕುಟುಂಬವನ್ನು ಬಾಧಿಸುವ ರೋಗ,ರುಜಿನಗಳಿಗೂ ದೈವತ್ವವನ್ನು ಕಲ್ಪಿಸಿ ಪೂಜಿಸುವುದು ಅವಳ ದೊಡ್ಡ ದೌರ್ಬಲ್ಯವಾಗಿಕಂಡರೂ ಆ ಕಷ್ಟದಲ್ಲೇ ಸುಖವನ್ನು ಕಂಡಜೀವ ಆಕೆಯದು. 'ಹಾದಿಯ ಮನೆಯೊಳೆ, ಪಾದದುಂಗುರದೊಳೆ, ಗೋದೀವೆ ಸೀರೆ ನೆರಿಯೊಳೆ ಸರಸೋತಿ ಬೋದಿಸಮ್ಮಯ್ಯ ನಲ್ಲುಡಿಯ ನಮ್ಮ ಮನದಜಗುಲಿಯ ಮೇಲೆ ಒರಗಿ ನಿಂತು, ನಮಗೆ ಬಾರದ ಪದವ ಬರೆದುಕೊಡು" ಎಂದು ಪ್ರಾರ್ಥಿಸುತ್ತಾಳೆ. ಇದಕ್ಕಿಂತ ಹೆಚ್ಚಿನ ಆರಾಧನೆ ಅನರಕ್ಷರಸ್ಥ ಹೆಣ್ಣಿಗೆ ಸಾಧ್ಯವಿರಲಿಲ್ಲ.

ಹಾಗೆ ನೋಡಿದರೆ ಜಗತ್ತಿನ ಯಾವ ಮತಧರ್ಮಗಳೂ ಪುರುಷನಷ್ಟೇ ಅಧಿಕಾರವನ್ನು ಆರಾಧನಾರಂಗದಲ್ಲಿ ನೀಡಿಲ್ಲ. ಒಂದು ಕಾಲದಲ್ಲಿ ಸ್ತ್ರೀಯರಿಗೆ ಆತ್ಮವೇ ಇಲ್ಲವೆಂದು ನಂಬಿದ್ದ ಪಾಶ್ಚಾತ್ಯ ಸಮಾಜದಲ್ಲಿ ಆಕೆಗೆ ಆರಾಧನೆಯ ಸಮಾನ ಹಕ್ಕು ಸಿಗುವುದು ಸಾಧ್ಯವೇ ಇರಲಿಲ್ಲ. ಹಾಗಿದ್ದರೂ ಸ್ತ್ರೀ ದೇವತೆಗಳ ಆರಾಧನೆ ಪ್ರಪಂಚದಾದ್ಯಂತ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು. ಮಾನವನ ಬದುಕಿನ ಒಳಿತಿಗೆ ಮತ್ತು ಕೆಡುಕಿಗೆ ಕಾರಣವಾಗುವವರೆಲ್ಲರೂ ಸ್ತ್ರೀದೇವತೆಗಳೇ ಆಗಿದ್ದದ್ದು ವಿಶೇಷ. ಭಾರತದಲ್ಲಿರುವಷ್ಟು ದೇವಿಯರು, ದೇವತೆಯರು ಮತ್ತು ದೈವಗಳು ಬಹುಶಃ ಪ್ರಪಂಚದ ಬೇರಾವ ದೇಶಗಳಲ್ಲೂ ಇರಲಿಕ್ಕಿಲ್ಲ. ಸ್ತ್ರೀಯೇ ಆರಾಧನೆಯ ವಸ್ತುವಾಗಿರುವಾಗ ಆರಾಧನಾರಂಗ ದಲ್ಲಿ ಅವಳನ್ನು ಗುರುತಿಸುವುದು ತುಸು ಕಷ್ಟ. ಅದಕ್ಕೆ ಭಾರತದ ಸಂಸ್ಕೃತಿ ಮತ್ತು ಚರಿತ್ರೆಯನ್ನು ಪರಿಶೀಲಿಸಬೇಕಾಗುತ್ತದೆ.

ಆರಾಧನಾ ಹಕ್ಕು ಮಹಿಳೆಗೆ ಇತ್ತೆಂದು ಹೇಳಲಾಗುವ ವೇದಕಾಲೀನಯುಗದ ಕಾಲಘಟ್ಟದಲ್ಲಿ ಘೋಷ, ಅಪೌಲಾ, ರೋಮಕಾ ಮುಂತಾದ ಮಂತ್ರದೃಷ್ಟಾರ ವಿದುಷಿಯರು ಯಜ್ಞಯಾಗಗಳಲ್ಲಿ ಪಾಲ್ಗೊಳ್ಳುತ್ತಿದ್ದರೆಂದೂ, ಗಾರ್ಗಿ, ಸುಲಭಾ, ಮಮತಾ ಮುಂತಾದ ಬ್ರಹ್ಮತತ್ವವಾದಿನಿಯರು ಪುರುಷರಂತೆ ಆಧ್ಯಾತ್ಮಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರೆಂದೂ ತಿಳಿದು ಬರುತ್ತದೆ. ಇಂತಹ ಒಂದು ಸಮಾನತೆಯ ಕಾಲವಿತ್ತೆಂದು ಊಹಿಸಲೂ ಸಾಧ್ಯವಿಲ್ಲದಷ್ಟು ಬದಲಾವಣೆಗಳು ಆ ನಂತರದ ಕಾಲಘಟ್ಟದಲ್ಲಾಯಿತು. ಸ್ತ್ರೀಯ ಆರಾಧನಾ ಹಕ್ಕುಗಳನ್ನು ಕಸಿಯಲ್ಪಟ್ಟ ಈ ಕಾಲ ಸುಮಾರು ಕ್ರಿಪೂ. ಆರನೆಯ ಶತಮಾನದವರೆಗೂ ಮುಂದುವರಿಯಿತು. ಕ್ರಿಪೂ. ಆರನೆಯ ಶತಮಾನದಲ್ಲಿ ಜೈನ ಮತ್ತು ಬೌದ್ಧ ಮತಗಳು ವೈದಿಕ ಮತದತತ್ವ ಸಿದ್ಧಾಂತಗಳ ವಿರುದ್ಧವಾದ ಹೊಸ ತತ್ವಗಳನ್ನು ಪ್ರಚಾರ ಮಾಡತೊಡಗಿದವು. ಆಗ ಮಹಿಳೆಯರಿಗೆ ಮತ್ತು ಶೂದ್ರರಿಗೆ ಈ ವರೆಗೆ ನಿಷಿದ್ಧವಾದ ಆರಾಧನಾರಂಗದ ಬಾಗಿಲೊಂದು ತೆರೆಯಿತು. ಸ್ತ್ರೀ ಜನ್ಮದಲ್ಲಿ ಮೋಕ್ಷವಿಲ್ಲವೆಂದು ಜೈನರ ತತ್ವವೂ ಸಾರಿತು. ಸ್ತ್ರೀಯರು ಭಿಕ್ಷುಣಿಯರಾಗಿ ಸಂಘಕ್ಕೆ ಸೇರಿದರೆ ಅದಕ್ಕೆ 500 ವರ್ಷಕ್ಕಿಂತ ಹೆಚ್ಚು ಆಯಸ್ಸು ಇರಲಾರದು ಎಂಬ ಅನುಮಾನವೂ ಕಾಡಿದ್ದರೂ ಬೌದ್ಧತತ್ವವು ಮಹಿಳೆಯರಿಗೆ ಆರಾಧನಾರಂಗದಲ್ಲಿ ಪ್ರವೇಶವನ್ನೇನೋಕೊಟ್ಟಿತು.ಆದರೆ ಪುರುಷರಂತೆ ಹೆಬ್ಬಾಗಿಲಿನ ಮೂಲಕವಲ್ಲ. ಪಕ್ಕದ ಸಣ್ಣ ಬಾಗಿಲಿನ ಮೂಲಕ. ಆರಾಧನಾರಂಗದಲ್ಲಿ ತನ್ನನ್ನುಳಿಸಿಕೊಳ್ಳಲು ಮಹಿಳೆ ಮುಂದಿನ ಕಾಲಘಟ್ಟದಲ್ಲಿ ಬಹಳ ಶ್ರಮಪಟ್ಟಳು. ಅಕ್ಷರ ಪ್ರಪಂಚಕ್ಕೆ ಪ್ರವೇಶವನ್ನು ನಿರಾಕರಿಸುತ್ತಾ ಸಾಗಿದ ಮುಂದಿನ ಕಾಲಘಟ್ಟದಲ್ಲಿ ಆಕೆಗೆ ಅಡುಗೆ ಕೋಣೆಯೇ ಆರಾಧನಾರಂಗವಾಯಿತು.

ಈ ಕಾಲಘಟ್ಟದಲ್ಲಿ ಮಹಿಳೆಯೇ ಆರಾಧನೆಯ ವಸ್ತುವಾಗಿ ಪರಿವರ್ತನೆಗೊಂಡಳು. ವಜ್ರಯಾನ ಪಂಥ, ತಾಂತ್ರಿಕಆರಾಧನೆಯ ಶಾಕ್ತ ಪಂಥಗಳು ಅವಳನ್ನೇ ದೇವಿಯಾಗಿ, ಭೈರವಿಯಾಗಿ ಪೂಜಿಸ ತೊಡಗಿದವು. ಇಂತಹ ವಕ್ರದಾರಿಯಲ್ಲಿ ಸಾಗುವ ಆರಾಧನಾ ಮಾರ್ಗದಿಂದ ಅವಳನ್ನು ವಿಮುಖಗೊಳಿಸುವ ಸಲುವಾಗಿ ಪತಿವ್ರತಾ ಮಹಾತ್ಮೆಯನ್ನು ಸಾರುವ ಪುರಾಣ ಗ್ರಂಥಗಳು, ಕಾವ್ಯಗಳು, ವಿವಿಧ ಧರ್ಮ ಶಾಸ್ತ್ರಗಳು ಆಕಾಲದಲ್ಲಿ ರಚನೆಯಾದುವು. ಅಲ್ಲಿಗೆ ಸ್ತ್ರೀಗೆ ದೊರೆತ ಆರಾಧನಾ ಸ್ವಾತಂತ್ರ್ಯವೂ ಮೇಲೇರುತ್ತಾ ಸಾಗಿ, ಕೆಳಗಿಳಿದು ಬಂದುಒಂದು ಸುತ್ತು ಪೂರ್ಣಗೊಳಿಸಿ ಏನೂ ಇಲ್ಲದ ಖಾಲಿ ಸ್ಥಿತಿಗೆ ತಂದು ನಿಲ್ಲಿಸಿತು. ಆರಾಧನೆಯಚರಿತ್ರೆಯ ಪುಟಗಳಲ್ಲಿ ಒಂದುದಟ್ಟ ಮೌನವುಳ್ಳ ಖಾಲಿ ಪುಟಗಳೇ ತುಂಬಿಕೊಂಡುಬಿಟ್ಟವು. ಗುಡಿಯಲ್ಲಿ ಮಾತ್ರಆರಾಧಿಸಲ್ಪಟ್ಟ ಸ್ತ್ರೀ ದೇವತೆ ವಿಜೃಂಭಿಸಿದಳು. ಆದರೆ ಸಮಾಜದಲ್ಲಿ





ಸ್ತ್ರೀ ತೀರಾ ತಿರಸ್ಕೃತಳಾದ ಆಕೆ ಭೋಗಕ್ಕೆ ಮತ್ತು ಸಂತಾನಕ್ಕೆ ಮಾತ್ರ ಉಪಯುಕ್ತಳಾದಳು.

ಆ ನಂತರದ ಕಾಲಘಟ್ಟದಲ್ಲಿ ಭಕ್ತಿ ಪಂಥ ಮತ್ತು ವಚನ ಚಳುವಳಿಯಲ್ಲಿ ಆಕೆ ದೇವರಕೋಣೆಗೆ ಪ್ರವೇಶ ಪಡೆದಳು. ತಮಿಳ್ನಾಡಿನ ಆಂಡಾಳ್ ಮತ್ತು ಅಮ್ಮಯ್ಯರ್ ಕರ್ನಾಟಕದ ಅಕ್ಕಮಹಾದೇವಿ, ರಾಜಸ್ಥಾನದ ಮೀರಾ, ಮಹಾರಾಷ್ಟ್ರದ ಬಹಿನಾಬಾಯಿ, ಕಾಶ್ಮೀರದ ಲಲ್ಲೇಶ್ವರಿ ಮುಂತಾದವರು ಭಕ್ತಿ ಪಂಥದ ತತ್ವಗಳಿಗನುಸಾರವಾಗಿ ಆರಾಧನಾ ರಂಗವನ್ನು ಪ್ರವೇಶಿಸಿದವರು. ದೇಶಾದ್ಯಂತ ಈ ಚಳವಳಿ ವ್ಯಾಪಕವಾಗಿ ವಿಸ್ತರಿಸಿತು. ಭಕ್ತಿಗೆ ಗಂಡು ಹೆಣ್ಣು ಭೇದವಿಲ್ಲವೆಂದು ನಂಬಿ, ಆರಾಧನೆಯಲ್ಲಿ ಗಂಡು ಹೆಣ್ಣಾಗುವ ಮತ್ತು ಹೆಣ್ಣುಗಂಡಾಗುವ ಸಖೀ ಭಾವದ ಪರಂಪರೆಯಲ್ಲಿ ಅವರ ಸಾಧನೆ ಮುಂದುವರಿಯಿತು. ಬಸವಣ್ಣನ ಸಾಮಾಜಿಕ ಕ್ರಾಂತಿಯು ದೇಗುಲ ಸಂಸ್ಕೃತಿಯನ್ನು, ಪುರೋಹಿತ ಸಂಸ್ಕೃತಿಯನ್ನು ಧಿಕ್ಕರಿಸಿ ಭಕ್ತನ ಕರತಲದಲ್ಲೇ ದೇವರನ್ನು ಪ್ರತಿಷ್ಠಾಪನೆ ಮಾಡಿದ್ದರಿಂದ ಶೂದ್ರಾತಿಶೂದ್ರರಾದ ಕೆಳವರ್ಗದ ಸ್ತ್ರೀ ಪುರುಷರಲ್ಲರೂ ಸಮಾನವಾಗಿ ಆರಾಧನಾರಂಗ ಪ್ರವೇಶಿಸಿದರು. ಇದಾಗಿ ಒಂದೆರಡು ಶತಮಾನ ಉರುಳುವಷ್ಟರಲ್ಲಿ ಆರಾಧನೆಯ ಹಕ್ಕಿನ ಚಕ್ರ ಹಿಂದಕ್ಕೆ ಚಲಿಸಿತು.ಆಗ ಹರಿದಾಸ ಪಂಥವು ಸಮಾಜವನ್ನು ಮತ್ತೆ ಭಕ್ತಿಯಗಾಲಿಯೊಂದಿಗೆ ಉರುಳಿಸತೊಡಗಿತು. ಕುಟುಂಬದ ಪರಿಧಿ ಯೊಳಗಿದ್ದುಕೊಂಡೇ ಹರಿದಾಸಿಯರರಾಗಿ ಬಾಳಿದ ಹರಪನಹಳ್ಳಿ ಭೀಮವ್ವನಂತಹವಹ ಅನೇಕರುಆರಾಧನಾರಂಗದಲ್ಲಿ ಕಾಣಿಸಿಕೊಂಡರು. ಕಟ್ಟುಪಾಡು, ಸಂಪ್ರದಾಯಗಳು ಪರಿಧಿಯಾಚೆಗೆ ಅವರು ಇಣುಕಿ ನೋಡಲಾಗಲಿಲ್ಲ.

ಆ ನಂತರದ ಆಧುನಿಕ ಯುಗದಲ್ಲಿ ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಯು ಸ್ತ್ರೀಯರ ಬದುಕಿನಲ್ಲಿ ಸಮಾನತೆಯ ನೆಲೆಯಲ್ಲಿ ಅದ್ಭುತ ಬದಲಾವಣೆಗಳನ್ನು ತಂದಿವೆ. ಆದರೆ ಧಾರ್ಮಿಕ ಕ್ಷೇತ್ರದಲ್ಲಿ ಮಾತ್ರ ಸಮಾನತೆಯಯಾವ ಅವಕಾಶಗಳು ಮಹಿಳೆಗೆ ದಕ್ಕಲಿಲ್ಲ. ಮಹಿಳೆಯ ಜೈವಿಕರಚನೆಯ ಭಿನ್ನತೆಗಳೇ ಪ್ರಧಾನದೋಷವಾಗಿ ಕಾಣಿಸಿಕೊಂಡು. ಅಂದರೆ ಭಕ್ತಿಯಕ್ಷೇತ್ರಕ್ಕೆ ಆಕೆ ಸಹಜವಾಗಿ ಸಲೀಸಾಗಿ ಪ್ರವೇಶಿಸ ಬಹುದಾದರೂ ಪುರುಷನಂತೆ ಪೂಜೆ ಸಲ್ಲಿಸುವ ಅಧಿಕಾರದಿಂದ ಅವಳನ್ನು ದೂರ ನಿಲ್ಲಿಸಿತು. ಕ್ರಿ.ಶ. ನಾಲ್ಕು ಐದನೇ ಶತಮಾನದಿಂದಲೆ ಕ್ರೈಸ್ತ ಮಹಿಳೆಯರು ಸನ್ಯಾಸಿನಿಯರಾಗಿ ಮತ ಪ್ರಚಾರ ಮತ್ತು ಭಕ್ತಿ ಚಳುವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಂಡಿದ್ದರೂ ಚರ್ಚುಗಳಲ್ಲಿ ಪೌರೋಹಿತ ವಹಿಸುವ ಹಕ್ಕು ಇನ್ನು ಮಹಿಳೆಯರಿಗೆ ದಕ್ಕಿಲ್ಲ. ಆ ಹಕ್ಕಿಗಾಗಿ ಅಲ್ಲಲ್ಲಿ ಸ್ವರಎತ್ತುವ ಸುದ್ದಿಗಳಷ್ಟೇ ಕಿವಿಗೆ ಬೀಳುತ್ತವೆ. ಇತ್ತೀಚೆಗೆ ಪ್ರೊಟೆಸ್ಟೆಂಟ್ ಮಹಿಳೆಯರು ಕೆಲವರು ಚರ್ಚಿನಲ್ಲಿ ಆರಾಧನೆ ಮಾಡುವ ಹಕ್ಕನ್ನು ಪಡೆದಿದ್ದಾರೆ. ಚರ್ಚಗಳಲ್ಲಿ ಪಾದ್ರಿಗಳಂತೆ ಪ್ರವಚನ ನೀಡುವ ಹಕ್ಕು ಲಭಿಸಿದೆ. ಬೆಂಗಳೂರು ಮತ್ತು ಮಂಗಳೂರಿನಲ್ಲಿ ಕೆಲವು ಮಹಿಳೆಯರು ಪೌರೋಹಿತ್ಯವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಮುಸ್ಲಿಂ ಮಹಿಳೆಯರಂತೂ ಅದನ್ನು ಕನಸಿನಲ್ಲೂ ಅದನ್ನು ಊಹಿಸಲು ಸಾಧ್ಯವಿಲ್ಲ. ಮಕ್ಕಾ ಮಸೀದಿಯಲ್ಲಿ ಪುರುಷರಂತೆ ಸಮಾನರಾಗಿ ಪ್ರಾರ್ಥನೆ ಸಲ್ಲಿಸುವ ಅಧಿಕಾರ ಅವರಿಗೆ ದಕ್ಕಿದರೂ ಸ್ಥಳಿಯ ಮಸೀದಿಗಳಲ್ಲಿ ನಮಾಜ಼ ಮಾಡುವ ಅವಕಾಶಕ್ಕಾಗಿ ಅಲೊಮ್ಮೆ ಇಲೊಮ್ಮೆ ಸುದ್ದಿಯಾಗಿ ಅದು ಚರ್ಚಿಸುವ ವಿಷಯವೇ ಅಲ್ಲ ಎಂಬಂತೆ ಗೌಣಗೊಳಿಸಲಾಗುತ್ತದೆ.

ಇನ್ನು ಹಿಂದು ಮಹಿಳೆಯರ ಬಗ್ಗೆ ಯೋಚಿಸಿದರೆ ಅವರು ಶತಮಾನಗಳಿಂದ ಅದನ್ನು ಬಯಸಿದವರೂ ಅಲ್ಲ. ಕೇಳಿದವರೂ ಅಲ್ಲ. ಆದರೆ ಕೆಲವೊಂದು ಸ್ಥಳೀಯ ದೈವ ದೇವರುಗಳಿಗೆ ಸ್ತ್ರೀಯರೇ ಆರಾಧಕರಾಗಿರುವ ದಾಖಲೆಗಳಿವೆ. ಸ್ತ್ರೀಯರೇ ಆರಾಧಿಸುವ ಸ್ತ್ರೀಯರ ಶಬರಿಮಲೆಯೆಂದೇಖ್ಯಾತಿ ಇರುವ ಕೇರಳದ ಅಂಬಲದಲ್ಲಿ ಪುರುಷರ ಪ್ರವೇಶ ನಿಷಿದ್ಧ. ತುಳುನಾಡಿನ ದೈವಗಳಿಗೆ ಕಟ್ಟುವ ಪರವ ಪಂಬದ ಪಾಣಾರರ ಎಲ್ಲಾ ಆರಾಧನಾ ಸ್ಥಳಗಳಲ್ಲಿ ಪರಿಕರಗಳನ್ನು ಅಣಿಗೊಳಿಸುವಲ್ಲಿಂದ ಪ್ರಾರಂಭವಾಗಿತೆಂಬರೆ ಬಡಿದು ಪಾಡ್ದನ ಹೇಳುವ ಕೆಲಸಗಳೆಲ್ಲವು ಮಹಿಳೆಯರದ್ದೇ ಆಗಿದೆ.ಆದರೂ ಸೂತಕ, ಮುಟ್ಟು, ಬಸಿರು, ಬಾಣಂತನಗಳು ಅವಳನ್ನು ದೇವರಅರಾಧನಾ ಸ್ಥಳಗಳಲ್ಲಿ ಅಸ್ಪೃಶ್ಯರನ್ನಾಗಿಸಿದೆ.ವಿಶೇಷವೆಂದರೆದೇವಿಯಆರಧನಾ ಸ್ಥಳಗಳಲ್ಲೂ ಆಕೆಗೆ ಪ್ರವೇಶ ನಿಷಿದ್ಧ.ತುಳುನಾಡಿನಲ್ಲಿ ಮಾಸ್ತಿ ಕಲ್ಲುಗಳನ್ನು ಹುಡುಕುತ್ತಾ ಹೋದಾಗ ಕಾಸರಗೋಡಿನ ಕೊಂಡಂಕುಳಿಯಲ್ಲಿ ಕಂಡ ನಿದರ್ಶನವೇ ಇದಕ್ಕೆ ಸಾಕ್ಷಿ. ಮಾಸ್ತಿಕಲ್ಲಿಗೆ ಪೂಜೆ, ಆರಾಧನೆ, ಮಾಡುವವರೆಲ್ಲರೂ ಪುರುಷರು. ಆ ಕಲ್ಲಿರುವ ಸ್ಥಳಕ್ಕೆ ಸ್ತ್ರೀಯರು ಪ್ರವೇಶಿಸಲೇಬಾರದು, ಯಾಕೆಂದರೆ ಆಕೆ ಸ್ತ್ರೀಯರಿಗೆ ಕಾಟ ಕೊಡುತ್ತಾಳೆಂಬ ಬೆದರಿಕೆ. ಸಹಗಮನ ಮಾಡಬೇಕೆಂಬ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಲಾಗದ ಸಾಂಪ್ರದಾಯಿಕ ಸನಾತನ ನಂಬಿಕೆ ಸ್ತ್ರೀಯರನ್ನು ಸತೀ ಪದ್ಧತಿಗೆ ಪ್ರೇರೇಪಿಸಿದೆ. ಮತ್ತು ಅವಳನ್ನು ಪುರುಷರು ಸತ್ತ ಮೇಲಾದರೂ ಭಕ್ತಿಯಿಂದ ಆರಾಧಿಸುತ್ತಾರಲ್ಲಾ ಎಂಬ ಧನ್ಯತಾ ಭಾವ ಮಹಿಳೆಯರಿಗೆ ಇದ್ದುದರಿಂದ ಪೂಜೆಯ ಸಕಲ ಪರಿಕರಗಳನ್ನು ಸಿದ್ಧಗೊಳಿಸಿದರೂ ಸತೀಕಲ್ಲಿನ ಬಳಿ ಅವರು ಸುಳಿಯಲಾರರು. ಹೀಗೆ ಸ್ವಇಚ್ಛೆಯಿಂದಲೋ, ಭಯದಿಂದಲೋ, ಆರಾಧನಾ ರಂಗದಿಂದ ತಾನೇ ದೂರ ನಿಂತಿದ್ದಾಳೆ.





ಆದರೆ ವರ್ಷಗಳ ಹಿಂದಿನ ಜಯಾಮಾಲಾ ಪ್ರಕರಣವು ನಾಡಿನಾದ್ಯಂತ ಪರ ವಿರೋಧ ಹೇಳಿಕೆಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಿತು. 2003ರಲ್ಲಿ ಶಬರಿಮಲೆದೇವಸ್ಥಾನದಲ್ಲಿ ಅಕಸ್ಮಾತ್ ಬೆಂಕಿ ಕಾಣಿಸಿ ಕೊಂಡಿದ್ದರಿಂದ 2004ರಲ್ಲಿ ದೇವಸ್ಥಾನದ ಆನೆಯು ಮೂರ್ತಿ ಯನ್ನು ಹೊರಲು ನಿರಾಕರಿಸಿದ್ದರಿಂದ ಮತ್ತು ದೇವಸ್ಥಾನದ ಅಧಿಕಾರಿ ವರ್ಗದಲ್ಲಿ ಅಸಂತುಷ್ಟಿ ಕಾಣಿಸಿ ಕೊಂಡಿದ್ದರಿಂದ ತಿರುವಾಂಕೂರುದೇವ ಸ್ವಂ ಮಂಡಳಿ ಅಯ್ಯಪ್ಪನ ಅಭಿಪ್ರಾಯ ಪಡೆಯಲು 'ಅಷ್ಟಮಂಗಲ ದೇವಪ್ರಶ್ನಂ' ಇಟ್ಟಿತು, ಅದರಿಂದ ತಿಳಿದ ಕುತೂಹಲಕಾರಿ ಸಂಗತಿಯೇ ಯುವತಿಯು ತನ್ನ ಮೂರ್ತಿಯನ್ನು ಸ್ಪರ್ಷಿಸಿ ಅಪವಿತ್ರಗೊಳಿಸಿದ್ದಾಳೆಂಬುದು. 10 ವರ್ಷದಿಂದ 50 ವರ್ಷದೊಳಗಿನ ಸ್ತ್ರೀಯರಿಗೆ ಶಬರಿಮಲೆಯು ಪ್ರವೇಶ ನಿರಾಕರಿಸುತ್ತದಾದರೂ ಜಯಮಾಲಾ, ಸುಧಾಚಂದ್ರನ್, ಗಿರಿಜಾ ಲೋಕೇಶ್ ಮುಂತಾದವರು ದೇವಸ್ಥಾನವನ್ನು ವಿ.ಐ.ಪಿ.ಗಳಾಗಿ ಸಂದರ್ಶಿಸಿದರು. ಆದರೆ ಜಯಮಾಲಾ ಕೂಡಲೇ ತನ್ನ ತಪ್ಪೊಪ್ಪಿಗೆಯನ್ನು ಫ್ಯಾಕ್ಸ್ ಮೂಲಕ ಕಳುಹಿಸಿದ್ದರಿಂದ ಪ್ರಕರಣವು ಭಗ್ಗೆಂದು ಪ್ರಜ್ವಲಿಸಿತು. ಜಯಮಾಲಾರನ್ನು ದೇವಸ್ವಂ ಬೋರ್ಡ್ ಅಪರಾಧೀ ಸ್ಥಾನದಲ್ಲಿ ನಿಲ್ಲಿಸಿತು. ದೇವ ಸ್ವಂ ಮಂಡಳಿಯ ಈ ನಿಲುವು ಮಹಿಳೆಯರ ಪ್ರತಿಭಟನೆಗೆ ಪ್ರಚೋದಿಸಿತು. ದೇವಸ್ಥಾನವು ನೀಡದಆರಾಧನಾ ಹಕ್ಕನ್ನು ವಾಮ ಮಾರ್ಗದಿಂದ ಗಳಿಸಿದ ಜಯಮಾಲನನ್ನೇ ಕೆಲವರು ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಿದರು. ಹಲವರು ದೇವಸ್ವಂ ಮಂಡಳಿಯ ಲಿಂಗ ತಾರತಮ್ಯವನ್ನೇ ವಿರೋಧಿಸಿ ಹೇಳಿಕೆ ನೀಡಿದರು. ಹೀಗೆ ಆರಾಧಾನಾರಂಗದಲ್ಲಿ ಮಹಿಳೆಯು ಚರ್ಚೆಯಲ್ಲಿ ಚರ್ವಿತ ಚರ್ವಣಳಾದಳು.

ಸ್ವಂತ ಸಾಮರ್ಥ್ಯದಲ್ಲಿ ಮಹಿಳೆ ಆರಾಧನಾರಂಗದಲ್ಲಿ ಪ್ರವೇಶಿಸುವುದಕ್ಕೆ ಆಧುನಿಕಕಾಲದಲ್ಲಿ ಅಂತಹಾ ದೊಡ್ಡ ಅಡೆತಡೆಗಳು ಧಾರ್ಮಿಕ ಕ್ಷೇತ್ರದಲ್ಲಿ ಇಲ್ಲವಾದರೂ ಸಾಮಾಜಿಕ ಮನ್ನಣೆ ಗಳಿಸಲು ಆಕೆ ಬಹಳ ಶ್ರಮ ಪಡಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಸಂಸ್ಕೃತವನ್ನು ಅಭ್ಯಾಸ ಮಾಡಿ ಪೌರೋಹಿತ್ಯವನ್ನು ನಡೆಸುವ ಸ್ತ್ರೀಯರಿದ್ದಾರೆ. ನಿಧಾನವಾಗಿಯಾದರೂ ಸಮಾಜ ಅವರಿಗೆ ಗೌರವವನ್ನು ಕೊಡುತ್ತಿರುವ ಸೂಚನೆಗಳು ಕಂಡುಬರುತ್ತಿವೆ. ಇವು ಸಾಮಾಜಿಕ ಕೌಟುಂಬಿಕ ಸಮಾರಂಭಗಳಿಗೆ ಮಾತ್ರ ಸೀಮಿತವಾದ ಪೌರೋಹಿತ್ಯಗಳೇ ಹೊರತು ದೇವಾಲಯಗಳಲ್ಲಿ ಅರ್ಚಕರಾಗಿ ಪ್ರವೇಶಿಸುವ ಕಾಲ ಇನ್ನೂ ಬಹಳ ದೂರವೇ ಆಗಿ ಉಳಿದಿದೆ. ಮಹಿಳೆಯ ಮುಟ್ಟು ಚಟ್ಟುಗಳೇ ಮುಖ್ಯ ಕಾರಣವೆಂದು ಮೇಲ್ನೋಟಕ್ಕೆ ಅನಿಸಿದರೂ ಅದರ ಒಳಮರ್ಮವು ಅವಳನ್ನು ಗರ್ಭಗುಡಿಯಿಂದಾಚೆಗೆ ನಿಲ್ಲಿಸುವುದು. ಸೂಕ್ತವೆಂಬ ಆದೇಶ ಕೆಲಸ ಮಾಡುತ್ತದೆ. ಅದೊಂದೇ ಜೈವಿಕ ಕಾರಣಕ್ಕಾಗಿ ದೂರ ಸರಿಸುವುದೆಂದಾದರೆ ಮುಟ್ಟು ನಿಂತವರಿಗೆ ಅರ್ಚಕ ಸ್ಥಾನ ನೀಡುವರೇ ಎಂಬ ಪ್ರಶ್ನೆಯನ್ನು ಕೇಳುವುದೆ ಅಪರಾದವೆಂಬ ಭಾವನೆ ನಮ್ಮ ಸಮಾಜದಲ್ಲಿದೆ. ಬೌದ್ಧಿಕ ಸಾಮರ್ಥ್ಯವಿದ್ದರೂ ದೈಹಿಕ ಅಸಾಮರ್ಥ್ಯವು ಹೆಣ್ಣನ್ನು ಈ ಆರಾಧನಾ ಕ್ಷೇತ್ರದಿಂದ ದೂರ ನಿಲ್ಲಿಸಿದೆ. ಎಲ್ಲಾ ಕ್ಷೇತ್ರಗಳಲ್ಲೂ ಆಧುನಿಕ ಕಾಲದ ಮಹಿಳೆ ಪ್ರವೇಶಿಸಿದ್ದಾಳೆ. ಅರ್ಚಕ ವೃತ್ತಿಯನ್ನು ಒಂದು ಹುದ್ದೆಯಾಗಿ ಸ್ತ್ರೀ ಪಡೆಯುವ ಕಾಲ ಇನ್ನು ಪಕ್ವವಾಗಿಲ್ಲ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ನಮ್ಮೊಳಗಿರುವ ಆತ್ಮಕ್ಕೆ ಲಿಂಗಭೇದವಿಲ್ಲವೆಂದು ಎಲ್ಲಾ ಮತ ಪ್ರವರ್ತಕರು ಸಾರಿದರೂ ದೇವಾಲಯಗಳ ಪೌರೋಹಿತ್ಯ ಅರ್ಚಕ ಪದವಿಯನ್ನು ಆಕೆ ಪಡೆಯಲಾರಳು. ತನ್ನ ಮನೆಯಲ್ಲಿ ಮಾಡುವಯಾವುದೇ ಪೂಜಾ ಸಮಾರಂಭಗಳಲ್ಲಿ ಪತಿಯ ಜೊತೆಯಲ್ಲಿ ಕೈ ಜೋಡಿಸಿದರೆ ಮತ್ರ ಪೂಜೆ ಸಾರ್ಥಕವೆಂಬ ನಂಬಿಕೆ ಮತ್ತು ನಿಯಮವಿರುವುದರಿಂದ ಅಷ್ಟಕ್ಕೆ ಅವಳು ತೃಪ್ತಳಾಗಬೇಕು. ವೇದಕಾಲದ ಸ್ತ್ರೀಯರಿಗಿದ್ದ ಸ್ಥಾನ ಮಾನ ಮತ್ತು ಆರಾಧನೆಯ ಸ್ವಾತಂತ್ರಗಳು ಮತ್ತು ಭಾರತಿಯ ಸ್ತ್ರೀಯರಿಗೆ ಲಭಿಸುವಂತಾಗಲಿ ಎಂದು ಹಾರೈಸುವ ಒಂದು ಸ್ತ್ರೀ ಸಮುದಾಯವಿದೆ. ಇವರು ಪೌರೋಹಿತ್ಯ ಮತ್ತು ಅರ್ಚಕ ವೃತ್ತಿಯನ್ನು ಸ್ವಂತ ಅಸಕ್ತಿಯಿಂದ ಕಲಿತು ವೈದಿಕ ವೃತ್ತಿಯಲ್ಲಿ ಪಳಗಿದವರು. ಇವರಿಗೆ ಪುರುಷ ಪುರೋಹಿತರಂತೆ ಸ್ವಾಗತಿಸುವುದನ್ನು ಸಮಾಜದಿಂದ ನಿರೀಕ್ಷಿಸಲಾರೆವು. ಎಲ್ಲಾ ಕ್ಷೇತ್ರಗಳಿಗೂ ಸ್ತ್ರೀಯರು ಪ್ರವೇಶಿಸಿ ಪುರುಷರು ನಿರುದ್ಯೋಗಿ ಗಳಾಗಿದ್ದಾರೆ ಎಂದು ಟೀಕಿಸುವವರಿರುವಾಗ ಪ್ರೋತ್ಸಾಹವನ್ನು ಆಶಿಸಲು ಸಾಧ್ಯವೇ? ದೇವರು, ದೈವಗಳ ಆರಾಧನೆಯನ್ನು ತನ್ನದೇ ರೀತಿಯಲ್ಲಿ ಮಾಡಿಕೊಂಡು ಬಂದಿರುವ ಸ್ತ್ರೀಯರು ಆರಾಧನಾರಂಗದಲ್ಲಿ ಸಮಾನತೆಗಾಗಿ ದನಿ ಎತ್ತಿರುವವರೇ ಇಲ್ಲ. ಲಿಂಗ ತಾರತಮ್ಯ ಮಾಡುವ, ದೇವರು ಮತ್ತು ಪುರುಷ ಪಕ್ಷಪಾತಿಯಾದ ಸ್ತ್ರೀ ದೇವತೆಗಳ ಸಹವಾಸವೇ ಬೇಡವೆಂದುದೂರ ಸರಿವ ಸ್ತ್ರೀ ಸಮುದಾಯವೂ ಇದೆ. ಗುಡಿಯೊಳಗಿನ ದೇವರೂ ದೊಡ್ಡ ಉದ್ಯಮಿಯಾಗಿ ಪರಿವರ್ತನೆಗೊಂಡಿರುವ ಈ ಕಾಲದಲ್ಲಿ ಬಂಡವಾಳವಿಲ್ಲದೆ ಲಾಭಗಳಿಸುವ ಕ್ಷೇತ್ರವಾಗಿದೆ. ಮೌಢ್ಯಗಳನ್ನು ನಗದೀಕರಿಸುವ ಹುಲುಸಾದ ಕ್ಷೇತ್ರವಿದು. ಆದುದರಿಂದ ಗುಡಿ, ದೇಗುಲಗಳ ಆರಾಧನೆಯಲ್ಲಿ ಸಮಾನತೆ ಇಲ್ಲವೆಂದು ಆಕೆ ವಿಷಾದಿಸುವ ಅಗತ್ಯವಿಲ್ಲ.

❑





ದೇಶಿಯ ಚಿಂತನೆಗಳಲ್ಲಿ : ಸ್ತ್ರೀವಾದಿ ಪ್ರಜ್ಞೆ

■ಆಯ್. ಎಸ್. ಇಂಜಗನೇರಿ, ಧಾರವಾಡ

ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯವು ಪಂಪನಿಂದ ಆದಿಯಾಗಿ ಸಮೃದ್ಧತೆಯ ಮೂಲಕ ಬೆಳೆದು ಬಂದಿದೆ. ಆ ನಂತರ ನವೋದಯ, ನವ್ಯ, ಪ್ರಗತಿಶೀಲ ಮತ್ತು ಬಂಡಾಯಗಳೆಂಬ ಘಟ್ಟಗಳ ಮೂಲಕ ಸಾಗಿಬಂದಿದೆ. ಅವುಗಳಲ್ಲಿ 'ಸ್ತ್ರೀವಾದಿ ಸಿದ್ಧಾಂತವು' ರೂಪಿಸಿದ ಲಿಂಗ ಸಮಾನತೆಯ ಅಂಶಗಳನ್ನೂ ಕಾಣಬಹುದಾಗಿದೆ. ಹೀಗೆ ಸಾಹಿತ್ಯವು ಹೊಸ ವಿಚಾರಗಳೊಂದಿಗೆ ರೂಪುಗೊಳ್ಳುತ್ತಾ ಆರೋಗ್ಯಪೂರ್ಣ ಸಮಾಜದ ಕನಸನ್ನು ಕಾಣುತ್ತಲಿದೆ.

ಹೀಗೆ ಸಾಹಿತ್ಯ ಚರಿತ್ರೆಯಲ್ಲಿ ಹೊಸ ಸಂಚಲನವನ್ನುಂಟು ಮಾಡಿದ ಬೀಜರೂಪದಲ್ಲಿರುವ 'ಸ್ತ್ರೀವಾದಿ' ಸಿದ್ಧಾಂತದ ತತ್ವಗಳನ್ನು ಇಂದು ನಾವು ವೈಚಾರಿಕ ಚಿಂತನೆಗಳ ಮೂಲಕ ಅನ್ವಯಿಸಿಕೊಂಡು ಪ್ರಗತಿಯತ್ತ ಸಾಗಬೇಕಾಗಿದೆ.

ಈ ನೆಲದ ಸಂಪ್ರದಾಯವಾದಿಗಳಾದ ಕೆಲವರು ಸ್ತ್ರೀವಾದವನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದಾರೆ. ಇದೊಂದು ಸಂಸ್ಕೃತಿಯ ಭಂಜಕ ವೆಂಬಂತೆ ತಿಳಿದು ಸಂಕುಚಿತವಾಗಿ ಆಲೋಚಿಸುತ್ತಿದ್ದಾರೆ. ಇಂತಹ ಅಪಕ್ವ ಮನಸ್ಸುಗಳಿಗೆ ಸತ್ಯವನ್ನು ತಿಳಿಸಬೇಕಾಗಿದೆ. ಸ್ತ್ರೀವಾದವೆಂಬುವುದು 'ಮುಕ್ತ ಲೈಂಗಿಕತೆಯ ಆಹ್ವಾನ' ವೆಂದು ತಪ್ಪಾಗಿ ಗ್ರಹಿಸುತ್ತಿರುವ ಯುವ ಜನಾಂಗವನ್ನು ಕಠಿಣವಾದ ಕಾನೂನಿನ ನಿಯಮಗಳಿಂದ ನಿಯಂತ್ರಿಸ ಬೇಕಾಗಿದೆ. ಅಲ್ಲದೇ ಇದೊಂದು ಮಹಿಳಾ ಅಧಿಪತ್ಯವೆಂದು ಭಾವಿಸುತ್ತಿರುವ ಇನ್ನೂ ಕೆಲವರಿಗೆ ಇದರ ತಾತ್ವಿಕ ದರ್ಶನದ ಮೂಲಕ ಅವರ ಮನಸ್ಸನ್ನು ಪರಿವರ್ತಿಸಬೇಕಾಗಿದೆ. ಆ ಮೂಲಕ ನಮ್ಮ ದೇಶಿಯ ನೆಲದ ನಂಬಿಕೆಗಳಾದ ಕುಟುಂಬ ಪದ್ಧತಿ, ಸಾಮೂಹಿಕ ಏಳಿಗೆ ಮತ್ತು ತಾಯ್ತನದ ಸಂಬಂಧಗಳನ್ನು ಉಳಿಸಿ ಕೊಂಡು ಸಾಗುವುದಾಗಿದೆ. ಇಲ್ಲವಾದರೆ ನಾವೆಲ್ಲ ಆಧುನಿಕ ಕೂಪ ಮಂಡೂಕಗಳಂತೆ ನಿಸ್ತೇಜರಾಗುವುದರಲ್ಲಿ ಸಂದೇಹವೇ ಇಲ್ಲ!

ಸ್ತ್ರೀವಾದವೆಂಬುದು ಸಂಪ್ರದಾಯದ ವಿರೋಧಿ ಅಲ್ಲ. ಅದೊಂದು ಗಟ್ಟಿಯಾದ ಚಿಂತನೆಯ ಮೂಲಕ ಹೊರಹೊಮ್ಮಿದ ಸಿದ್ಧಾಂತವಾಗಿದೆ. ನಾವಿಂದು ಸ್ತ್ರೀವಾದನ್ನು ಪಶ್ಚಿಮದ ಅನುಕರಣೆಯೆಂದು ಉಪೇಕ್ಷಿಸಿಸದೇ ಮರುಪರಿಶೀಲಿಸಬೇಕಾಗಿದೆ. ಸಂಪ್ರದಾಯಗಳು ಈ ನೆಲದ ಮೂಲ ಸತ್ವಗಳಾಗಿವೆ. ಭಾರತದಲ್ಲಿ ಇಂದಿಗೂ ಆಚರಿಸಲಾಗುತ್ತಿರುವ ಇಂತಹ ಹಲವು ಸಾಂಪ್ರದಾಯಿಕ ಸಂಗತಿಗಳಲ್ಲಿ ಸ್ತ್ರೀತ್ವದ ಧನಾತ್ಮಕ ಅಂಶಗಳನ್ನು ಗುರುತಿಸಬಹುದಾಗಿದೆ. ಒಂದು ಚಿಕ್ಕ ಘಟನೆಯೊಂದಿಗೆ ವಿವರಿಸುವುದಾದರೆ, ಒಬ್ಬ ಸಂಪ್ರದಾಯಸ್ಥ ಅಜ್ಜಿಯೊಬ್ಬಳು ಸಂತೋಷದಿಂದ ಸಿಹಿಯನ್ನು ಹಂಚುತ್ತಿದ್ದಳು. ಅದಕ್ಕೆ ಕಾರಣ ಅವಳ 10 ತಿಂಗಳ ಮೊಮ್ಮಗಳು ಮೊದಲಬಾರಿ ಹೊಸ್ತಿಲು ದಾಟಿದಳೆಂಬ ಸಂಗತಿಯಾಗಿತ್ತು. ಅಂದರೆ ಸ್ತ್ರೀ–ಪುರುಷರೆಂಬ ಭೇದವಿಲ್ಲದೇ ಜೀವನದ ಮೊದಲ ಹೆಜ್ಜೆಯನ್ನು ಸಂಭ್ರಮದಿಂದ ಆಚರಿಸುವ ಜೀವನ ಕ್ರಮದಲ್ಲಿಯೇ ಸ್ತ್ರೀವಾದದ ಲಿಂಗ ಸಮಾನತೆಯ ಅಂಶಗಳನ್ನು ಗುರುತಿಸಬಹುದು.

History Repeat ಎನ್ನುವಂತೆ ಇಂದು ನಾವು ಪಶ್ಚಿಮದ ಅನುಕರಣೆಯೆಂದು ನಂಬಿರುವ ಸ್ತ್ರೀವಾದದ ಮೂಲ ಬೇರುಗಳು ಭಾರತೀಯ ಸಂಪ್ರದಾಯದಲ್ಲಿಯೇ ಕಂಡುಬರುತ್ತವೆ. ವಿಶ್ವಕುಟುಂಬದ ತತ್ವವನ್ನು ತನ್ನೊಳಗೆ ಅಳವಡಿಸಿಕೊಂಡಿರುವ ಭಾರತೀಯ ಸಂಸ್ಕೃತಿಯಲ್ಲಿಯೇ ಸ್ತ್ರೀವಾದ ಅಂದರೆ ಲಿಂಗಸಮಾನತೆಯ ಅಂಶಗಳಿವೆ. ಇದಕ್ಕೆ ಸಾಕ್ಷಿ ಎನ್ನುವಂತೆ ನಮ್ಮ ದೇಶಿಯ ಜಾನಪದ ಕಾವ್ಯಗಳು, ಸ್ಥಳೀಯ ಆಚರಣೆಗಳು, ರೂಢಿಗತ ಸಂಪ್ರದಾಯಗಳು, ಶಾಸನಗಳು ಮತ್ತು ಜೀವವಿಜ್ಞಾನ–ಮನೋವಿಜ್ಞಾನದಂತಹ ಸಂಗತಿಗಳು ಇದನ್ನು ಸ್ಪಷ್ಟಪಡಿಸಬಲ್ಲವು. ಹೀಗಾಗಿ ದೇಶಿಯ ಸಂಪ್ರದಾಯಗಳ ಮರುಚಿಂತನೆಯ ಮೂಲಕ ನಾವಿಂದು ಬದಲಾಗಬೇಕಾಗಿದೆ. ಸ್ತ್ರೀವಾದದ ತತ್ವ ಸಿದ್ಧಾಂತಗಳನ್ನು ರೂಢಿಸಿಕೊಳ್ಳುವುವದರಲ್ಲಿಯೇ ನಮ್ಮ ಸಂಸ್ಕೃತಿಯ ಪ್ರಗತಿ ಸಾಧ್ಯವೆಂಬ ವಿಚಾರಗಳನ್ನು ಯುವ ಜನಾಂಗಕ್ಕೆ ತಿಳಿಸಿಕೊಡಬೇಕಾಗಿದೆ. ನಮ್ಮ ಕೌಟುಂಬಿಕ ವಾತಾವರಣ ವನ್ನು ಗಮನಿಸಿದಾಗ ನಡೆಯುವ ಹಲವು ಘಟನೆಗಳು ಇದಕ್ಕೆ ಪೂರಕವಾಗಬಲ್ಲವು. ಉದಾಹರಣೆಗೆ ಮಕ್ಕಳು ಅಂಬೆಗಾಲಿನಿಂದ ನಡೆಯುವುದು, ಸ್ವತಂತ್ರವಾಗಿ ಎದ್ದು ನಿಲ್ಲುವುದು ಹಾಗೂ ತಾಯಿಗೆ ಸಿಗದಂತೆ ದೂರ ಓಡುವುದನ್ನು ನಾವೆಲ್ಲ ಮಕ್ಕಳ ಪ್ರಗತಿಯೆಂದು ಪರಿಭಾವಿಸುತ್ತೇವೆ. ಹೀಗೆ ನಮ್ಮ ಪರಂಪರೆಯಲ್ಲಿಯೇ ಬಲಯುತವಾದ ಸ್ತ್ರೀತ್ವದ ಪ್ರಜ್ಞೆಯಿದೆ. ನಾವಿಂದು ಅಂತಹ ಸತ್ಯಗಳ ಶೋಧನೆಯ ಮೂಲಕ ಲಿಂಗ ಸಮಾನತೆಯನ್ನು ಸಾಧಿಸಬೇಕಾಗಿದೆ.

ಇನ್ನೊಂದು ಘಟನೆಯ ಮೂಲಕ ತಿಳಿಯುವುದಾದರೆ ಇಂದಿನ ಸರಕಾರಿ ಆಯೋಜಿತ ಹಲವು ಕಾರ್ಯಕ್ರಮಗಳನ್ನು ಗಮನಿಸಿದಾಗ ಉದಾಹರಣೆಗೆ – 'ಆಧಾರ ಯೋಜನೆ, ನೊಂದಣಿ ಇಲಾಖೆಗಳಲ್ಲಿನ

ದಾಖಲೆಗಳು, ವಿಶ್ವವಿದ್ಯಾಲಯಗಳಲ್ಲಿ ಬಯೋಮೆಟ್ರಿಕ್ ಯಂತ್ರಗಳ ಅಳವಡಿಕೆ, ಇನ್ನೂ ಮುಂತಾದ ಚಟುವಟಿಕೆಗಳಲ್ಲಿ ವ್ಯಕ್ತಿಯ ಗುರುತುಗಳಿಗಾಗಿ ಅವರ ಬೆರಳು ಮತ್ತು ಅಕ್ಷಿಪಟಲದ ಛಾಯಾಚಿತ್ರಗಳನ್ನು ದಾಖಲಿಸುತ್ತಾರೆ. ಇದರ ಉದ್ದೇಶ ನಿಸರ್ಗದತ್ತವಾಗಿಯೇ ಪರಸ್ಪರರ ಅಂಗಾಂಗಗಳು ಭಿನ್ನವಾಗಿರುತ್ತವೆ. ಹಾಗಾದರೆ ನಾವು ಕೇವಲ ಲಿಂಗದ ಕಾರಣದಿಂದಲೇ ಸ್ತ್ರೀ ಪುರುಷರನ್ನು ಮೇಲು-ಕೀಳೆಂದು, ಶ್ರೇಷ್ಠ-ಕನಿಷ್ಠವೆಂದು ರಂಪಾಟ ಮಾಡುವುದು ಅರ್ಥಹೀನವೆಂದಂತಾಯಿತಲ್ಲವೆ? ಒಂದೇ ತಾಯಿಗರ್ಭದಲ್ಲಿ ಜನಿಸಿದ ಅವಳಿ ಮಕ್ಕಳು ಭಿನ್ನರಾಗಿದ್ದು ಸ್ವತಂತ್ರವಾಗಿ ವರ್ತಿಸುತ್ತಾರೆ. ಹಾಗೆಂದ ಮೇಲೆ ಈ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ವತಂತ್ರ ನಿರ್ಧಾರಗಳನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲವೆಂದಂತಾಯಿತು.

ಜೀವ ವಿಜ್ಞಾನದ ಪ್ರಕಾರ ಸಣ್ಣಮಟ್ಟದ ಜೀವಿಗಳಲ್ಲಿ ಲಿಂಗದ ಪ್ರಶ್ನೆಯೇ ಉದ್ಭವಿಸಲಾರದು. ಅಮಿಬಾದಂತಹ ಏಕಕೋಶಿಯ ಜೀವಿಗಳು ವಿಭಜನೆ ಕ್ರಿಯೆಯ ಮೂಲಕವೇ ಸಂತಾನ ಅಭಿವೃದ್ಧಿಯನ್ನು ಮಾಡಿಕೊಳ್ಳುತ್ತವೆ. ಪ್ರಾಣಿಗಳಿಗೆ ಸಂಬಂಧಿಸಿದಂತೆ ಮಿಡತೆ, ಮೇಕೆ, ಹುಲಿ ಮುಂತಾದ ವರ್ಗದ ಜೀವಿಗಳ ಲೈಂಗಿಕ ಪ್ರವೃತ್ತಿಯ ಈಡೇರಿಕೆಯಲ್ಲಿ ಆಯ್ಕೆಯ ಹಕ್ಕು ಸ್ತ್ರೀಯರ ವರ್ಗಕ್ಕೆ ಪ್ರಧಾನವಾಗಿದೆ. ಇದು ನಿಸರ್ಗದತ್ತ ವ್ಯವಸ್ಥೆಯಲ್ಲಿನ ಸ್ತ್ರೀತ್ವದ ಪ್ರಧಾನತೆಯನ್ನು ಪ್ರತಿಪಾದಿಸುತ್ತದೆ. ಸಮುದ್ರದ ಹವಳದ ತೆನೆಗಳಲ್ಲಿ ಕಂಡುಬರುವ 'ಕಡಲ ಕುದುರೆ' (Sea Horse) ಎಂಬ ಪ್ರಾಣಿಗಳಲ್ಲಿ ಗಂಡು ಗರ್ಭಧರಿಸುತ್ತವೆ. ಈ ಜೀವಿಗಳಿಗೆ ಬಾಲದ ನಡುಭಾಗದಲ್ಲಿ ನಿಸರ್ಗದತ್ತವಾಗಿಯೇ ಸಂತಾನಕ್ಕಾಗಿ ಒಂದು ವಿಶೇಷ ಚೀಲವಿರುತ್ತದೆ. ಎಂಬುವುದನ್ನು ಇಂಗ್ಲೇಡಿನ ಖ್ಯಾತ ಪ್ರಾಣಿಶಾಸ್ತ್ರಜ್ಞೆ 'ಅಮಂಡಾ ವಿನ್ಸೆಂಟ್' ಅವರು ಸಂಶೋಧಿಸಿದ್ದಾರೆ.[1]

ಪಕ್ಷಿಸಂಕುಲಗಳ ಜೀವನವು ಇದಕ್ಕಿಂತ ಭಿನ್ನವಾಗಿ ಏನೂ ಇಲ್ಲ! ಪಕ್ಷಿಗಳು ಲಿಂಗಭೇದವಿಲ್ಲದೇ ಪರಸ್ಪರ ಜೊತೆಯಾಗಿಯೇ ಗೂಡು ಕಟ್ಟುತ್ತವೆ. ಆಹಾರ ಸಂಗ್ರಹಿಸುತ್ತವೆ. ಮೊಟ್ಟೆಯಿಂದ ಹೊಸ ಜೀವವೊಂದು ರೂಪಗೊಳ್ಳುವವರೆಗೂ ಸಮನಾಗಿಯೇ ಕಾರ್ಯನಿರ್ವಹಿಸುತ್ತವೆ. ಮಕ್ಕಳ ಲಾಲನೆ ಪಾಲನೆಯಲ್ಲಿ ಸಮಾನವಾದ ಅಧಿಕಾರಗಳನ್ನು ಹೊಂದಿವೆ. ಆದರೆ ಇವೆಲ್ಲವೂಗಳಿಗಿಂತಲೂ ಬುದ್ಧಿವಂತ ಎನಿಸಿಕೊಂಡ ಮಾನವರಲ್ಲಿ ಸ್ತ್ರೀ-ಸಮುದಾಯದ ಶೋಷಣೆಯನ್ನು ಕಾಣುತ್ತೇವೆ. ಕೇವಲ ದೈಹಿಕ ಸಾಮರ್ಥ್ಯಗಳ ಆಧಾರದ ಮೇಲೆಯೇ ಮೇಲು ಕೀಳೆಂದು ವಿಭಜಿಸುವುದಾದರೆ ಪುರುಷನಿಗಿಂತಲೂ ಬಲಿಷ್ಟವಾದ ಕಾಡು ಪ್ರಾಣಿಗಳೇ ಶ್ರೇಷ್ಟವಾದಂತಾಯಿತಲ್ಲವೆ?

ಚರಿತ್ರೆಯುದ್ದಕ್ಕೂ ನಡೆದ ಹಲವು ಘಟನೆಗಳಲ್ಲಿ ಸ್ತ್ರೀತ್ವದ ಹಲವು ಶ್ರೇಷ್ಟ ಪರಿಕರಗಳಿವೆ. 10ನೇ ಶತಮಾನದಲ್ಲಿ ರಚಿತವಾದ ದುರ್ಗಸಿಂಹನ 'ಪಂಚತಂತ್ರ' ಕತೆಗಳಲ್ಲಿ ಸ್ತ್ರೀ ಪ್ರಾಧಾನ್ಯತೆಯ ಪಾತ್ರಗಳು ಕಂಡುಬರುತ್ತವೆ. ತಪ್ಪಿತಸ್ಥರಿಗೆ ಶಿಕ್ಷೆ ನೀಡುವ, ದುರ್ಬಲರಿಗೆ ಸಹಾಯ ಮಾಡುವ ಮತ್ತು ಸಮಸ್ಯೆಗಳನ್ನು ಸೂಕ್ತವಾಗಿ ನಿರ್ಣಯಿಸುವ ಸ್ತ್ರೀಯರ ಗುಣಗಳು ಕಥೆಯ ಪ್ರಧಾನ ಪಾತ್ರವಾಗಿವೆ. ಈ ಮೂಲಕ ಭಾರತೀಯ ಸಮಾಜದಲ್ಲಿ ಹಿಂದಿನಿಂದಲೂ ರೂಢಿಗತವಾಗಿರುವ ಅಂಶಗಳನ್ನು ತಿಳಿಯಬಹುದು. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಿನ ಮಾತನ್ನು ತಪ್ಪಾಗಿ ಗ್ರಹಿಸಿಕೊಂಡ ನಮ್ಮ ಸಮುದಾಯ ಇಂದು ಅಲ್ಲಿ ನೀಡಲಾದ ಸ್ತ್ರೀಯರ ಸ್ವಾತಂತ್ರ್ಯವನ್ನೂ ಅರಿಯಬೇಕಾಗಿದೆ. ಮನುವಿನ ಹಲವು ಸೂತ್ರಗಳಲ್ಲಿ ಸ್ತ್ರೀಯರ ಸ್ವಾತಂತ್ರ್ಯ ಮತ್ತು ಬದುಕಿನ ಕುರಿತಾದ ಸ್ಪಷ್ಟ ಚಿತ್ರಣಗಳು ಕಂಡುಬರುತ್ತವೆ.

"ತ್ರೀಣಿ ವರ್ಷಾಣ್ಯ ದೀಕ್ಷೇತ ಕುಮಾರ್ಯೈ ತಮತೀ ಸತಿ ।
ಊರ್ಧ್ವಂ ತು ಕಾಲಾದೇತಸ್ಮಾತ್ ವಿಂದೇತ ಸದೃಶಂ ಪತಿಮ್"॥[2]

ಅಂದರೆ - ಮದುವೆಯ ವಯಸ್ಸಿಗೆ ಬಂದ ಕುಮಾರಿ (ಮಗಳು) ಯನ್ನು ತಂದೆ ತಾಯಿಗಳು ಮದುವೆ ಮಾಡದೇ ಹೋದರೆ ಅವಳು ತಾನೇ ತನಗೆ ಅನುರೂಪವಾದ ವರನನ್ನು ಹುಡುಕಿಕೊಂಡು ಮದುವೆಯಾಗಬಹುದು. ಈ ಮಾತು ಸ್ತ್ರೀಯರ ಗರಿಷ್ಠ ಸ್ವಾತಂತ್ರ್ಯವನ್ನು ತಿಳಿಸುತ್ತದೆ.

ಪುರಾಣಗಳಲ್ಲಿಯೂ ಸ್ತ್ರೀಯರ ಗೌರವಯುತ ಬದುಕು ಮತ್ತು ಸ್ವತಂತ್ರ ಪ್ರವೃತ್ತಿಯ ಕಾರ್ಯಗಳ ಕುರಿತ ಉಲ್ಲೇಖವಿದೆ. ಅಲ್ಲಿ ದಾಖಲಾದ ದೇವ ದೇವತೆಗಳ ಹೆಸರಿನ ಆರಂಭದಲ್ಲಿ ಸ್ತ್ರೀಯರ ಹೆಸರು ಮೊದಲಿದೆ. ನದಿಗಳಿಗೆ ಸ್ತ್ರೀಯರ ಹೆಸರುಗಳಿಂದ ಕರೆಯುವ ರೂಢಿಯಿದೆ. ಋಗ್ವೇದದಲ್ಲಿ ದಾಖಲಾದ 'ಅಮಜುಃ' (ಬ್ರಹ್ಮಚಾರಿಣಿ) ಎಂಬ ಪದಗಳು ಸ್ತ್ರೀಯರು ವಿವಾಹವಾಗದೇ ಇರುವ ಬದುಕಿನ ಆಯ್ಕೆಯ ಸ್ವಾತಂತ್ರ್ಯವಿತ್ತು ಎಂಬುವುದನ್ನು ತಿಳಿಸುತ್ತದೆ. ಸತ್ಯಕಾಮ ಮತ್ತು ಜಾಬಾಲಿಯ ಮಧ್ಯೆ ನಡೆದ ಸಂವಾದದಲ್ಲಿ ಸ್ತ್ರೀಯರಿಗೆ ನೀಡಿದ್ದ ಲೈಂಗಿಕ ಸ್ವಾತಂತ್ರ್ಯದ ವ್ಯಾಪ್ತಿಯನ್ನು ಅರಿಯಬಹುದು. ಅಲ್ಲದೇ ಒಂದೇ ಋಷಿಯ ಆಶ್ರಮದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿದ್ಯಾರ್ಜನೆ ಮಾಡುವ ಉಲ್ಲೇಖಗಳು ಸಂಸ್ಕೃತದ ಶಾಕುಂತಲ ನಾಟಕದಲ್ಲಿ ಕಂಡು ಬರುತ್ತದೆ.[3]

6ನೇ ಶತಮಾನದಲ್ಲಿ ಬುದ್ಧನ ಉಪದೇಶದ ಬಲದಿಂದ ಪ್ರೇರಿತಳಾದ ಕೋಸಲ ರಾಜ್ಯದ ಬಡ ಬ್ರಾಹ್ಮಣನ ಮಗಳು 'ಮುತ್ತಾ' ಎನ್ನುವವಳು ರಚಿಸಿದ 'ಥೇರಿಗಾಥಾ' ಕೃತಿಯಲ್ಲಿನ ಸಾಲುಗಳು ಇಂದಿನ ಸ್ತ್ರೀವಾದಿಯ ಅಧಿಕಾರದ ಅಂಶಗಳನ್ನು ತಿಳಿಸುವಂತಿವೆ.

"ಓ ಎಂಥ ಬಿಡುಗಡೆ ! ಅಮೋಘವಾದ ಬಿಡುಗಡೆ
ಮುಕ್ತಳಾಗಿರುವೆ ಈಗ ಮೂರು ಹಾಳು ಜಂಜಾಟಗಳಿಂದ
ಬೀಸುವ ಕಲ್ಲಿನಿಂದ, ಕುಟ್ಟುವ ಒನಕೆಯಿಂದ,
ಗೂನು ಬೆನ್ನಿನ ನನ್ನ ಆ ಗಂಡನಿಂದ."॥ [4]

ಹೀಗೆ ನಮ್ಮ ದೇಶಿಯ ಪರಂಪರೆಯೊಳಗೆ ಸ್ತ್ರೀಯರ ಗುಣಾತ್ಮಕ ಅಂಶಗಳು ಕಂಡುಬಂದರೂ ಇಂದಿನ ನಾಗರಿಕ ಸಮಾಜವು



ಸ್ತ್ರೀವಾದವನ್ನು ಪಶ್ಚಿಮದ ಸರಕೆಂದು ಸಾರಾಸಗಟವಾಗಿ ತಳ್ಳಿ ಹಾಕುತ್ತಲಿದೆ.

ಯಾವ ಅಕ್ಷರ ಜ್ಞಾನವೂ ಇಲ್ಲದ ಜನಪರ ಸ್ತ್ರೀ ಸಮುದಾಯಗಳಲ್ಲಿ ಸೃಷ್ಟಿಯಾದ ಸ್ತ್ರೀ ಪ್ರತಿಮೆಗಳು ಶ್ರೇಷ್ಠ ವ್ಯಕ್ತಿತ್ವವನ್ನು ತಿಳಿಸುತ್ತವೆ. ಪುರುಷರಿಗೆ ಸಾಧ್ಯವಾಗದ ಗೆಲುವನ್ನು ಸ್ತ್ರೀ ಸಾಧಿಸಿದ ಹಲವು ಉದಾಹರಣೆಗಳಿವೆ. ಜೂಜಿನಲ್ಲಿ ಕೌರವನನ್ನು ಗೆಲ್ಲುವ ದ್ರೌಪದಿ, ರಾಜಪ್ರಭುತ್ವದ ಅನ್ಯಾಯದ ವಿರುದ್ಧ ಸಿಡಿದೆದ್ದ ಕಲ್ಲುರ್ಟಿ, ಗಂಡನ ಮೋಸವನ್ನು ಪ್ರತಿಭಟಿಸಿದ ಮಾನಿಗ, ಬಂಧನದ ಸ್ತ್ರೀ ಸಂಕೇತಗಳಾದ ಕರಿಮಣಿ, ಮೂಗುತಿ, ಬಳೆಗಳನ್ನು ಕಿತ್ತೆಸೆದು ಗಂಡನಿಗೆ ವಿಚ್ಛೇದನ ನೀಡುವ ಸಿರಿ, ಗಂಡನನ್ನು ಕೊಂದವನನ್ನು ಪ್ರತಿಯಾಗಿ ಕೊಲ್ಲುವ ಹಿರಿದಿಮ್ಮೆ– ಹೀಗೆ ಸ್ತ್ರೀತ್ವದ ಶ್ರೇಷ್ಠ ಪ್ರತಿಮೆಗಳು ಜನಪದ ಸಾಹಿತ್ಯದಲ್ಲಿ ಕಂಡುಬರುತ್ತವೆ.

ವೇದಗಳ ಕಾಲದಲ್ಲಿಯೇ ಮಹಿಳೆಯರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಸಂಚಿ ಹೊನ್ನಮ್ಮಳು ರಚಿಸಿದ – 'ಹದಿಬದೆಯ ಧರ್ಮ' ಎಂಬ ಗ್ರಂಥದಲ್ಲಿ ಗಂಡನ ಇರುವಿಕೆಯನ್ನು ಕುರಿತು ಬೋಧಿಸುತ್ತಾಳೆ. ಅತ್ತಿಮಬ್ಬೆಯು ರನ್ನನಂತ ಶ್ರೇಷ್ಠ ಕವಿಗಳಿಗೆ ಆಶ್ರಯನೀಡಿ ಧರ್ಮ ಮತ್ತು ಸಂಸ್ಕೃತಿಯನ್ನು ಬೆಳಗುತ್ತಾಳೆ. ಅಕ್ಕ ಮಹಾದೇವಿಯು ಶ್ರೇಷ್ಠ ವಿಚಾರಗಳ ಮೂಲಕ ವಚನಗಳನ್ನು ರಚಿಸಿದ್ದಾಳೆ. ಆಯ್ದಕ್ಕಿ ಲಕ್ಕಮ್ಮಳು ಗಂಡನಿಗೆ ಬೋಧಿಸುವ ಅಂಶಗಳಲ್ಲಿ ಸಾತ್ವಕ ಅಂಶಗಳಿವೆ. ಹೀಗೆ ಚರಿತ್ರೆಯುದ್ದಕ್ಕೂ ಹೆಣ್ಣಿನ ವಿಶಿಷ್ಟ ಪ್ರತಿಭೆಯನ್ನು ಕಾಣುತ್ತೇವೆ. ಇವರೆಲ್ಲರ ವಿಚಾರಗಳು ಸ್ತ್ರೀವಾದಿ ನೆಲೆಯಲ್ಲಿಯೇ ರೂಪುಗೊಂಡಿವೆ.

ಇಂದು ಶಿಕ್ಷಣ ಕಲಿತ ಮಹಿಳೆಗೆ ಮುಕ್ತ ಸಮಾಜದೊಂದಿಗೆ ಬೆರೆಯುವ ಅವಕಾಶ ಕಲ್ಪಿಸಬೇಕು. ಸಂಪ್ರದಾಯಗಳನ್ನು ಮೀರಿದ ತಿಳುವಳಿಕೆ, ಮೌಲ್ಯಗಳು ನಮ್ಮ ಶಿಕ್ಷಣದ ಅಂಗಗಳಾಗಬೇಕು. ಯಾವ ರೀತಿಯಲ್ಲಿ ಹೊಸ್ತಿಲು ದಾಟಿದ ಮಗಳನ್ನು ಪ್ರೋತ್ಸಾಹಿಸುವ ನಮ್ಮ ನೆಲದ ಸಂಪ್ರದಾಯಗಳಂತೆ ನಾವಿಂದು ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರೋತ್ಸಾಹಿಸುವ ಅಗತ್ಯತೆ ಹೆಚ್ಚಾಗಿದೆ. ಇಲ್ಲವಾದರೆ ನಾವೆಲ್ಲ ಕಣಜದ ದಾನ್ಯಗಳಂತೆ ಪ್ರಗತಿ ಶೂನ್ಯರಾಗುತ್ತೇವೆ. ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯಿಂದ ಸಾಮಾಜಿಕ ನಿಯಮಗಳನ್ನು ಬದಲಿಸಿಕೊಳ್ಳಬೇಕಾಗಿದೆ. ಪಾಶ್ಚಾತ್ಯರ ಎಲ್ಲ ನಿಯಮಗಳು ವಿರೋಧಿಸದೇ ಅಲ್ಲಿರುವ ಮೌಲಿಕ ಅಂಶಗಳನ್ನು ಸ್ವೀಕರಿಸಿಕೊಂಡು ನಮ್ಮ ಸಂಸ್ಕೃತಿಗೆ ಹೊಸ ಮಾರ್ಗ ತೋರಿಸಬೇಕಾಗಿದೆ.

ಅಡಿಟಿಪ್ಪಣೆಗಳು :

1. ಮಹಿಳಾ ಅಧ್ಯಯನ – ನೇಮಿಚಂದ್ರ, ಅಂಕಿತ ಪ್ರಕಾಶನ – ಬೆಂಗಳೂರು, 2011 (ಪು.107)
2. ಮಾನವ ಧರ್ಮಶಾಸ್ತ್ರ ಮತ್ತು ಮಹಿಳೆಯರು – ಎನ್. ರಂಗನಾಥ ಶರ್ಮಾ : ಶ್ರೀ ಭಗವತ್ಪಾದ ಪ್ರಕಾಶನ, ಸಿರಸಿ, 2004. (ಪು.99)
3. ಭಾರತೀಯ ಸಂಸ್ಕೃತಿ–ಸಾನೆ ಗುರೂಜಿ (ಮರಾಠಿ ಮೂಲ) ಸಾಹಿತ್ಯ ಸಿಂಧೂ ಪ್ರಕಾಶನ, ಬೆಂಗಳೂರು, 2001 (ಪು.19).
4. ಮಹಿಳೆ ಬಿಡುಗಡೆಯ ಹಾದಿಯಲ್ಲಿ – ಎನ್. ಗಾಯತ್ರಿ : ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು, 1996, (ಪು.32)

❑



ತನ್ನ ಕನಸ ಬೆನ್ನಟ್ಟಿ ಕಾಣೆಯಾದ ವಿಮಾನಯಾನಿ

■ ದಿಶಾ ಕೆ.ಆರ್.

ಅಮೇರಿಕದ ಆಟ್ಚಿಸನ್ ಕನಸಸ್ನಲ್ಲಿ 1897ರ ಜುಲೈ 24ರಂದು ಜನಿಸಿದ ಅಮೇಲಿಯ ಒಬ್ಬಂಟಿಯಾಗಿ ಅಟ್ಲಾಂಟಿಕ್ ಸಾಗರವನ್ನು ದಾಟಿದ ಮೊದಲ ಮಹಿಳಾ ಪೈಲಟ್. ವೈಮಾನಿಕ ಜಗತ್ತಿನಲ್ಲಿ ಆಕೆ ಮಾಡಿದ ಸಾಧನೆ ಒಂದೆರಡಲ್ಲ.

ಸ್ಥಿತಿವಂತರ ಕುಟುಂಬದಲ್ಲಿ ಜನಿಸಿ ನಂತರ ತಂದೆಯ ಕುಡಿತದ ಚಟದಿಂದಾಗಿ ತುಸು ಕಷ್ಟದಲ್ಲೆ ಬದುಕಬೇಕಾಯಿತು ಚಿಕ್ಕ ವಯಸ್ಸಿನಿಂದಲೂ ಅದವೆನಚರ್ ಆಗಿದ್ದ ಇಯರ್‌ಹಾರ್ಟ ತನ್ನ ತಂಗಿಯ ಜೊತೆ ಅವರ ಮನೆಯ ಸುತ್ತ ಸುತ್ತುತ್ತಿದ್ದರು. ಅಮ್ಮನ ಆಸೆಯಂತೆ ಎಲ್ಲರಿಗಂತ ವಿಭಿನ್ನವಾಗಿ ಬೆಳೆದರು.

ಕಾಲೇಜು ಮುಗಿಸಿದ ನಂತರ ನರ್ಸಿಂಗ್ ಮಾಡಿದ ಇಯರ್‌ಹಾರ್ಟ ಸ್ಪಾಡಿನ ಮಿಲಿಟರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿದರು. ಇದರ ಮಧ್ಯೆ ಒಂದು ದಿನ ತನ್ನ ತಂದೆಯ ಜೊತೆ ವೈಮಾನಿಕ ಕೇಂದ್ರಕ್ಕೆ ಭೇಟಿ ಕೊಟ್ಟ ಇಯರ್‌ಹಾಟ್ ಫ್ರಾಂಕ್ ಹಾಕ್ಸ ಅನ್ನುವವರ ಜೊತೆ ನಡೆಸಿದ 10 ನಿಮಿಷದ ವಿಮಾನ ಯಾನದಂದ ಅವರ ಜೀವನವೇ ಬದಲಾಯಿತು. ಅಮೇಲಿಯೇ ಹೇಳುವ ಹಾಗೆ ' ಸುಮಾರು 200 300 ಅಡಿ ಎತ್ತರಕ್ಕೆ ಹಾರಿದ ಕೂಡಲೆ ನನಗೆ ತಿಳಿದದ್ದು ನಾನು ಹಾರಾಡಬೇಕೆಂದು'. ವೈಮಾನಿಕ ಯಾನದ ಪಾಠ ಪಡೆಯಲು ಇಯರ್‌ಹಾರ್ಟ ಎಲ್ಲಾ ತರಹದ ಸಣ್ಣಪುಟ್ಟ ಕೆಲಸಮಾಡಿ 1000$ ರನ್ನು ಕೂಡಿಸಿ ವಿಮಾನ ಹಾರಾಟ ವೃತ್ತಿಗೆ ಸೇರಿಕೊಂಡರು.

ಇಡಿ ವಿಶ್ವವನ್ನು ವಿಮಾನದಲ್ಲಿ ಒಂಟಿಯಾಗಿ ಸುತ್ತುವ ಕನಸನ್ನೊಂದಿದ್ದರು. 1937ರಲ್ಲಿ ಇಯರ್‌ಹಾರ್ಟ ತನ್ನ ಕನಸ ಬೆನ್ನಟ್ಟಿ ಮಾಯವಾದಳು. ಪೆಸಿಫಿಕ್ ಸಾಗರದ ಹೌಲ್ಯಾಂಡ್ ದ್ವೀಪದ ಬಳಿ ಕಾಣೆಯಾದರೂ. ರೇಡಿಯೋ ಟ್ರಾನ್ಸ್‌ಮಿಷನ್‌ನಲ್ಲಿ ತಾಂತ್ರಿಕ ಲೋಪವಿದ್ದುದ್ದರಿಂದ, ಸರಿಯಾದ ಮಾಹಿತಿ ಸಿಗದೆ ವಿಮಾನವನ್ನು ಬೇರೆ ದಿಕ್ಕಿನೆಡೆಗೆ ಚಲಿಸಿದ ಕಾರಣ ಅಮೆಲಿಯ ಕಾಣೆಯಾದರು. 2 ವರ್ಷ ಸತತವಾಗಿ ನಡೆದ ಶೋಧ ಕಾರ್ಯಚರಣೆಯಲ್ಲಿ ಅಮೆಲಿಯ ಶವವಾಗಲಿ, ವಿಮಾನದ ಕುರುಹುವಾಗಲಿ ಸಿಗಲಿಲ್ಲ. 2 ವರ್ಷದ ನಂತರ 1939ರಲ್ಲಿ ಅವರ ಸಾವನ್ನು ಘೋಷಿಸಿದರು.

ವೃತ್ತಿಪರ ಮಾತ್ರವಲ್ಲದೆ ಸಾಮಾಜಿಕ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇಯರ್‌ಹಾರ್ಟ ನ್ಯಾಷನಲ್ ವುಮನ್ ಪಾರ್ಟಿಯ ಸದಸ್ಯೆಯಾಗಿದ್ದರು. ಇಕ್ವಲ್ ರೈಟ್ಸ ಅಮೆಂಡ್‌ಮೆಂಟಿನ ಬೆಂಬಲಿಗರಾಗಿದ್ದರು ಹಾಗೂ 'ದಿ ನೈಂಟಿ–ನೈನ್ಸ್' ಎಂಬ ಸಂಘಟನೆಯನ್ನು ಮಹಿಳಾ ಪೈಲಟ್‌ಗಳಿಗೆ ಸ್ಥಾಪಿಸಿದರು.

ಅಮೇಲಿಯ ಮೇರಿ ಇಯರ್‌ಹಾರ್ಟನ ಬದುಕಿನಲ್ಲಿ ಶುರುವಾದ ವಿಮಾನ ಯಾನ ಕೊನೆಗೊಂಡ್ದು ಅವರ ಸಾವಿನಲ್ಲೆ.

❑

ಮಹಿಳೆಯರಿಗೆ ಸ್ವಾತಂತ್ರ್ಯವಿದೆಯೇ?



■ ಶಾಲಿನಿ ಆರ್.

ಸ್ತ್ರೀ ಎಂದರೆ ಎಲ್ಲರ ಬಾಯಿಯಲ್ಲಿ ಮೂಡುವುದು ಅಯ್ಯೋ! ಪಾಪ ಎಂಬ ಕನಿಕರದ ಮಾತುಗಳು. ಇಂತಹ ಹರ್ಷೋದ್ಗಾರದ ಮಾತುಗಳನ್ನು ಹಾಡುತ್ತಾ ಮಹಿಳೆಯರನ್ನು ತನ್ನ ಬಂಧಿಯಲ್ಲಿ ಹಿಡಿಯುವ ಪ್ರಯತ್ನದಲ್ಲಿ ತೊಡಗಿರುವುದು .ಶೋಚನೀಯ. ಅದೇ ರೀತಿ ಸ್ತ್ರೀಯು ಬಹಳ ನಯವಂತೆ, ಸಹನವಂತೆ, ಗುಣವಂತೆ, ತ್ಯಾಗಮಯಿ, ಸಂಯಮದ ಸಂಕೇತ ಎಂದೆಲ್ಲಾ ಬಣ್ಣ ಬಣ್ಣವಾಗಿ ಬಿಂಬಿಸಿ ಅವಳನ್ನು ಮರುಳಾಗಿಸಿ ತನ್ನ ಬಂಧಿಯಲ್ಲಿಡುವ ಪ್ರಯತ್ನಗಳು ಇಂದಿಗೂ ಮುಂದುವರೆಯುತ್ತಿವೆ.

ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿದೆ. ಅವಳು ತನ್ನ ಕೆಲಸದ ಕ್ಷೇತ್ರವನ್ನು ಎಲ್ಲಾ ಕಡೆಗಳಲ್ಲಿಯೂ ವಿಸ್ತರಿಸಿಕೊಂಡಿದ್ದಾಳೆ ಎಂಬ ಬೂಟಾಟಿಕೆಯ ಮಾತುಗಳನ್ನು ಗಂಟೆ ಗಂಟಲೆ ಮೈಕುಗಳ ಮುಂದೆ ನಿಂತು ಭಾಷಣಕಾರರಲ್ಲಿ ಬರೀ ಭಾಷಣ ವಾಗಿಯೇ ಉಳಿದಿದೆಯೇ ವಿನಃ ಅದು ಕಾರ್ಯಗತ ವಾಗದಿರುವುದು ಶೋಚನಿಯ.

ಪ್ರತಿಯೊಬ್ಬರ ಬದುಕಿನಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಪಾತ್ರವಹಿಸಿ, ತನ್ನ ಜವಬ್ದಾರಿಯನ್ನು ನಿರ್ವಹಿಸುತ್ತಾ ಸದಾ ಒತ್ತಡದಿಂದಲೇ ಜೀವನ ಸಾಗಿಸುತ್ತಿರುವ ಇವಳು ಪುರುಷರ ಬೇಕು-ಬೇಡಗಳಿಗೆ ಸ್ಪಂದಿಸಲೇ ಬೇಕಾದ ಯಂತ್ರವಾಗಿ ಪರಿವರ್ತನೆಗೊಂಡಿರುವ ಮಹಿಳೆಯರಿಗೆ ಸ್ವಾತಂತ್ರ್ಯ ಎಂಬ ಪದ ಪ್ರಶ್ನಾರ್ಥಕ ಚಿಹ್ನೆಯಾಗಿಯೇ ಉಳಿದಿದೆ.

ನಾಲ್ಕು ಗೋಡೆಗಳಿಂದ ನಿರ್ಬಂಧಿತಳಾಗಿ ನಾಲ್ಕು ಕಾಸು ಸಂಪಾದಿಸುವ ಶಕ್ತಿಯನ್ನು ಪಡೆದ ತಕ್ಷಣ ಅದು ಸಂಪೂರ್ಣ ಸ್ವಾತಂತ್ರ್ಯ ದೊರೆತಂತೆ ಎಂದು ಊಹಿಸುವುದು, ಪ್ರಚೋದಿಸುವುದು ಎಷ್ಟರ ಮಟ್ಟಿಗೆ ಸರಿಯಾದಿತು. ಸಮಾಜದ ಆಶಾಕಿರಣವಾಗಿ ಬೆಳೆದಿರುವ ಮಹಿಳೆಯರಿಗೆ ಸ್ವಾತಂತ್ರ್ಯ ಎಂಬುದು ಎಷ್ಟರ ಮಟ್ಟಿಗೆ ತಲೆ ಎತ್ತಿದೆ ಎಂಬುವುದು ಅವಲೋಕಿಸುವ ಮುನ್ನ ಪ್ರಾಚೀನ ಕಾಲದಲ್ಲಿ ಮಹಿಳೆಯ ಸ್ಥಿತಿಗತಿಯನ್ನು ಮೆಲುಕು ಹಾಕುವುದು ಸೂಕ್ತ ಎನಿಸುತ್ತದೆ.

ಪುರಾತನ ನಾಗರೀಕತೆಯಾದ ಗ್ರೀಕ್ ನಾಗರೀಕತೆಯಲ್ಲಿ ಸ್ತ್ರೀಯರನ್ನು ಕೀಳಾಗಿ ಕಾಣಲಾಗುತ್ತಿತ್ತು. ಅವರು ತಮ್ಮ ಎಲ್ಲಾ ಹಕ್ಕುಗಳಿಂದ ವಂಚಿತರಾಗಿದ್ದರು ಎಂದು ಹೇಳಬಹುದು. ಬ್ಯಾಬಿಲೋನಿಯನ್ ನಾಗರೀಕತೆಯಲ್ಲಿ ಸ್ತ್ರೀಯರು ಯಾವುದಕ್ಕೂ ಬೇಡವಾಗಿದ್ದರು ಮತ್ತು ಒಬ್ಬ ವ್ಯಕ್ತಿ/ಪುರುಷ ಮಹಿಳೆಯನ್ನು ಕೊಲೆ ಮಾಡಿದರೆ ಅದಕ್ಕೆ ಕೊಲೆಗಾರನ ಪತ್ನಿಯನ್ನು ಕೊಲೆಗೈಯುತ್ತಿದ್ದರು. ಅದೇ ರೀತಿ ಪುರಾಣಗಳಲ್ಲಿ ಎಲ್ಲಾ ಕೆಡುಕು ಮತ್ತು ದುರಾದೃಷ್ಟಗಳಿಗೆ ಮಹಿಳೆಯೇ ಕಾರಣವೆಂದು ನಂಬಲಾಗಿತ್ತು. ಅಲ್ಲದೆ ಪುರುಷರು ಸ್ತ್ರೀಯರನ್ನು ತಮ್ಮೆಲ್ಲಾ ಕೆಲಸಗಳಿಗೆ ಬಳಸುತ್ತಿದ್ದರೂ ಅವರಿಗೆ ಹಕ್ಕುಗಳು ಮಾತ್ರ ನಿರಾಕರಿಸಲ್ಪಟ್ಟಿದ್ದವು ಎಂದರೆ ಅವಳ ಅಂದಿನ ಜೀವನ ಎಷ್ಟು ನರಕಮಯ ಯಾತನೆ ಎಂಬುವುದನ್ನು ಚಿಂತಿಸಬೇಕು.

ಇನ್ನು ಈಜಿಪ್ಟಿಯನ್ ನಾಗರೀಕತೆಯಲ್ಲಿ ಸ್ತ್ರೀಯರನ್ನು ಅನಿಷ್ಟಕಾರಿ ಹಾಗೂ ಪಿಶಾಚಿಯ ವಕ್ತಾರರೆಂದು ಪರಿಗಣಿಸಿತ್ತು. ಅದೇ ರೀತಿ ಇಸ್ಲಾಮಿ ಪೂರ್ವ ಅರೇಬಿಯಾದಲ್ಲಿ ಸ್ತ್ರೀಯರನ್ನು ಕಡೆಗಣಿಸಿ ಹೆಣ್ಣು ಮಗು ಜನಿಸಿದ್ದಲ್ಲಿ ಜೀವಂತ ಹೂತು ಹಾಕುತ್ತಿದ್ದರು. ಇದನ್ನು ಗಮನಿಸಿದರೆ ಬಹುಶಃ ಇಂದಿನ ಹೆಣ್ಣು ಬ್ರೂಣ ಹತ್ಯೆಯು ಬಹಳ ಹಿಂದಿನ ಇತಿಹಾಸದ ಮಹಾಜಾಲವನ್ನೇ ಹೊಂದಿದೆ ಎಂದು ಹೇಳಬಹುದು.

ರೋಮನ್ ನಾಗರೀಕತೆಯಲ್ಲಿ ಒಬ್ಬ ಪುರುಷನಿಗೆ ತನ್ನ ಪತ್ನಿಯನ್ನು ಕೊಲ್ಲುವ ಅಧಿಕಾರವಿತ್ತು ಎಂಬೆಲ್ಲಾ ಪೂರ್ವ ಇತಿಹಾಸವನ್ನು ಗಮನಿಸಿದರೆ ಇಂತಹ ದರ್ಪದ ಶೋಷಣೆಯಿಂದ ಕೆಲ ಮಹಿಳೆಯರು ಮಾತ್ರ ಬಿಡುಗಡೆ ಹೊಂದಿದ್ದಾರೆ. ಇನ್ನು ಭಾರತದಂತಹ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ಶತಮಾನಗಳಿಂದ ದಮನಿತಳಾಗಿಯೇ ಬಂದಿದ್ದಾಳೆ. ಆದರೆ ಇಂದು ಅದೆಷ್ಟು ಸ್ತ್ರೀವಾದಿಗಳು ಮತ್ತು ಮಹಿಳಾಪರ ಸಂಘಟನೆಗಳು ತಲೆಯೆತ್ತಿ ಶೋಷಣೆಗೆ ಸ್ವಲ್ಪಮಟ್ಟಿನ ಬ್ರೇಕ್ ಬಿದ್ದಿದೆಯೇ ವಿನಃ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲ.

ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಬಹುತೇಕ ಸ್ತ್ರೀಯರು ದುಡಿಯುತ್ತಿದ್ದಾರೆ. ದೇಶದ ಮೊದಲ ರಾಷ್ಟ್ರಪತಿ ಮಹಿಳೆ ಎಂದ ತಕ್ಷಣ ಎಲ್ಲಾ ಮಹಿಳೆಯರಿಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಭಾವಿಸುವುದು ಮೂರ್ಖತನದ ಪರಮಾವಧಿಯೇ ಸರಿ. ಕನ್ನಡ ಸಾಹಿತ್ಯದ ಕಾಲಘಟ್ಟ ಗಳನ್ನು ಅವಲೋಕಿಸಿದಾಗ ಮೊಟ್ಟಮೊದಲು ಸಮಾಜದಲ್ಲಿ ಹೆಣ್ಣಿಗೆ ಗಂಡಿನ ಜೊತೆ ಸಮಾನ ಅವಕಾಶವನ್ನು ಕೊಟ್ಟಿದ್ದು ಹನ್ನೆರಡನೆ ಶತಮಾನದ ವಚನ ಚಳವಳಿಯಾಗಿರುತ್ತದೆ.

ಎಲ್ಲರ ಹೇಳಿಕೆಯಂತೆ ದುಡಿದು ಹಣ ಸಂಪಾದಿಸಿ ತನ್ನ ಕ್ಷೇತ್ರವನ್ನು ವ್ಯಾಪಿಸುವುದೇ ಸ್ವಾತಂತ್ರ್ಯ ಎಂದುಕೊಂಡರೆ, ಯಾವ ವರ್ಗದ ಮಹಿಳೆಯರು ಉನ್ನತ ಅಧಿಕಾರಿಗಳಾಗಿ, ಕೆಲಸಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಂಬುದನ್ನು ಅವಲೋಕಿಸಬೇಕು. ಆದರೆ ಇಂದಿಗೂ ಮಹಿಳಾ ಹತ್ಯಾಚಾರ, ಕೊಲೆ, ಹಿಂಸೆ ಹೀಗೆ ಎಲ್ಲಾ ತರಹದ ಶೋಷಣೆಗಳೂ ನಡೆಯುತ್ತಿರುವುದನ್ನು ಪ್ರತಿನಿತ್ಯ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಲೇ ಇರುತ್ತವೆ. ಇದನ್ನೆಲ್ಲಾ ಗಮನಿಸಿದರೆ ಇನ್ನೂ ಸ್ತ್ರೀ ಸ್ವಾತಂತ್ರ್ಯ ಬರೀ ಮರಿಚಿಕೆಯೇ ಆಗಿದೆ. ❑

ಪತ್ರಿಕೆಗೊಂದು ಪತ್ರ

ಆತ್ಮೀಯರೇ,

'ನಮ್ಮ ಮಾನಸ' ಬಳಗಕ್ಕೆ ಸರೋಜಾ ಸಂತಿಯವರ ನಮಸ್ಕಾರಗಳು. ಪತ್ರಿಕೆ ಹೊಸ ತಲೆಮಾರಿನವರ ಜೊತೆಗೆ ಸಾಗುತ್ತಿರುವುದು ಸಂತೋಷ ಹಾಗೇಯೆ ಹಳೆಯ ಬೇರುಗಳು ಗಟ್ಟಿಯಾಗಿ ಹಿಡಿದಿಟ್ಟು ಹೊಸ ಮರ ಹೆಮ್ಮರವಾಗಿ ಬೆಳೆವಾಗಿ ಬೆಳೆಯುವಂತೆ ಮಾಡುತ್ತಿರುವುದು ಅವಿಸ್ಮರಣಿಯ.

ಸರೋಜಾ ಸಂತಿ

✦ ✦

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಉಡುಪಿಯಲ್ಲೊಬ್ಬಳು ವೀರಬಾಹುಕಿ' ಎಂಬ ಲೇಖನದಲ್ಲಿ ವನಜ ಎಂಬ ದಿಟ್ಟ ಮಹಿಳೆಯ ವ್ಯಕ್ತಿತ್ವದ ಚಿತ್ರಣ ಬಹಳ ಸೊಗಸಾಗಿ ಮೂಡಿಬಂದಿದೆ. ವನಜರವರ ಬಗ್ಗೆ ಓದಿ ನನಗೆ ಬಹಳ ಸಂತೋಷವಾಯಿತು.

ಮಾನಸದಲ್ಲಿ ಇಂಥ ಮಹಿಳೆಯರ ಬಗ್ಗೆ ಇನ್ನೂ ಹೆಚ್ಚು ಲೇಖನಗಳು ಪ್ರಕಟವಾದರೆ ಪತ್ರಿಕೆ ಇನ್ನೂ ಸೊಗಸಾಗಿ ಮೂಡಿಬರುತ್ತದೆ.

–ಕಾವ್ಯ ಎಸ್.

✦ ✦

ಆತ್ಮೀಯರೇ,

ಮಾನಸದಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಚಿಕ್ಕದಾಗಿದ್ದರು ಚೆನ್ನಾಗಿವೆ. ಯಾವುದಾದರೂ ವಿಷಯದ ಬಗ್ಗೆ ಒಂದು ದೀರ್ಘ ಲೇಖನ ಪ್ರಕಟವಾದರೆ ಸೊಗಸಾಗಿರುತ್ತದೆ.

–ಸುಮ ವಿ.

✦ ✦

ಡಾ. ಎಂ.ಡಿ. ಒಕ್ಕುಂದರು, 'ಸಂವೇದನಶೀಲ ಲೇಖಕಿಯರ ಎರಡು ಕವಿತೆಗಳ ವಿಶ್ಲೇಷಣೆ' ಲೇಖನದಲ್ಲಿ ಸವಿತಾ ನಾಗಭೂಷಣ ಹಾಗೂ ಬಿ.ಎಸ್.ಸುಮಿತ್ರಬಾಯಿಯವರ ವ್ಯಕ್ತಿಚಿತ್ರಣ ನೀಡಿ, ಅವರ ಕವಿತೆಗಳ ಮೂಲಕ, ಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀವಾದಿ ಚಿಂತನೆಯ ಬೇರೆ ಬೇರ ಆಯಾಮಗಳನ್ನು ವಿಶ್ಲೇಷಣಾತ್ಮಕವಾಗಿ ಬಿಂಬಿಸಿದ್ದಾರೆ.

–ಪದ್ಮಜಾ.ಎಸ್

✦ ✦

ಕಳೆದ ತಿಂಗಳ ಸಂಚಿಕೆಯ ಕವಿತೆಗಳು ತುಂಬ ಇಷ್ಟವಾಯಿತು. ಲೇಖನಗಳ ಭಾಷೆ ತುಸು ಸರಳವಾದರೆ 'ನಮ್ಮ ಮಾನಸ' ಹೆಚ್ಚು ಓದುಗರನ್ನು ತಲುಪಬಹುದು ಎಂದು ನನ್ನ ಅನಿಸಿಕೆ.

–ಭಾರತಿ, ಬೆಂಗಳೂರು

✦ ✦

'ನಮ್ಮ ಮಾನಸ' ಓದುಗರಲ್ಲಿ ವಿನಂತಿ

ನಮ್ಮ ಮಾನಸ ಪತ್ರಿಕೆಯನ್ನು ಓದಿ ನಿಮ್ಮ ಅನಿಸಿಕೆಗಳನ್ನು ಇ-ಮೇಲ್ ಅಥವಾ 'ನಮ್ಮ ಮಾನಸ' ವಿಳಾಸಕ್ಕೆ ಕಳುಹಿಸಿ. ಲೇಖನಗಳಿಗೆ ಸಂಬಂಧಪಟ್ಟ ನಿಮ್ಮ ಅಭಿಪ್ರಾಯ ಮತ್ತು ಅನಿಸಿಕೆ ಸ್ವಾಗತಾರ್ಹ.

ಇ-ಮೇಲ್ ಐಡಿ: nammamanasa@gmail.com

ನಮ್ಮ ಮಾನಸ ವಿಳಾಸ:

'ನಮ್ಮ ಮಾನಸ'

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಚಂದಾದಾರರಲ್ಲಿ ಮನವಿ

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಕೂಡಲೇ ನವೀಕರಿಸಿ. ಚಂದಾ ಅವಧಿ ಮುಗಿಯುವ 2–3 ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ದಯವಿಟ್ಟು ಕೂಡಲೇ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ.

–ಸಂಪಾದಕ ಮಂಡಳಿ

ನಿಮ್ಮ ಸ್ನೇಹಿತರನ್ನೂ ಚಂದಾದಾರರನ್ನಾಗಿಸಿ



ಹೆತ್ತವಳು

ನವಮಾಸಗಳೆನ್ನನು ಗರ್ಭದಲ್ಲಿರಿಸಿ ಕಾಪಾಡಿದವಳು
ನವಮಾಸಗಳು ನಾ ಕೊಟ್ಟ ವೇದನೆ ಉಂಡವಳು
ನವಮಾಸ ತನ್ನುದರದಲೆನ್ನ ಭಾರವ ಹೊತ್ತವಳು
ನವಜನ್ಮವ ನೀಡಿ ಜಗತೋರಿದಾಕೆ ಎನ್ನ ಹೆತ್ತವಳು

ತನ್ನ ಪತಿಗಾಗಿ ಸರ್ವಸ್ವವ ತ್ಯಾಗ ಮಾಡಿದವಳು
ತನ್ನ ಸೊಗವ ಮಕ್ಕಳೇಳಿಗೆಯಲಿ ಕಂಡವಳು
ತನ್ನ ಸ್ವಂತಕ್ಕಾಗಿ ಏನೊಂದು ಬಯಸದವಳು
ತನ್ನ ಭವಿಷ್ಯವ ಮಕ್ಕಳಿಗೆ ಧಾರೆ ಎರೆದವಳು

ನಿತ್ಯದಿ ಊಟಕೆ ಧಾನ್ಯವ ತರಲು ಕಷ್ಟಪಟ್ಟವಳು
ಪತಿಯ ಹೆಗಲಿಗೆ ಹೆಗಲು ಕೊಟ್ಟು ದುಡಿದವಳು
ನಿತ್ಯವೂ ಅನ್ಯರ ಆಳಾಗಿ ಕಾಯಕ ಮಾಡಿದವಳು
ಸಾಕಲು ನಮ್ಮನು ಪ್ರತಿಕ್ಷಣವೂ ಹೋರಾಡಿದವಳು

ನಲಿವ ಮಕ್ಕಳ ಮೊಗ ಕಂಡು ಕಾಲ ಕಳೆದವಳು
ನೋವುಗಳ ನೆರಳಲಿ ಹರ್ಷದಿ ಪೊರೆದವಳು
ಬಾಳಿನುದ್ದಕೂ ಚಿನ್ನದೋಲೆಗೆ ಆಸೆಪಡದವಳು
ಹರೆಯದ ಅಂದಚಂದ ಮರೆತ ಖಾದಿಯುಟ್ಟವಳು

ಅಕ್ಷರ ಕಲಿಯದಿದ್ದರೂ ನನಗಕ್ಷರವ ಕಲಿಸಿದವಳು
ಕಷ್ಟವೆಂಬ ಇರುಳಲ್ಲಿ ದಿಕ್ಕುಗಾಣದೇ ನಿಂತವಳು
ಬಾಳ ಇರುಳನು ನೂಕಿ ಬೆಳಕು ತೋರಿದವಳು
ತ್ಯಾಗ, ಪ್ರೀತಿ, ಮಮತೆಯ ಗಣಿಯೆನ್ನ ಹೆತ್ತವಳು

■ **ಪ್ರೊ. ಶಿವಾನಂದ ಬ. ಟವಳಿ**
ಧಾರವಾಡ

Registered with Registrar of Newspapers of India under No. KARKAN/2007/22289
'NAMMA MANASA', REGD.No.: MAG(3) NPP/399(A)/2006-07 **Reg.KA/BGS/2074/2010-12**



ರೇಖೆ ಮತ್ತು ರೆಕ್ಕೆ

ಅಕ್ಕನಿಗೆ ಯಾರೋ ಹೇಳಿದ್ದರಂತೆ
ಅಂಗೈ ರೇಖೆಗಳು ಭವಿಷ್ಯ ನಿರ್ಧರಿಸುತ್ತವೆಂದು
ಪಾಪ ಹುಡುಗಿ...
ಜತನದಿಂದ ಕಾಪಿಟ್ಟ ಕನಸುಗಳನ್ನೆಲ್ಲ
ಅಂಗೈ ರೇಖೆಯಲಿ ಹುದುಗಿಸಿಟ್ಟಳು
ಕನಸುಗಳು ಭದ್ರ
ಬದುಕು ಅದೇ ಹಾದಿಯಲ್ಲಿ....
ಹಾದಿಯಲ್ಲಿ ಸಿಕ್ಕ ನಿನಗೆ ಬದುಕ ಒಪ್ಪಿಸಿದಳು
(ಆದರೆ ಕನಸುಗಳನ್ನಲ್ಲ)
ನಂಬಿ ಕೈ ಹಿಡಿದಳು
ನಿನ್ನ ಆ ಹಿಡಿತದ ಬಿಗಿತಕ್ಕೆ
ಕನಸ ಬಚ್ಚಿಟ್ಟ ರೇಖೆಗಳೇ ಒರೆಸಿ ಹೋದವು
ಈಗ ಉಳಿದದ್ದು ಬರೀ ಬದುಕು
ರೇಖೆಗಳಿಲ್ಲದ ಬದುಕು
ಈ ಅಕ್ಕ, ಅಕ್ಕನೇ ಅಲ್ಲ

■ ಶೀತಲಾ ಭಟ್

Registered
Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು – 560 018